ಎಂ. ಎನ್. ರಾಯ್

ಡಾ: ಶಾಂತಿನಾಥ ದೇಸಾಯಿ



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಎಂ. ಎನ್. ರಾಯ್

ಡಾ. ಶಾಂತಿನಾಥ ದೇಸಾಯಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–೫೬೦೦೦೧

M. N. RAI—Written by Dr. Shanthinatha Desai and Published by Karnataka Sahitya Akademy, Nrupatunga Road, Bangalore-560002.

First Publication 1994 Pages : viii+84

ಮೊದಲನೇ ಮುದ್ರಣ ೧೯೯೪

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಮೂರು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು–೫೬೦ ೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ–ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು

ಒಪ್ಪುವುದಿಲ್ಲ ; ಅವಮಾನವೀಯತೆಯನ್ನು ಘೋಷಿಸುವುದಿಲ್ಲ. ಆದರ ಆದ್ಯತೆಗಳಲ್ಲಿ ಅಂತರವಿರಬಹುದು ; ಚಿಂತನೆಯಲ್ಲಿ ವೈರುಧ್ಯಗಳಿರ ಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತ ನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇ ಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯು ವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆ ಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪ ಬರಗೂರು ರಾಮಚಂದ್ರಪ್ಪ
ಬೆಂಗಳೂರು ಅಧ್ಯಕ್ಷರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ಡಾ. ಶಾಂತಿನಾಥ ದೇಸಾಯಿ

ಎಂ. ಎನ್. ರಾಯ್

ಅಧ್ಯಾಯ ೧

ಉಗ್ರ ರಾಷ್ಟ್ರೀಯವಾದದಿಂದ ಪ್ರಾರಂಭ

ಎಂ. ಎನ್. ರಾಯರೆಂದೇ ಪ್ರಸಿದ್ಧರಾದ ಮಾನವೇಂದ್ರನಾಥ ರಾಯರ ಹೊಟ್ಟಿಲ ಹೆಸರು ನರೇಂದ್ರನಾಥ ಭಟ್ಟಾಚಾರ್ಯ. ಅವರ ಜನ್ಮ ಬಂಗಾಲದ ೨೪ ಪರಗಣೆಗಳ ಜಿಲ್ಲೆಯ ಅರಬೆಲಿಯಾ ಎಂಬ ಒಂದು ಹಳ್ಳಿಯಲ್ಲಿ. ಅವರ ಜನ್ಮ ತಾರೀಖಿನ ಬಗ್ಗೆ ಸ್ವಲ್ಪ ವಿವಾದವಿದ್ದರೂ ಅದೀಗ ೨೨ ಮಾರ್ಚ್ ೧೮೮೭ ಎಂದು ನಿರ್ಣಯಿಸಲಾಗಿದೆ. ಅವರ ತಂದೆ ದೀನಬಂಧು ಭಟ್ಟಾಚಾರ್ಯ ಸಂಸ್ಕೃತ ಶಿಕ್ಷಕರಾಗಿದ್ದು, ಕ್ಷೇಪುತೇಶ್ವರಿ ದೇವಿಯ ಮಂದಿರದ ಪೂಜಾರಿಯಾಗಿದ್ದರು. ರಾಯ್ ಅವರು ತಂದೆಯಿಂದ ಪಡೆದದ್ದೇನೆಂದರೆ–ಸಂಸ್ಕೃತ ಪ್ರಭುತ್ವ, ತ್ಯಾಗ ವೃತ್ತಿ ಮತ್ತು ನಿಷ್ಠಾವಂತಿಕೆ. ತಾಯಿಯ ಕಕ್ಕ ಶಿವನಾಥಶಾಸ್ತ್ರಿ ಬ್ರಾಹ್ಮೋ ಪಂಥದ ದೀಕ್ಷೆ ತೆಗೆದುಕೊಂಡು, ಬಂಡುಗಾರಿಕೆಯಿಂದ ತಮ್ಮ ಯಜ್ಞೋಪವೀತವನ್ನು ಹರಿದೊಗೆದಂಥವರು. ಶಾಸ್ತ್ರೀಯವರು ಒಂದು ಗುಪ್ತ ಕ್ರಾಂತಿಕಾರಕ ಸಂಘವನ್ನು ಕಟ್ಟಿ, ಸಾಮಾಜಿಕ ಬಂಡುಗಾರಿಕೆಯ ಜೊತೆಗೆ ರಾಜಕೀಯ ಬಂಡುಗಾರಿಕೆಯನ್ನು ಪುರಸ್ಕರಿಸಿದವರು. ಅವರೂ ಚಿಕ್ಕ ನರೇಂದ್ರನಾಥನ ಮೇಲೆ ಅಪರೋಕ್ಷವಾಗಿ ಪ್ರಭಾವ ಬೀರಿದರು.

ಚಾಂಗ್ರಿಪೋತವೆಂಬ ಊರಲ್ಲಿ ನರೇಂದ್ರನಾಥನ ವಿದ್ಯಾಭ್ಯಾಸ ನಡೆದಾಗಲೇ ಅವನ ಮೇಲೆ ಸ್ವಾಮಿ ರಾಮತೀರ್ಥ ಹಾಗೂ ಸ್ವಾಮಿ

ವಿವೇಕಾನಂದರ ಪ್ರಭಾವ ಬಿದ್ದು ಆತ ಆದರ್ಶವಾದದ ಮಾರ್ಗ ಹಿಡಿದ. ಎಷ್ಟೋ ಸಲ ಕಾಂಗ್ರಿಪೋತದಿಂದ ವಿವೇಕಾನಂದರ ಬೇಲೂರ ಮಠಕ್ಕೆ ಮೂವತ್ತು ಮೈಲುಗಳ ದಾರಿಯನ್ನು ಆತ ನಡೆದೇ ಹೋಗುತ್ತಿದ್ದ. ಆಜಾನುಬಾಹು ತರುಣನಾಗಿ ಬೆಳೆಯುತ್ತಿದ್ದ ನರೇನ್‌ನ ಮುಖ್ಯ ಹವ್ಯಾಸವೆಂದರೆ ಮೈಲುಗಟ್ಟಲೆ ನಡೆಯುವುದು, ಅರಣ್ಯ-ಪರ್ವತ-ನದಿ ಏನು ಬಂದರೂ ಸಾಹಸದಿಂದ ದಾಟುವದು. ಇಂಥ ಹಸಿ ತರುಣನಿಗೆ ಸ್ಫೂರ್ತಿ ಕೊಟ್ಟ ಗ್ರಂಥವೆಂದರೆ ಬಂಕಿಮಚಂದ್ರರ 'ಆನಂದ ಮಠ.' ೧೮೮೨ರಲ್ಲಿ ಪ್ರಕಟಗೊಂಡ ಈ ಕಾದಂಬರಿ–ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಸಶಸ್ತ್ರ ಹೋರಾಟ ನಡೆಸುವ ಸಂತಾನರ, ಅವರಲ್ಲೂ ಅವರ ನಾಯಕ ಸತ್ಯಾನಂದನ, ಹೃದಯ ಬಡಿದೆಬ್ಬಿಸುವ ಕಥೆ-ನರೇಂದ್ರನಾಥನನ್ನು ಅದೇ ರೀತಿಯ ಸಶಸ್ತ್ರ ಹೋರಾಟಕ್ಕಾಗಿ ಪ್ರೇರೇಪಿಸಿತು.

೧೯೦೫ರ ಸುಮಾರಿಗೆ ಬಂಗಾಲದ ವಿಭಜನೆಯ ವಿರುದ್ಧ ಪ್ರಾರಂಭವಾದ ಉಗ್ರ ಚಳುವಳಿಯು ಇನ್ನೂ ಹುಡುಗನಾದ ನರೇಂದ್ರನ ಹಾಗೂ ಅವನ ಸ್ನೇಹಿತರ ಮನಸ್ಸನ್ನು ಪ್ರಕ್ಷುಬ್ಧಗೊಳಿಸಿತು. ತಮ್ಮ ಊರಲ್ಲಿ ಸುರೇಂದ್ರನಾಥ ಬ್ಯಾನರ್ಜಿಯವರ ಭಾಷಣದ ಕಾರ್ಯಕ್ರಮವನ್ನು ಯೋಜಿಸಿದ್ದೇ ರಾಯ್ ಅವರ ಪ್ರಪ್ರಥಮ ರಾಜಕೀಯ ಕೃತಿ. ಅದಕ್ಕೆ ಶಿಕ್ಷೆಯೆಂದು ನರೇಂದ್ರನನ್ನು ಶಾಲೆಯಿಂದ ತೆಗೆದುಹಾಕಲಾಯಿತು. ಮುಂದೆ ಮ್ಯಾಟ್ರಿಕ್ ಪರೀಕ್ಷೆಗೆ ಕೂಡ್ರಲು ಹೇಗೋ ಪರವಾನಿಗೆ ಸಿಕ್ಕಿತು-ನಂತರ ಆತ ಕಲ್ಕತ್ತೆಯ ನ್ಯಾಶನಲ್ ಕಾಲೇಜನ್ನು ಸೇರಿದ. ಆದರೆ ಅವನ ಅಸ್ವಸ್ಥ ಮನಸ್ಸಿಗೆ ಕಾಲೇಜ್ ಶಿಕ್ಷಣದಲ್ಲಿ ನೆಮ್ಮದಿ ಸಿಗಲಿಲ್ಲ. ದೇಶದ ಭವಿಷ್ಯ ಹಾಗೂ ಅದಕ್ಕಾಗಿ ಮಾಡಬೇಕಾದ ತ್ಯಾಗ-ಇವೇ ಅವನ ಮನಸ್ಸಿನ ಮುಖ್ಯ ಕಾಳಜಿಗಳಾಗಿ, ಆತ ಸ್ವಾತಂತ್ರ್ಯ–ಸಂಗ್ರಾಮದಲ್ಲಿ ಧುಮುಕುವ ನಿರ್ಧಾರ ಮಾಡಿದ. ಹದಿನಾಲ್ಕು ವರ್ಷದ ನರೇಂದ್ರ ಒಂದು ಕ್ರಾಂತಿಕಾರಕ ಗುಂಪನ್ನು ಸೇರಿ

ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡಲು, ಪ್ರಸಂಗ ಬಂದರೆ ತನ್ನನ್ನೇ ಬಲಿದಾನ ಕೊಡಲು ಪಣತೊಟ್ಟ. ಅಲ್ಲಲ್ಲಿ ಕೆಲಸ ಮಾಡುತ್ತಿದ್ದ ಕ್ರಾಂತಿಕಾರೀ ಗುಂಪುಗಳು ಒಂದುಗೂಡಿ, ಜತಿನ ಮುಖರ್ಜಿ ಎಂಬ ಅತ್ಯಂತ ಪ್ರಖರ, ನಿಷ್ಠಾವಂತ ನಾಯಕನ ಮಾರ್ಗದರ್ಶನದಲ್ಲಿ ಕೆಲಸ ಮಾಡತೊಡಗಿದವು. ಒಂದೆರಡು ವರ್ಷಗಳಲ್ಲಿಯೇ ನರೇಂದ್ರನು ಜತಿನ ಮುಖರ್ಜಿಯ ಬಲಗೈಯಾದ. ಕ್ರಾಂತಿಕಾರಿ, ಪತ್ರಿಕೆಯಾದ 'ಯುಗಾಂತರ'ದಲ್ಲಿ ಆತ ವಿಪುಲವಾದ ಲೇಖನ ಮಾಡಿದ, 'ಮಾಯೆರ ಡಾಕ' ('ಮಾತೆಗೆ ಆವಾಹನೆ') ಎಂಬ ಪುಸ್ತಕವನ್ನೂ ಬರೆದ. ಹೀಗೆ ಪಿಸ್ತೂಲಿನಿಂದ ಗುಂಡು ಹಾರಿಸುವ ಹಾಗೂ ಬಾಂಬ್ ತಯಾರಿಸುವ ಶಿಕ್ಷಣದಲ್ಲಿ ಪಾರಂಗತನಾಗುತ್ತಿದ್ದಂತೆ, ಲೇಖಣಿಯನ್ನು ಖಡ್ಗದಂತೆ ಉಪಯೋಗಿಸುವ ಕಲೆಯಲ್ಲಿಯೂ ಪಾರಂಗತನಾಗತೊಡಗಿದ.

ಜತಿನ ಹಾಗೂ ನರೇಂದ್ರ, ರಾಜಕೀಯ ದರೋಡೆ ಮಾಡುವದರಲ್ಲಿಯೂ ಪ್ರವೀಣರಾಗಿದ್ದರು. ಇಂಥ ಒಂದು ದರೋಡೆಯಲ್ಲಿ ನರೇಂದ್ರ ಸಿಕ್ಕುಬಿದ್ದ. ಅವನ ಬದಲಾಗಿ ಮತ್ತೊಬ್ಬನನ್ನು ಜೇಲಿಗೆ ಕಳಿಸಿ ಜತಿನ್ ನರೇಂದ್ರನನ್ನು ಬಿಡಿಸಿಕೊಂಡ....ಇಬ್ಬರೂ ಕೂಡಿ ಸಶಸ್ತ್ರ ಬಂಡಾಯದ ಪೂರ್ವ ಸಿದ್ಧತೆಯನ್ನು ೧೯೧೦ ರಿಂದ ೧೯೧೪ರ ತನಕ ಅತ್ಯಂತ ಜೋರಿನಿಂದ ಮಾಡಿದರು. ೧೯೧೪ ರಿಂದ ಮೊದಲನೆಯ ಜಾಗತಿಕ ಯುದ್ಧದ ಗಾಳಿ ಬೀಸತೊಡಗಿದ ನಂತರ ಜರ್ಮನಿಯಿಂದ ಶಸ್ತ್ರಾಸ್ತ್ರಗಳನ್ನು ತರಿಸಿಕೊಂಡು ಬ್ರಿಟಿಷರ ವಿರುದ್ಧ ಬಂಡೆದ್ದು ಬಂಗಾಲದಲ್ಲಿ ತಮ್ಮ ಪ್ರಭುತ್ವ ಪ್ರಸ್ಥಾಪಿಸುವ ಮಹಾಯೋಜನೆ ಹೂಡಲಾಯಿತು. ಜರ್ಮನಿಯ ಜೊತೆ ಯುರೋಪದಲ್ಲಿ ಯುದ್ಧ ಮಾಡಬೇಕಾಗಿ ಬಂದದ್ದರಿಂದ ಬ್ರಿಟಿಶರಿಗೆ ಹಿಂದುಸ್ಥಾನಕ್ಕೆ ಸೈನ್ಯ ಕಳಿಸಲು ಶಕ್ಯವಾಗಲಿಕ್ಕಿಲ್ಲವಾದ್ದರಿಂದ ಬಂಡಾಯಕ್ಕೆ ಒಳ್ಳೆ ಸುಸಂಧಿ! ಈ ಸಂದರ್ಭದಲ್ಲಿ ಜರ್ಮನಿಯೂ ಭಾರತೀಯ ಸ್ವಾತಂತ್ರ್ಯ ಸೈನಿಕರಿಗೆ

ಶಸ್ತ್ರಗಳನ್ನು ಒದಗಿಸಲು ಒಪ್ಪಿಕೊಂಡು, ಜಾವಾದ ಡಚ್ ಈಸ್ಟ್ ಇಂಡಿಯಾ ಕಂಪನಿಯು ಮುಖಾಂತರ ಶಸ್ತ್ರಾಸ್ತ್ರಗಳನ್ನು ಹಡಗಿನಿಂದ ಕಳಿಸುವ ವ್ಯವಸ್ಥೆಯಾಯಿತು. ಜತಿನ ಮುಖರ್ಜಿ ನರೇಂದ್ರನಾಥನನ್ನು ಜಾವಾದ ಬಟಾವಿಯಾ (ಜಕಾರ್ತಾ) ಬಂದರಕ್ಕೆ ಕಳಿಸಿಕೊಟ್ಟ. ನರೇಂದ್ರ ಫಾದರ್ ಸಿ. ಮಾರ್ಟಿನ್‌ನ ವೇಷದಲ್ಲಿ ಬಟಾವಿಯಾಕ್ಕೆ ಹೋಗಿ ಜರ್ಮನ್ ಅಧಿಕಾರಿಗಳೊಡನೆ ಸಂಪರ್ಕ ಸಾಧಿಸಿ, ಎಲ್ಲ ವ್ಯವಸ್ಥೆ ಮಾಡಿ ಭಾರತಕ್ಕೆ ಸಾಕಷ್ಟು ಹಣದೊಂದಿಗೆ ಮರಳಿದ. ಆದರೆ ಯೋಜಿಸಿದಂತೆ ಶಸ್ತ್ರಾಸ್ತ್ರಗಳ ಹಡಗು ಬಂಗಾಲದ ದಂಡೆಗೆ ಬರಲೇ ಇಲ್ಲ. ನರೇಂದ್ರನಾಥ ಇದರಿಂದ ಧೈರ್ಯಗುಂದಲಿಲ್ಲ. ತಾನು ಜಪಾನಿಗೆ ಹೋಗಿ, ಅಲ್ಲಿಂದ ಚೀನದಲ್ಲಿದ್ದ ಜರ್ಮನ್ ಅಂಬ್ಯಾಸಡರನನ್ನು ಭೆಟ್ಟಿಯಾಗಿ ಇನ್ನೊಮ್ಮೆ ಪ್ರಯತ್ನ ಮಾಡಲು ಉದ್ಯುಕ್ತನಾದ. ಜತಿನ್ ಮುಖರ್ಜಿಯ ಆಶೀರ್ವಾದ ಪಡೆದು ಆತ ಚೀನ ಸೇರಿ ಜರ್ಮನ್ ಅಂಬ್ಯಾಸಡರನನ್ನು ಭೆಟ್ಟಿಯಾಗಿ ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಧನ ಸಹಾಯ ಕೇಳಿದ. ಆತನಿಗೆ ಹಣ ಸಿಗಲಿಲ್ಲ. ಅಷ್ಟರಲ್ಲಿ ಜತಿನಮುಖರ್ಜಿಯನ್ನು ಬ್ರಿಟಿಷರು ಬೆನ್ನಟ್ಟಿ ಕೊಂದು ಕ್ರಾಂತಿಕಾರಿ ಚಳುವಳಿಯನ್ನು ಉಧ್ವಸ್ತಗೊಳಿಸಿದ ಸುದ್ದಿ ಹತ್ತಿ, ನರೇಂದ್ರನಾಥ ಭಟ್ಟಾಚಾರ್ಯನು ಫಾದರ್ ಮಾರ್ಟಿನ್‌ನ ವೇಷದಲ್ಲಿ ಅಮೇರಿಕೆಗೆ ಪ್ರಯಾಣ ಬೆಳೆಸಿದ. ೧೯೧೬ ಜೂನ್ ತಿಂಗಳಲ್ಲಿ ಸಾನ್ ಫ್ರಾನ್ಸಿಸ್ಕೋ ನಗರಕ್ಕೆ ಹೋಗಿ ತಲುಪಿದ. ಆತ ಫಾದರ್ ಮಾರ್ಟಿನ್ ಅಲ್ಲ, ಜರ್ಮನಿಯ ಗುಪ್ತಚಾರನಿದ್ದಾನೆ, ಕ್ರಾಂತಿಕಾರೀ ಬ್ರಾಹ್ಮಣನಿದ್ದಾನೆ ಇತ್ಯಾದಿಯಾಗಿ ಅಲ್ಲಿಯ ವರ್ತಮಾನ ಪತ್ರಗಳಲ್ಲಿ ಆತನ ಬಗ್ಗೆ ಬರೆಯಲಾಗಿತ್ತು. ಅದ್ದರಿಂದ ಅಲ್ಲಿಂದ ಕೂಡಲೇ ಸಮೀಪದ ಪಾಲೋ ಅಲ್ತೋ ನಗರದಲ್ಲಿಯ ಸ್ಟ್ಯಾನ್‌ಫರ್ಡ್ ಯುನಿವರ್ಸಿಟಿಗೆ ಹೋಗಿ ಅಲ್ಲಿದ್ದ ಭಾರತೀಯ ವಿದ್ಯಾರ್ಥಿಗಳಲ್ಲಿ ಆಶ್ರಯ ಪಡೆದ. ಬಂಗಾಲದ ಕ್ರಾಂತಿಕಾರೀ ಸ್ನೇಹಿತನ ತಮ್ಮನಾದ ಧನಗೋಪಾಲ ಮುಖರ್ಜಿ ನರೇಂದ್ರನಾಥನಿಗೆ ಆಶ್ರಯ ಕೊಟ್ಟ.

ಆತನಿಗೆ ಹೆಸರು ಬದಲಿಸಲು ಸೂಚಿಸಿದ. ಆ ಸೂಚನೆಯ ಮೇರೆಗೆ ನರೇಂದ್ರನಾಥ ಭಟ್ಟಾಚಾರ್ಯ ಉರ್ಫ್ ಫಾದರ್ ಚಾರ್ಲ್ಸ್ ಎ. ಮಾರ್ಟಿನ್ 'ಮಾನವೇಂದ್ರನಾಥ ರಾಯ್'ನಾದ. ಈ ಹೊಸ ಹೆಸರಿನೊಡನೆ ಆತನ ಪುನರ್ಜನ್ಮವೂ ಆಯಿತು.

ಮಾನವೇಂದ್ರನಾಥ ರಾಯ್ ಅವರ ಮನಸ್ಸಿನಲ್ಲಿ ಇನ್ನೂ ಜರ್ಮನಿಗೆ ಹೋಗಿ ಅಲ್ಲಿಯ ಮುಖಂಡರನ್ನು ಪ್ರತ್ಯಕ್ಷ ಕಂಡು ಭಾರತದ ಸ್ವಾತಂತ್ರ್ಯ ಹೋರಾಟಕ್ಕಾಗಿ ಶಸ್ತ್ರಾಸ್ತ್ರಗಳ ವ್ಯವಸ್ಥೆ ಮಾಡುವ ಕನಸು ಇದ್ದೇ ಇತ್ತು. ಆದರೆ ಮೊದಲನೇ ಮಹಾಯುದ್ಧ ಜೋರಿನಲ್ಲಿ ನಡೆದದ್ದರಿಂದ ರಾಯ್ ಅವರಿಗೆ ಅಮೇರಿಕೆಯಿಂದ ಹೊರಬೀಳಲು ಸಾಧ್ಯವಾಗಲಿಲ್ಲ. ಸ್ಟಾನ್‌ಫರ್ಡ್ ಯುನಿವ್ಹರ್ಸಿಟಿಯಲ್ಲಿಯ ವಾಸ್ತವ್ಯದ ಮೂಲಕ ಎರಡು ಸಂಗತಿಗಳು ಗಮನಿಸಿದವು: ಒಂದು, ಸಮಾಜ ವಾದೀ, ಕಮ್ಯುನಿಸ್ಟ್, ಅನಾರ್ಕಿಸ್ಟ್, ಶಾಂತತಾವಾದಿ ಇತ್ಯಾದಿ ಹಲ ವಾರು ಭಿನ್ನ ಭಿನ್ನ ವಿಚಾರ ಪ್ರಣಾಲಿಯ ವಿದ್ಯಾರ್ಥಿಗಳ ಸಂಪರ್ಕ ಬಂದದ್ದರಿಂದ, ರಾಯ್ ಅವರ ಮನಸ್ಸು ರಾಜಕೀಯ ಕ್ರಾಂತಿಯ ಜೊತೆ ಸಾಮಾಜಿಕ ಕ್ರಾಂತಿಯೂ ಅವಶ್ಯ ಎಂಬ ಯೋಚನೆಯತ್ತ ತಿರುಗಿತು. ಎರಡು, ರಾಯ್ ಅವರ ಧೀಮಂತ ಕ್ರಾಂತಿಕಾರೀ ವ್ಯಕ್ತಿತ್ವಕ್ಕೆ ಮಾರುಹೋದ ಅದೇ ವಿಶ್ವವಿದ್ಯಾಲಯದ ಪದವ್ಯುತ್ತರ ಅಭ್ಯಾಸ ಮಾಡುತ್ತಿದ್ದ ಈವ್ಹಲಿನ್ ಟ್ರೆಂಟ್ ಎಂಬ ಉಗ್ರವಾದಿ ಹುಡುಗಿಯೊಡನೆ ರಾಯ್ ಅವರ ಸಂಬಂಧ ಬೆಳೆದು ಅವರಿಬ್ಬರೂ ಲಗ್ನವಾದರು. (ಅವರು ಮುಂದೆ, ೧೯೨೬ರಲ್ಲಿ ಅಂದರೆ ಸುಮಾರು ಹತ್ತು ವರ್ಷಗಳ ನಂತರ ವಿವಾಹ ವಿಚ್ಛೇದನ ಮಾಡಿಕೊಂಡರು.) ಇಬ್ಬರೂ ಕೂಡಿ ಸಾಮಾಜಿಕ ಕ್ರಾಂತಿಯ ಬಗ್ಗೆ ಸಹಚಿಂತನ ಮಾಡಿದರು ಹಾಗೂ ಎರಡು ಪುಸ್ತಕ ಬರೆದರು. ಸ್ಟಾನ್‌ಫರ್ಡ್ ಯುನಿವ್ಹರ್ಸಿಟಿ ಬಿಟ್ಟು ಇಬ್ಬರೂ ನ್ಯೂಯಾರ್ಕ್ ಸೇರಿದರು. ಅಲ್ಲಿಂದ ಅವನ ಬೆನ್ನ ಹಿಂದೆ

ಇದ್ದಂಥ ಅಮೇರಿಕೆಯ ಪೋಲಿಸರಿಂದ ತಪ್ಪಿಸಿಕೊಳ್ಳಲು ರಾಯ್ ಅವರು ಅಮೇರಿಕೆ ಬಿಟ್ಟು ಮೆಕ್ಸಿಕೋಕ್ಕೆ ಜಾರಿ ಹೋದರು. ಮೆಕ್ಸಿಕೋದಿಂದ ಜರ್ಮನಿಗೆ ಹೋಗುವ ಯೋಜನೆ ಅವರ ಮನಸ್ಸಿನಲ್ಲಿದ್ದರೂ ರಾಯ್ ಅವರಿಗೆ ಈಗ ಆ ಯೋಜನೆಯಲ್ಲಿ ಆಸ್ಥೆ ಹೋದಂತಿತ್ತು. ಮಾರ್ಕ್ಸ್‌ನ ಹೊಸ ವಿಚಾರಧಾರೆಯ ಪ್ರಭಾವದ ಮೂಲಕ ರಾಯ್ ಅವರ ಮನಸ್ಸು ಸಂಪೂರ್ಣ ಸಾಮಾಜಿಕ ಕ್ರಾಂತಿಯತ್ತ ಹೊರಳಿತ್ತು. ಸದ್ಯ ಅವರಿಗೆ ಮೆಕ್ಸಿಕೋದಲ್ಲಿಯೇ ಕೆಲವು ದಿನ ಇರುವ ಇಚ್ಛೆಯಾಯಿತು.

ರಾಷ್ಟ್ರವಾದದಿಂದ ಸಮಾಜವಾದದತ್ತ ಸಾಗಿದ ಅವರ ವೈಚಾರಿಕ ಪ್ರವಾಸವೆಂದರೆ ಅವರ ಜೀವನದಲ್ಲುಂಟಾದ ಒಂದು ಕ್ರಾಂತಿಯೆಂದೇ ಹೇಳಬೇಕು. ಈ ಸಂದರ್ಭದಲ್ಲಿ ರಾಯ್ ಅವರಿಗೆ ಜತೀಂದ್ರನಾಥ ಮುಖರ್ಜಿಯ ಮೃತ್ಯುವಿನ ಬಗ್ಗೆ ಸೇಡು ತೀರಿಸಿಕೊಳ್ಳುವ ಇಚ್ಛೆ ಇದ್ದರೂ ಆ ಇಚ್ಛೆಯ ಜೊತೆ ಒಂದು ಹೊಸ ಧ್ಯೇಯದ ಸ್ವಪ್ನವಿತ್ತು. ಅವರೊಮ್ಮೆ ತಮ್ಮ ಬಂಗಾಲದ ಸಹಕಾರಿಗಳಿಗೆ ಪತ್ರ ಬರೆದರು : "ಕೆಲವು ಕಾಲದ ನಂತರ ನಾನು ಹಿಂದುಸ್ಥಾನಕ್ಕೆ ಮರಳಿ ಬರುವಾಗ ಬರೀ ಶಸ್ತ್ರಾಸ್ತ್ರಗಳನ್ನಷ್ಟೆ ತರುವದಿಲ್ಲ. ಜೊತೆಗೆ ಕ್ರಾಂತಿಯ ಒಂದು ಉಜ್ವಲ ಕಲ್ಪನೆಯನ್ನು ತೆಗೆದುಕೊಂಡೇ ಭಾರತದಲ್ಲಿ ಕಾಲಿರಿಸುವೆ."

ಹಾಗೆ ಮಾನವೇಂದ್ರನಾಥ ರಾಯ್ ಅವರಿಗೆ ಮಾರ್ಕ್ಸ್‌ನ ಕಮ್ಯುನಿಜಮ್ಮಿನ ಯೋಜನೆಗಳನ್ನು ಒಪ್ಪಿಕೊಳ್ಳುವಲ್ಲಿ ಸಾಕಷ್ಟು ಮಾನಸಿಕ ಘರ್ಷಣೆಯಾಯಿತೆಂಬುವದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಬಂಕಿಮಚಂದ್ರ ಹಾಗೂ ವಿವೇಕಾನಂದರ ವಿಚಾರಧಾರೆಯಲ್ಲಿ ಸಿದ್ಧವಾದ ಅವರ ಕ್ರಾಂತಿಕಾರೀ ಮನಸ್ಸಿಗೆ ಮಾರ್ಕ್ಸ್‌ನ ಸಂಪೂರ್ಣ ಭೌತಿಕವಾದಿ ವಿಚಾರಸರಣಿಯನ್ನು ಸ್ವೀಕರಿಸುವದು ಕಠಿಣವಾಯಿತು. ಮೆಕ್ಸಿಕೋದ ವಾಸ್ತವ್ಯದಲ್ಲಿ ಕಮ್ಯುನಿಸ್ಟ್ ಮುಖಂಡರಲ್ಲೊಬ್ಬನಾದ ಬೊರೊಡಿನ್‌ನ ಸಹವಾಸದಲ್ಲಿ ಮಾರ್ಕ್ಸ್‌ವಾದದ ಆಳವಾದ ಅಭ್ಯಾಸ ಮಾಡಿದ ನಂತರ

ರಾಯ್ ಅವರಲ್ಲಿ ನಿಜವಾದ ಪರಿವರ್ತನೆಯಾಯಿತೆನ್ನಬೇಕು. ಆಗಲೇ ರಾಯ್ ಅವರಿಗೆ ಬರೇ ರಾಜಕೀಯ ಸ್ವಾತಂತ್ರ್ಯದಿಂದ ರಾಷ್ಟ್ರದ ಉದ್ಧಾರವಾಗಲಾರದು, ಶೋಷಿತರಾದ ಸರ್ವಸಾಮಾನ್ಯ ಜನರ ಸ್ವಾತಂತ್ರ್ಯವೇ ನಿಜವಾದ ಗುರಿ ಎಂಬ ಮಾತು ಮನದಟ್ಟಾಯಿತು. ●

ಅಧ್ಯಾಯ ೨

ಮೆಕ್ಸಿಕೋದಲ್ಲಿ ಮಾರ್ಕ್ಸ್‌ವಾದದ ಪ್ರಯೋಗ

ಮಾನವೇಂದ್ರನಾಥ ರಾಯ್ ಅವರ ಸ್ವಭಾವದ ಒಂದು ಮುಖ್ಯ ಗುಣವೆಂದರೆ ಯಾವುದೇ ಯೋಜನೆ ಅವರಿಗೆ ಮನದಟ್ಟಾದರೆ ತೀರಿತು, ಅದನ್ನು ನಿಷ್ಠೆಯಿಂದಲೂ ಏಕಾಗ್ರತೆಯಿಂದಲೂ ಕಾರ್ಯರೂಪದಲ್ಲಿ ತರಲು ಸಿದ್ಧರಾಗಿಬಿಡುತ್ತಿದ್ದರು. ಜತಿನ್ ಮುಖರ್ಜಿಯ ಸಹವಾಸದಲ್ಲಿ ಹುರಿಗೊಂಡಂಥ ಅವರ ಸ್ವಭಾವದ ಈ ಅಸಾಧಾರಣತೆ ಅವರ ಇಡಿಯ ಜೀವನ ಚರಿತ್ರೆಯಲ್ಲಿ ಎದ್ದು ಕಾಣುವಂತಹ ಸಂಗತಿ. ಮೆಕ್ಸಿಕೊ ತಮ್ಮ ಹೊಸ ಕಾರ್ಯಕ್ಷೇತ್ರವೆಂದು ಸದ್ಯ ನಿಗದಿ ಮಾಡಿದ ನಂತರ ರಾಯ್ ಅವರು ಪ್ರಥಮವಾಗಿ ಮೆಕ್ಸಿಕೊ ದೇಶದ ಪರಿಸ್ಥಿತಿಯನ್ನು ಅಭ್ಯಾಸ ಮಾಡಿದರು. ತಮ್ಮ ಹೊಸ ಮಾರ್ಕ್ಸ್‌ವಾದಿ ಪ್ರಯೋಗಕ್ಕೆ ಉಪಯೋಗವಾಗುವಂತಹ ಜನರನ್ನು ಶೋಧಿಸಿದರು. ಮುಖ್ಯ. ಕಾಮಗಾರ ಸಂಘಟನೆಯೊಂದಿಗೆ ಹಾಗೂ ಸಮಾಜವಾದಿ ಜನರೊಡನೆ ಸಂಪರ್ಕ ಬೆಳೆಸಿದರು. ಈಗಾಗಲೇ ತಮ್ಮ ಪ್ರಿಯ ಸಾಧನವಾದ ಲೇಖಣಿಯ ಉಪಯೋಗದಿಂದ ಲೋಕ ಜಾಗೃತಿಯ ಕೆಲಸ ಮಾಡಲು ನಿರ್ಧರಿಸಿದರು.

ಮೆಕ್ಸಿಕೋದ ಪ್ರೆಸಿಡೆಂಟ್ ಕರಾಂಝಾ ಅವರನ್ನು ಭೆಟ್ಟಿಯಾಗಬೇಕೆಂದು ರಾಯ್ ನಿರ್ಧರಿಸಿ ಕರಾಂಝಾ ಅವರ ಅಳಿಯನಾದ ಸಂರಕ್ಷಣ ಮಂತ್ರಿಯನ್ನು ಭೆಟ್ಟಿಯಾದರು. ಆಗಲೇ ಸರಕಾರಕ್ಕೆ ರಾಯ್ ಅವರ

ವಾಸ್ತವ್ಯದ ಬಗ್ಗೆ ಮಾಹಿತಿ ಇತ್ತು. ಸಂರಕ್ಷಣ ಮಂತ್ರಿಯವರು ರಾಯ್ ಅವರಿಗೆ ಆಶ್ವಾಸನೆ ಕೊಟ್ಟು, "ಮೆಕ್ಸಿಕೊ ನಿಮ್ಮದೇ ಮನೆಯೆಂದು ತಿಳಿಯಿರಿ ಹಾಗೂ ಸ್ವಚ್ಛಂದವಾಗಿ ಇಲ್ಲಿ ವಾಸ ಮಾಡಿರಿ. ನಿಮ್ಮ ಸಲಹೆ-ಸಹಕಾರ ನಮಗೆ ಬೇಕು", ಎಂದು ಹೇಳಿದರು.

ರಾಯ್ ಅವರ ಲೇಖನಗಳನ್ನು ಓದಿದಂಥ 'ಎಲ್. ಪ್ಯೂಬ್ಲೊ' ಎಂಬ ವರ್ತಮಾನ ಪತ್ರದ ಸಂಪಾದಕರು ಅವರಿಗೆ ಭಾರತದಲ್ಲಿದ್ದ ಬ್ರಿಟಿಷ್ ರಾಜ್ಯ ಕಾರಭಾರದ ಬಗ್ಗೆ ಲೇಖನ ಮಾಲೆಯನ್ನು ಬರೆಯಲು ಆಹ್ವಾನಿಸಿದರು. ಆ ಲೇಖನಗಳಲ್ಲಿ ರಾಯ್ ಅವರು ಭಾರತದಲ್ಲಿ ಹಲವಾರು ಸಂಘರ್ಷಗಳು ನಡೆದ ಬಗ್ಗೆ ಬರೆದರು : ವರ್ಗ ಕಲಹದ ಜೊತೆಗೆ ಭಾರತದ ಜನತೆಯನ್ನು ಹಿಂಸಿಸುವ ದುಷ್ಟಶಕ್ತಿಯೆಂದರೆ ಬ್ರಿಟಿಷ್ ಸಾಮ್ರಾಜ್ಯವಾದ. ಬ್ರಿಟಿಷ್ ಸಾಮ್ರಾಜ್ಯವಾದದಿಂದ ಸ್ವಾತಂತ್ರ್ಯ ಪಡೆಯಬೇಕಲ್ಲದೆ ಭಾರತದಲ್ಲಿ ಮೊದಲಿನಿಂದಲೂ ಬೇರು ಬಿಟ್ಟ ಸರಂಜಾಮಿಶಾಹಿಯಿಂದಲೂ ಜನತೆಯನ್ನು ಬಿಡುಗಡೆ ಮಾಡ ಬೇಕು. ಬ್ರಿಟಿಷ್ ಸಾಮ್ರಾಜ್ಯವಾದ ನಿಂತದ್ದೇ ಭಾರತದ ಸರಂಜಾಮು ಶಾಹಿಯ ಮೇಲೆ–ಇತ್ಯಾದಿಯಾಗಿ ರಾಯ್ ತಮ್ಮ ಲೇಖನಗಳಲ್ಲಿ ಭಾರತೀಯ ಶೋಷಣೆಯ ಚಕ್ರವ್ಯೂಹವನ್ನು ವಿಶ್ಲೇಷಿಸಿದರು.

ಸ್ಪೇನ್ ಸಾಮ್ರಾಜ್ಯಶಾಹಿಯಿಂದ ಆದೇ ಬಿಡುಗಡೆ ಹೊಂದಿದ ಮೆಕ್ಸಿಕೋದ ಸಮಾಜವಾದಿಗಳಿಗೆ ರಾಯ್ ಅವರ ಲೇಖನಗಳು ಬಹಳ ಸೇರಿದವು. ಸಮಾಜವಾದಿ ಪಕ್ಷದ ಕಾರ್ಯಕಾರಿ ಮಂಡಳದ ಮೀಟಿಂಗಿಗೆ ರಾಯ್ ಅವರನ್ನು ಆಮಂತ್ರಿಸಲಾಯಿತು. ಅಂದಿನಿಂದ ರಾಯ್ ಅವರು ಅತ್ಯಂತ ಉತ್ಸಾಹದಿಂದ ಆ ಪಕ್ಷದ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರ ಕಾರ್ಯಕ್ಷಮತೆಯನ್ನು ಮೆಚ್ಚಿ ಅವರನ್ನು ಸಮಾಜವಾದಿಗಳು ತಮ್ಮ ಪಕ್ಷದ ಜನರಲ್ ಸೆಕ್ರೆಟರಿ ಯನ್ನಾಗಿ ಮಾಡಿದರು.

ಅಷ್ಟರಲ್ಲಿ ಆಕಸ್ಮಾತ್ತಾಗಿ ರಶಿಯನ್ ಕಮ್ಯುನಿಸ್ಟ್ ಪಕ್ಷದ ಒಬ್ಬ

ಪ್ರಚಾರಿಯಾದ ಕಾಮ್ರೇಡ್ ಮಾಯಕಲ್ ಬೊರೊಡಿನ್ ಮೆಕ್ಸಿಕೊಕ್ಕೆ
ಬಂದ. ಅವನ ಅನಪೇಕ್ಷಿತ ಬರುವಿನ ಹಿಂದೆ ಒಂದು ಅತ್ಯಂತ ಕುತೂ
ಹಲಕಾರಿ ಕತೆ ಇದೆ....ಆ ಕತೆಯನ್ನು ಹೇಳಲು ಇಲ್ಲಿ ಅವಕಾಶವಿಲ್ಲ.
ಅವನ ಒಂದು ಕೆಲಸ–ಮೆಕ್ಸಿಕೋದಲ್ಲಿ ಒಂದು ಕಮ್ಯುನಿಸ್ಟ್ ಪಾರ್ಟಿ
ಸ್ಥಾಪಿಸುವದಾಗಿತ್ತು. ರಾಯ್ ಅಷ್ಟರೊಳಗೇ ಆ ಕೆಲಸದಲ್ಲೇ
ತೊಡಗಿದ್ದರಿಂದ ಬೊರೊಡಿನ್ ಹಾಗೂ ರಾಯ್ ಅವರ ನಡುವೆ
ಗಾಢವಾದ ಸ್ನೇಹ ಸಂಬಂಧ ಬೆಳೆಯಿತು. ಬೊರೊಡಿನ್ ರಾಯ್‌ನ
ಮನೆಯಲ್ಲಿಯೇ ಅವನ ಅತಿಥಿಯೆಂದು ಇರತೊಡಗಿದ. ಜರ್ಮನ್ನರು
ರಾಯ್ ಅವರಿಗೆ ಕೊಟ್ಟ ಹಣವನ್ನು ಈಗ ಅವರು ಸಮಾಜವಾದಿಪಕ್ಷದ
ಸಂಘಟನೆಗಾಗಿ ಖರ್ಚು ಮಾಡತೊಡಗಿದ್ದರು. ಈಗ ಬೊರೊಡಿನ್ನನ
ಸಲುವಾಗಿಯೂ ಉದಾರ ಹಸ್ತದಿಂದ ಖರ್ಚು ಮಾಡಿದರು : ಶಿಕಾಗೋ
ದಲ್ಲಿ ಸಿಕ್ಕು ಬಿದ್ದ ಬೊರೊಡಿನ್ನನ ಹೆಂಡತಿಗಾಗಿ ಹಾಗೂ ರಶಿಯನ್
ಪಕ್ಷದ ಒಂದು ಗುಪ್ತ ಕೆಲಸಕ್ಕಾಗಿ ವಾಶಿಂಗ್ಟನ್ನಿನಲ್ಲಿಯ ಒಂದು
ವ್ಯಾಪಾರಿ ಕೇಂದ್ರಕ್ಕಾಗಿ ರಾಯ್ ಹಣವನ್ನು ಒದಗಿಸಿದರು. ರಾಯ್
ಅವರ ಸಹಾಯದಿಂದ ಬೊರೊಡಿನ್‌ನ ಕೆಲಸವಾಯಿತಲ್ಲದೆ, ಅವನ
ಜೀವವೂ ಉಳಿಯಿತು.

೧೯೧೭ರಲ್ಲಿ ಬೊಲ್ಶೆವಿಕ್ ಕ್ರಾಂತಿ ರಶಿಯದಲ್ಲಿ ಲೆನಿನ್ನನ
ನೇತೃತ್ವದಲ್ಲಿ ಯಶಸ್ವಿಯಾದ ನಂತರ, ಇಂಥ ಕ್ರಾಂತಿ ಜಗತ್ತಿನ ತುಂಬೆಲ್ಲ
ನಡೆಯಬೇಕೆಂದು ಲೆನಿನ್ ಯೋಚಿಸುತ್ತಿದ್ದ. ಲೆನಿನ್ನನ ಶಿಷ್ಯನಾದ
ಬೊರೊಡಿನ್ ಅತ್ಯಂತ ಸುಸಂಸ್ಕೃತನೂ ಮೇಧಾವಿಯೂ ಆದಂಥ
ಕ್ರಾಂತಿಕಾರಿ. ಆತನಿಗೆ ರಾಯ್ ಅವರಂಥ ಶಿಷ್ಯ ಸಿಕ್ಕಮೇಲೆ ಕೇಳ
ಬೇಕೇ ? ರಾಯ್ ಅವರ ಮನಸ್ಸಿನಲ್ಲಿದ್ದ ಎಲ್ಲ ಶಂಕೆ-ಕುಶಂಕೆ
ಗಳನ್ನೂ ಎಲ್ಲ ಮತಭೇದಗಳನ್ನೂ ತೊಡೆದು ಹಾಕಿ, ಅವರ
ಸಂಪೂರ್ಣ ಮನಃಪರಿವರ್ತನೆ ಮಾಡಿ, ಬೊರೊಡಿನ್ ರಾಯ್ ಅವರಿಗೆ
ಕಮ್ಯುನಿಜಮ್ಮಿನ ನಿಜವಾದ ದೀಕ್ಷೆ ಕೊಟ್ಟ.

ಆನಂತರ ರಾಯ್ ಅವರು ದೇಶದಲ್ಲಿಯ ಎಲ್ಲ ಸಮಾಜವಾದಿ ಪಕ್ಷಗಳನ್ನು ಕರೆದು ಒಂದು ಅಧಿವೇಶನವನ್ನು ನೆರವೇರಿಸಿದರು. ಆ ಅಧಿವೇಶನದಲ್ಲಿಯೇ ಅವರು ಮೆಕ್ಸಿಕೋದಲ್ಲಿ ಪ್ರಪ್ರಥಮವಾಗಿ ಕಮ್ಯುನಿಸ್ಟ್ ಪಕ್ಷವನ್ನು ಪ್ರಸ್ಥಾಪಿಸಿದರು. ಈ ಹೊಸ ಪಕ್ಷದ ಮುಖಾಂತರ ಸುಶಿಕ್ಷಿತ ಮಧ್ಯಮ ವರ್ಗ ಹಾಗೂ ಕಾರ್ಮಿಕ ವರ್ಗಗಳ ನಡುವೆ ಸಾಮರಸ್ಯ ನಿರ್ಮಾಣ ಮಾಡಿ ಒಂದು ಹೊಸ ರಾಜಕೀಯ ಶಕ್ತಿಯ ನಿರ್ಮಿತಿಗೆ ಕಾರಣರಾದರು. ಈ ಘಟನೆ ನಡೆದದ್ದು ೧೯೧೮ರ ಡಿಸೆಂಬರ್ ತಿಂಗಳಲ್ಲಿ.

ನಾಮಾಂತರಗೊಂಡ ಮೆಕ್ಸಿಕೊ ಕಮ್ಯುನಿಸ್ಟ್ ಪಕ್ಷವು ಅದೇ ಅಧಿವೇಶನದಲ್ಲಿ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ಲಿನ ಎರಡನೆ ಅಧಿವೇಶನಕ್ಕೆ ಹೋಗುವ ಶಿಷ್ಯ ಮಂಡಳದ ನೇತೃತ್ವ ರಾಯ್ ಅವರ ಕೊರಳಲ್ಲಿ ಬಿತ್ತು. ರಾಯ್ ಅವರ ಕೆಲಸದ ಬಗ್ಗೆ ಪ್ರಶಂಸಾತ್ಮಕ ವಾದ ವರದಿಯನ್ನು ಬೊರೊದಿನ್ ಆಗಲೇ ಮಾಸ್ಕೋಗೆ ಕಳಿಸಿದ್ದ.

ಮೆಕ್ಸಿಕೋದ ಪ್ರೆಸಿಡೆಂಟ್‌ನೊಡನೆ ಆತ್ಮೀಯತೆಯ ಸಂಬಂಧವನ್ನು ಮೊದಲಿನಿಂದಲೂ ಬೆಳೆಸಿಕೊಂಡ ರಾಯ್ ಅವರು ಬೊರೊದಿನ್‌ನನ್ನು ಪ್ರೆಸಿಡೆಂಟ್ ಹಾಗೂ ಪರರಾಷ್ಟ್ರಮಂತ್ರಿಯವರಿಗೆ ಪರಿಚಯಿಸಿದ. ಆಗ ಬೊರೊದಿನ್ ಲ್ಯಾಟಿನ್ ಅಮೇರಿಕೆಯಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ನಡೆದಂಥ ಹೋರಾಟಕ್ಕೆ ರಶಿಯದ ಬೆಂಬಲವಿದೆ ಎಂದು ಸಾರಿ ಹೇಳಿದ. ಪ್ರೆಸಿಡೆಂಟ್ ಕರಾಂಝನಿಗೆ ಲ್ಯಾಟಿನ್ ಅಮೇರಿಕನ್ ಲೀಗ್ ಸ್ಥಾಪನೆ ಮಾಡುವ ಬೊರೊದಿನ್ನನ ಪ್ರಸ್ತಾಪ ಅತ್ಯಂತ ಸೇರಿತು ಹಾಗೂ ಆತ ರಶಿಯನ್ ಬೊಲ್ಶೆವಿಕ್ ಸರಕಾರಕ್ಕೆ ತನ್ನ ನೇರ ಮಾನ್ಯತೆ ಇದ್ದ ಬಗ್ಗೆ ಜಾಹೀರು ಮಾಡಿದ. ಬೊರೊದಿನ್ ತನ್ನ ಯಶಸ್ಸಿಗೆ ರಾಯ್ ಅವರೇ ಕಾರಣ ಎಂದು ಕೃತಜ್ಞತೆಯಿಂದ ರಾಯ್ ಅವರನ್ನು ಮಾಸ್ಕೋದಲ್ಲಿ ನಡೆಯಲ್ಲಿದ್ದ ಇಂಟರ್‌ನ್ಯಾಷನಲ್ ಕಾಂಗ್ರೆಸಿಗೆ ಬರಲೇ

ಬೇಕೆಂದು ಆಗ್ರಹಪಡಿಸಿದ. ರಾಯ್ ಅವರಿಗೆ ಮಾಸ್ಕೋದಿಂದ ಬೊರೊದಿನ್ನನ ಶಿಫಾರಸ್ಸಿನ ಮೇಲೆ, ಒಂದು ಸ್ವಶಲ್ಪಾದ ಆಮಂತ್ರಣವೂ ಬಂತು. ಅದರಲ್ಲಿ ಲೆನಿನ್ ಸೂಚಿಸಿದ್ದೇನೆಂದರೆ ರಾಯ್ ಅವರು ರಶಿಯಾದಲ್ಲಿದ್ದುಕೊಂಡು ಭಾರತದಲ್ಲಿಯ ಕ್ರಾಂತಿಗಾಗಿ ಕೆಲಸ ಮಾಡ ಬೇಕು. ಭಾರತದಲ್ಲಿ ಕಮ್ಯೂನಿಜಮ್ ಪ್ರಸ್ಥಾಪಿಸುವ ಉದ್ದೇಶದಿಂದ ರಾಯ್ ರಶಿಯಾಕ್ಕೆ ಹೋಗಲು ತುಂಬು ಮನಸ್ಸಿನಿಂದ ಒಪ್ಪಿ ಕೊಂಡರು.

ಮೆಕ್ಸಿಕೋದಲ್ಲಿ ಒಮ್ಮೊಂದು ಸಂಪನ್ನವಾದ ರಾಜಕೀಯ ಜೀವನ ವನ್ನು ಕಟ್ಟಿಕೊಂಡ ರಾಯ್ ಅವರಿಗೆ ಮೆಕ್ಸಿಕೊ ಬಿಡುವದೆಂದರೆ ಮೈಮೇಲೆ ಬಂದಿತ್ತು. ಆದರೆ ರಶಿಯಾ ಹಾಗೂ ಭಾರತದ ಭವಿಷ್ಯ ಅವರನ್ನು ಕೈಮಾಡಿ ಕರೆದಿದ್ದವು. ಮೆಕ್ಸಿಕೋದಲ್ಲಿಯೂ ಒಂದು ದೃಷ್ಟಿಯಿಂದ ಅವರ ಕೆಲಸ ಮುಗಿದಂತಿತ್ತು. ಆಗಿನ ತಮ್ಮ ವೈಚಾರಿಕ ನೆಲೆಯ ಬಗ್ಗೆ ತಮ್ಮ ಆತ್ಮಕಥನದಲ್ಲಿ ಅವರು ಹೀಗೆ ಹೇಳುತ್ತಾರೆ :

"ನನ್ನ ಪುನರ್ಜನ್ಮದ ದೇಶವಾದ ಮೆಕ್ಸಿಕೊ ಬಿಟ್ಟಾಗ ನಾನು ಬೌದ್ಧಿಕನಾಗಿ ಸ್ವತಂತ್ರನಾಗಿದ್ದೆ. ನನಗೆ ಇನ್ನೊಂದು ಶ್ರದ್ಧಾಸ್ಥಾನವೂ ಸಿಕ್ಕಿತ್ತು. ಆರ್ಥಿಕ ಸ್ವಾತಂತ್ರ್ಯ ಹಾಗೂ ಸಾಮಾಜಿಕ ನ್ಯಾಯ ಇವುಗಳಿಲ್ಲದ ರಾಜಕೀಯ ಸ್ವಾತಂತ್ರ್ಯ ಅರ್ಥಹೀನವಾದುದೆಂದು ನನ್ನ ಸ್ಪಷ್ಟ ಅಭಿಪ್ರಾಯವಾಯಿತು. ಜೊತೆಗೆ ನನಗೆ ಅತ್ಯಂತ ಮಹತ್ವದ್ದೆನಿಸಿದ್ದೇನೆಂದರೆ—ಸಾಮಾಜಿಕ ಪರಿವರ್ತನೆಗಾಗಿ ಯಶಸ್ವಿಯಾಗಿ ಹೋರಾಡಲು ಅತ್ಯಂತ ಅವಶ್ಯವಾದ ಮನೋಭಾವವೆಂದರೆ ಎಲ್ಲ ಪರಂಪರೆ ಹಾಗೂ ಸತ್ತಾಧಿಕಾರಗಳ ಬಂಧನದಿಂದ ಮುಕ್ತವಾದ ಬೌದ್ಧಿ ಕತೆ...."

ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ ರಾಯ್ ಅವರಿಗೆ ಆಗಲೇ—ಅಂದರೆ ಕಮ್ಯುನಿಜಮ್ಮನಲ್ಲಿ ಅವರು ತಮ್ಮ ಶ್ರದ್ಧಾಸ್ಥಾನ

ವನ್ನು ಕಂಡುಕೊಂಡಾಗಲೂ–ಬೌದ್ಧಿಕ ಸ್ವಾತಂತ್ರ್ಯದ ಮಹತ್ವ ತಿಳಿದಿತ್ತು. ಈ ಬೌದ್ಧಿಕ ಸ್ವಾತಂತ್ರ್ಯದ ಧ್ಯಾಸವೇ ರಾಯ್ ಅವರಿಗೆ ಮುಂದೆ ರಶಿಯಾದಲ್ಲಿ ಕುತ್ತಾಗಿ ಪರಿಣಮಿಸಿತು.

ಅಧ್ಯಾಯ ೩

ಕಮ್ಯೂನಿಜಮ್ಮಿನ ತವರು ಮನೆಯಲ್ಲಿ

ಕಾಮ್ರೇಡ್ ಮಾನವೇಂದ್ರನಾಥ ರಾಯ್ ಮೆಕ್ಸಿಕೊ ಬಿಟ್ಟದ್ದು ಪ್ರೆಸಿಡೆಂಟ್ ಕರಾಂರ್ಝಾನ ರಾಜದೂತನೆಂದು–ಸೋವಿಯಟ್ ರಶಿಯಾ ಹಾಗೂ ಮೆಕ್ಸಿಕೊ ದೇಶಗಳ ರಾಜನೈತಿಕ ಸಂಬಂಧ ಜೋಡಿಸುವ ಕೆಲಸಕ್ಕಾಗಿ. ಅವರ ಪ್ರವಾಸದ ಖರ್ಚನ್ನು ಮೆಕ್ಸಿಕೋದ ಪರರಾಷ್ಟ್ರ ಖಾತೆಯು ವಹಿಸಿಕೊಂಡಿತ್ತು. ವೆರಾ ಕ್ರೂಜ್ ಬಂದರಿನಿಂದ ಯುರೋಪಿಗೆ ಹೋಗುವ ಒಂದು ಸ್ಪ್ಯಾನಿಶ್ ಹಡಗಿನಲ್ಲಿ ರಾಯ್ ಅವರ ಸಲುವಾಗಿ ಒಂದು ಸ್ಪೆಶಲ್ ಕೇಬಿನ್ ಇಡಲಾಗಿತ್ತು. ಸ್ಪೇನದ ಮಾರ್ಗದಿಂದ ಹೋಗಿ ಜರ್ಮನಿಗೆ ರಾಯ್ ಅವರು ಸುರಕ್ಷಿತವಾಗಿ ಮುಟ್ಟುವ ವ್ಯವಸ್ಥೆ ಮಾಡಲಾಗಿತ್ತು. ಜರ್ಮನಿಯಲ್ಲಿಯೂ ಅವರು ಸುರಕ್ಷಿತವಾಗಿ ರುವದರ ಬಗ್ಗೆ ಕಾಳಜಿ ವಹಿಸಲಾಗಿತ್ತು. ಇದೆಲ್ಲ ರಾಯ್ ಅವರು ಮೆಕ್ಸಿಕೋದಲ್ಲಿ ಗಳಿಸಿದ ಉಜ್ವಲ ಸ್ಥಾನದ ದ್ಯೋತಕವಾಗಿತ್ತು. ರಾಯ್ ಸಾಮಾನ್ಯ ವ್ಯಕ್ತಿಯಾಗಿದ್ದರೆ ಮೆಕ್ಸಿಕೋದಲ್ಲೇ ಆರಾಮಾಗಿ ಇರಬಹುದಿತ್ತು. ಆದರೆ ಅವರಿಗೆ ರಶಿಯನ್ ಕ್ರಾಂತಿಯ ಶಿಲ್ಪಿಯಾದ ಲೆನಿನ್ನನ ಕರೆ ಬಂದಿತ್ತು. ಭಾರತದ ಭವಿಷ್ಯತ್ತು ಅವರ ಅಂತರ್ಯಕ್ಕೆ ಆಹ್ವಾನ ಕೊಟ್ಟಿತ್ತು. ಹುಟ್ಟು ಕ್ರಾಂತಿಕಾರಿಯಾದ, ಸಾಹಸಿಯಾದ ಅವರ ವ್ಯಕ್ತಿತ್ವಕ್ಕೆ ಮುನ್ನುಗ್ಗುವದೊಂದೇ ಗೊತ್ತು.

ಮಾನವೇಂದ್ರನಾಥ ರಾಯ್ ಯುರೋಪದಲ್ಲಿ ಮೊದಲ ನಲ

ಕಾಲಿಟ್ಟಿದ್ದು ಸ್ಪೇನಿನಲ್ಲಿ. ಸಾನ್‌ಟಾಂಡರ್ ಎಂಬ ಬಂದರಿನಲ್ಲಿಳಿದು ಮಾದ್ರೀದ್‌ಗೆ ಹೋದರು. ಸ್ಪೇನದ ರಾಜಧಾನಿಯಲ್ಲಿ ಅವರು ಮಾಡಬೇಕಾದ ಕೆಲಸ ಒಂದಿತ್ತು-ಕಾಮ್ರೇಡ್ ಬೊರೊದಿನ್ ಹೇಳಿದ ಕೆಲಸ. ಅದೇನೆಂದರೆ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ದ ಎರಡನೇ ಕಾಂಗ್ರೆಸಿಗೆ ಆದಷ್ಟು ಹೆಚ್ಚು ಸಮಾಜವಾದಿಗಳನ್ನು ಕೂಡಿಸುವ ಕೆಲಸ. ಆಗಲೇ ರಶಿಯಾದಲ್ಲಿ ಕಮ್ಯುನಿಸ್ಟರೂ ಕ್ರೂರ ಸರ್ವಾಧಿಕಾರತ್ವವನ್ನು ಪ್ರಸ್ಥಾಪಿಸುತ್ತಿದ್ದಾರೆ ಎಂದು ಯುರೋಪಿನ ತುಂಬೆಲ್ಲ ವದಂತಿಯಾಗಿತ್ತು. ಸ್ಪೇನದ ಅತ್ಯಂತ ಜನಪ್ರಿಯ ಸಮಾಜವಾದಿ ನಾಯಕನಾದ ಇಗ್ಲೇಸಿಯಸನ ತಪ್ಪು ತಿಳುವಳಿಕೆ ತೊಡೆದು ಹಾಕಿ, ಅವನ ಮನಸ್ಸನ್ನು ಒಲಿಸಿಕೊಂಡು ಇಂಟರನ್ಯಾಷನಲ್ ಕಾಂಗ್ರೆಸ್ಸಿಗೆ ಆತ ಬರುವಂತೆ ಮಾಡುವ ಕೆಲಸ ರಾಯ್ ಅವರಿಗೆ ಒಪ್ಪಿಸಲಾಗಿತ್ತು. ನವೋದಿತ ಕಮ್ಯುನಿಸ್ಟನಾದ ರಾಯ್ ಅವರಿಗೆ ತರ್ಕಶುದ್ಧ ಯೋಚನೆ ಮಾಡುವ ಇಗ್ಲೇಸಿಯಸನ ಮನಸ್ಸನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಆದರೆ ಉಳಿದ ಎಷ್ಟೋ ಎಡಪಂಥೀಯ ಸಮಾಜವಾದೀ ಜನರು ರಾಯ್ ಅವರ ಮಾತಿನಂತೆ ಕಾಂಗ್ರೆಸಿಗೆ ಬರಲು ಒಪ್ಪಿದರು.

೧೯೧೯ರ ಕೊನೆಗೆ ರಾಯ್ ಬರ್ಲಿನ್ ಮುಟ್ಟಿದರು. ಮೂರು ವರ್ಷಗಳ ಹಿಂದೆ ಬರ್ಲಿನಿಗೆ ಹೊರಟಂಥ ರಾಯ್ ಬೇರೆ, ಈಗ ಬರ್ಲಿನಿಗೆ ಬಂದು ಮುಟ್ಟಿದ ರಾಯ್ ಬೇರೆ! ಈಗ ರಾಯ್ ಅವರ ಲಕ್ಷ್ಯವೆಲ್ಲ ಕ್ರಾಂತಿಕಾರಿಗಳ ಹೊಸ ಮಕ್ಕಾ ಆದಂಥ ಮಾಸ್ಕೋದತ್ತ! ಬರ್ಲಿನಲ್ಲಿದ್ದಾಗ ಜರ್ಮನಿಯ ಆಗಿನ ರಾಜಕೀಯ ಪರಿಸ್ಥಿತಿಯ ಅಭ್ಯಾಸ ಮಾಡಿ, ರಾಯ್ ಅವರು ಅಲ್ಲಿಯ ಸಮಾಜವಾದಿ ಹಾಗೂ ಕಮ್ಯುನಿಸ್ಟ್ ಮುಖಂಡರನ್ನು ಭೆಟ್ಟಿಯಾದರು. ಜರ್ಮನಿಯಲ್ಲಿ ವಾಸಮಾಡುತ್ತಿದ್ದ ಭಾರತೀಯ ಕ್ರಾಂತಿಕಾರಕರನ್ನೂ ಭೆಟ್ಟಿಯಾದರು. ಜರ್ಮನಿಯಲ್ಲಿ ಮೊದಲನೇ ಮಹಾಯುದ್ಧದ ನಂತರ, ಕೈಸರನ ಪರಾಭವವಾದ ನಂತರ, ಕಮ್ಯುನಿಸ್ಟರು ರಶಿಯಾದ ರಾಜ್ಯಕ್ರಾಂತಿಯ ಅನುಕರಣೆ

ಮಾಡಲು ಯತ್ನಿಸಿ ವಿಫಲರಾಗಿದ್ದರು. ಒಂದು ರೀತಿಯ ಅರಾಜಕತೆಯ ಗೊಂದಲದಲ್ಲಿ ತಲೆ ಎತ್ತಿನಿಂತ ಪಕ್ಷವೆಂದರೆ ನ್ಯಾಷನಲ್ ಡೆಮಾಕ್ರಟಿಕ್ ಪಕ್ಷ. ಸತ್ತೆಯನ್ನು ಕೈವಶಮಾಡಿಕೊಂಡು ಈ ಪಕ್ಷ ಲಷ್ಕರಿ ಹುಕುಮ ಶಾಹಿಯ ರೀತಿಯಲ್ಲಿ ರಾಜ್ಯಕಾರಭಾರ ನಡೆಸಿದ್ದನ್ನು ರಾಯ್ ನೋಡಿದರು. ರಾಯ್ ಅವರ ರಾಜಕೀಯ ಶಿಕ್ಷಣ ಮುಂದುವರೆದಿತ್ತು. ಹೊಸ ವಿಚಾರಗಳು ಮೂಡಿದವು. ಒಂದು ವಿಚಾರವೆಂದರೆ- ಯುರೋಪದ ಔದ್ಯೋಗಿಕ ರಾಷ್ಟ್ರಗಳಲ್ಲಿ ಸಮಾಜವಾದಿ ಕ್ರಾಂತಿಯಾಗುವದು ಕಠಿಣ. ಈ ಯುರೋಪ ರಾಷ್ಟ್ರಗಳ ವಸಾಹತುಗಳಲ್ಲಿ ಕ್ರಾಂತಿಯಾದಾಗಲೇ ಸಾಮ್ರಾಜ್ಯಶಾಹಿ ದುರ್ಬಲವಾಗುವದು; ಸಾಮ್ರಾಜ್ಯಶಾಹಿ ದುರ್ಬಲವಾದಾಗಲೇ ಈ ಯುರೋಪದ ರಾಷ್ಟ್ರಗಳು ಸಮಾಜವಾದಿ ಕ್ರಾಂತಿಯ ಮಾರ್ಗವನ್ನು ಸ್ವೀಕರಿಸುವವು. ಈ ಕಾರಣಕ್ಕಾಗಿಯೂ ವಸಾಹತುಗಳಲ್ಲಿ ಸ್ವಾತಂತ್ರ್ಯದ ಆಂದೋಲನಗಳನ್ನು ಬಲಪಡಿಸಬೇಕು, ಆದರೆ ಆ ಚಳುವಳಿಗಳು ಸಾಮ್ಯವಾದಿ ನಾಯಕರ ಕೈಯಲ್ಲಿರಬೇಕು. ಆ ಕಾಲಕ್ಕೆ ರಾಯ್ ಅವರ ಅಂತರಂಗದಲ್ಲಿ ಒಂದು ನಿರ್ಧಾರ ಮೂಡಿಬಂತು- ಅದೇನೆಂದರೆ ಭಾರತಕ್ಕೆ ಮರಳಿ ಹೋಗುವ ಗಡಿಬಿಡಿ ಮಾಡಬಾರದು. ಅಂತರ ರಾಷ್ಟ್ರೀಯ ಕಮ್ಯುನಿಸ್ಟ್ ಸಂಘಟನೆಯಲ್ಲಿ ಮೊದಲು ಒಂದು ಸ್ಥಾನ ದೊರಕಿಸಬೇಕು, ಮಾಸ್ಕೋದಲ್ಲಿದ್ದುಕೊಂಡು ಆ ಕೆಲಸ ಮಾಡಬೇಕು.

೧೯೨೦ರ ಏಪ್ರಿಲ್ ತಿಂಗಳಲ್ಲಿ ಮಾಸ್ಕೋಕ್ಕೆ ಹೋಗುವದಕ್ಕೋಸ್ಕರ ಬರ್ಲಿನ್ ಬಿಟ್ಟದ್ದಾಯಿತು. ಕ್ರಾಂತಿಯ ತೊಟ್ಟಿಲಾದ ಲೆನಿನ್‌ಗ್ರಾಡನ್ನೂ ಮುಟ್ಟಿಯಾಯಿತು. ಅಲ್ಲಿಂದ ರಾಯ್ ಅವರನ್ನು ಮಾಸ್ಕೋಕ್ಕೆ ಕರೆದೊಯ್ಯಲಾಯಿತು. ಬೊರೊದಿನ್ ಆಗಲೇ ರಾಯ್ ಅವರ ವಾಸ್ತವ್ಯದ ವ್ಯವಸ್ಥೆ ಮಾಡಿಸಿದ್ದ -ಸೋವಿಯಟ್ ರಾಜ್ಯದ ಒಬ್ಬ ಮಾನ್ಯ ಅತಿಥಿಗೆ ತಕ್ಕಂಥ ಒಂದು ಭವ್ಯ ಪ್ರಾಸಾದದಲ್ಲಿ. ಅವರಿಗೆ

ಕೊಟ್ಟ ಕೋಣೆಯ ಬದಿಯ ಕೋಣೆ ಬೊರೊದಿನ್ನನ ಸಲುವಾಗಿ ಕಾಯ್ದಿಡಲಾಗಿತ್ತು.

ಗಮ್ಮತ್ತೆಂದರೆ ಮಾಸ್ಕೋ ಮುಟ್ಟಿದ ದಿನವೇ ರಶಿಯಾದ ಪರ ರಾಷ್ಟ್ರಮಂತ್ರಿ ಚಿಚೆರಿನ್ ಹಾಗೂ ಉಪ ಪರರಾಷ್ಟ್ರಮಂತ್ರಿ ಕಾರಾಖಾನ ಅವರ ಜೊತೆ ರಾಯ್ ಅವರ ಭೆಟ್ಟಿಯಾಯಿತು. ಅಫಗಾಣಿಸ್ತಾನಕ್ಕೆ ಬೊರೊದಿನ್‌ನನ್ನು ರಾಜದೂತನೆಂದು ಕಳಿಸಿ ಅವನ ಸಹಾಯದಿಂದ ಭಾರತೀಯ ಕ್ರಾಂತಿಕಾರಕರ ಸಂಪರ್ಕ ಬೆಳೆಸಿ ಕ್ರಾಂತಿಗೆ ನಾಂದಿ ಮಾಡಿದರೆ ಹೇಗೆ ಎಂದು ರಾಯ್ ಅವರನ್ನು ಪ್ರಶ್ನಿಸಲಾಯಿತು. ಚಿಚೆರಿನ್ ಹೇಳಿದ, "ನೋಡಿರಿ, ಕ್ರಾಂತಿ ಪೂರ್ವದಲ್ಲಿ ಪಸರಿಸಬೇಕಾಗಿದೆ. ವಸಾಹತುಗಳೆಲ್ಲ ಎದ್ದೇಳಬೇಕಾಗಿದೆ. ಜಾಗತಿಕ ಕ್ರಾಂತಿಯ ಇನ್ನೊಂದು ಆಯಾಮ ಏಶಿಯಾದಲ್ಲಿ ಪ್ರಾರಂಭವಾಗಬೇಕು." ರಾಯ್ ದಂಗಾಗಿ ಕೇಳುತ್ತಿದ್ದರು. "ಲೆನಿನ್ನರ ಜೊತೆ ಈ ವಿಷಯ ಚರ್ಚಿಸಿರಿ," ಎಂದು ಕಾರಾಖಾನ ಸೂಚಿಸಿದರು. ಬೊರೊದಿನ್ ಸೂಚಿಸಿದ್ದು, "ರಾಯ್ ಅವರನ್ನೇ ಕಾಬೂಲಿಗೆ ರಶಿಯದ ರಾಯಭಾರಿಯೆಂದು ಯಾಕೆ ಕಳಿಸಬಾರದು ?" ಚಿಚೆರಿನ್ ಅಂಧ, "ಅಫಗಾಣಿಸ್ತಾನಕ್ಕೆ ಇದು ರುಚಿಸಲಾರದು."

ಲೆನಿನ್ ಹಾಗೂ ರಾಯ್ ಅವರ ಮೊದಲ ಭೆಟ್ಟಿಯನ್ನು ರಾಯ್ ಅವರ ಶಬ್ದಗಳಲ್ಲಿಯೇ ಸಂಕ್ಷಿಪ್ತವಾಗಿ ವರ್ಣಿಸುವದು ಉತ್ತಮ. ತಮ್ಮ ಆತ್ಮಕಥನದ ೪೭ನೇ ಅಧ್ಯಾಯದಲ್ಲಿ ಲೆನಿನ್‌ನೊಡನೆ ಪ್ರಥಮ ಭೆಟ್ಟಿಯ ವರ್ಣನೆ ಬರುತ್ತದೆ. ಮೊದಲಿಗೆ ರಾಯ್ ಅವರು ಲೆನಿನ್ನನ ಸೆಕ್ರೆಟರಿಯಟ್ಟಿನ ಬಗ್ಗೆ-ಅಲ್ಲಿದ್ದ ಸೆಕ್ರೆಟರಿಗಳ ಸೈನ್ಯದ ಬಗ್ಗೆ, ಸಂಪೂರ್ಣ ಶಾಂತಿಯ ಬಗ್ಗೆ, ಸ್ವಲ್ಪವೂ ಸದ್ದು ಮಾಡದೆ ಜನರು ಓಡಾಡುವದರ ಬಗ್ಗೆ, ಲೆನಿನ್ನನ ವೈಯಕ್ತಿಕ ಸೆಕ್ರೆಟರಿಯೇಟದ ಬಗ್ಗೆ ವಿವರಣೆ ಕೊಟ್ಟು, ಲೆನಿನ್ನನ ಕಾಲನಿಷ್ಠೆಯ ಬಗ್ಗೆ ಆತ್ಮಾದರದ ಮಾತುಗಳನ್ನು ಹೇಳುತ್ತಾರೆ. ಕಾಮ್ರೆಡ್ ಮರಿಯಾ ಎಂಬ ಪ್ರಮುಖ ಸೆಕ್ರೆಟರಿ ಲೆನಿನ್‌ನನ್ನು

ಸಾಲೆಯ ಮಗುವಿನಂತೆ ನಡೆಸಿಕೊಳ್ಳುತ್ತಿದ್ದಳೆಂದೂ ಅವಳೇ ರಾಯ್ ಅವರನ್ನು ಮೆಲ್ಲಗೆ ಒಂದು ಭವ್ಯ ಹಾಲಿನಲ್ಲಿ ಒಳಗೆ ಕಳಿಸಿ ಬಾಗಿಲು ಮುಚ್ಚಿಕೊಂಡಳೆಂದೂ ಹೇಳಿದ ನಂತರ, ಲೆನಿನ್‌ನ ಭವ್ಯ ಬಾಲಿ ರೂಮಿನ ವರ್ಣನೆ ಕೊಡುತ್ತಾರೆ.

"ರೂಮಿನ ನಡುಮಧ್ಯದಲ್ಲಿದ್ದ ದೊಡ್ಡ ಟೇಬಲ್ಲಿನ ಮೇಲೆ ಶೀರ ಬಗ್ಗಿದ ಬೋಳು ತಲೆಯ ಮೇಲ್ಭಾಗದತ್ತ ನನ್ನ ಲಕ್ಷ್ಯ ಹೋಯಿತು. ಆ ಟೇಬಲ್ಲಿನತ್ತ ನಡೆಯುವಾಗ ನಾನು ತುಂಬ ಅಧೀರನಾಗಿದ್ದೆ, ಕಿಂಕರ್ತವ್ಯತಾಮೂಢನಾಗಿದ್ದೆ. ದಪ್ಪ ರತ್ನಗಂಬಳಿಯು ನನ್ನ ಕಾತರದ ಬಗ್ಗೆ ಸಹಾನುಭೂತಿ ತೋರಿಸುತ್ತಿದ್ದಂತೆನಿಸಿತು. ಎಳ್ಳಷ್ಟೂ ಶಬ್ದ ಮಾಡಬಾರದೆಂಬ ನನ್ನ ಕಾತರಕ್ಕೆ ತಕ್ಕಂತೆ ರತ್ನಗಂಬಳಿಯು ನನ್ನ ಹೆಜ್ಜೆಯ ಅಲ್ಪ ಶಬ್ದವನ್ನೂ ಅಡಗಿಸಿಬಿಟ್ಟಿತ್ತು. ಆ ಟೇಬಲ್ಲು ಬಹಳ ದೂರವಿದ್ದಂತೆ ಅನಿಸಿತು. ಅರ್ಧ ಅಂತರಕ್ಕೆ ನಾನು ಮುಟ್ಟುತ್ತಿದ್ದಂತೆ, ಆ ಅಗಾಧ ತಲೆಯ ಸ್ವಾಮಿ ಒಮ್ಮೆಲೆ ಎದ್ದುನಿಂತು ಬಲಗೈಯನ್ನು ಮುಂದೆ ಚಾಚುತ್ತಲೇ ನನ್ನತ್ತ ಲಗುಬಗೆಯಿಂದ ಬಂದ. ಲೆನಿನ್ನನ ಸಮ್ಮುಖದಲ್ಲಿ ನಾನು ನಿಂತಿದ್ದೆ.

ನನಗಿಂತ ಆರೇಳು ಇಂಚು ಗಿಡ್ಡನಾಗಿದ್ದ ಲೆನಿನ್ ತನ್ನ ಚೂಪು ಗಡ್ಡ ಶೀರ ಅಡ್ಡವಾಗುವಷ್ಟು ತನ್ನ ಗೋಣು ತಿರುವಿ ನನ್ನ ಮುಖ ವನ್ನು ಕುತೂಹಲದಿಂದ ನಿಟ್ಟಿಸಿ ನೋಡಿದ. ಅತ್ಯಂತ ಗೊಂದಲಿಸಿ ನಿಂತಂಥ ನನಗೆ ಏನು ಹೇಳಬೇಕೋ ತಿಳಿಯಲಿಲ್ಲ. ಅವನೇ ನನ್ನ ಸಹಾಯಕ್ಕೆ ಬಂದು ವಿನೋದದಿಂದ ನುಡಿದ : 'ಅಲ್ಲ, ನೀನಷ್ಟು ತರುಣನಿದ್ದೀಯಲ್ಲ. ಬಿಳೀಶುಭ್ರ ಗಡ್ಡದ ಪೂರ್ವ ದೇಶದ ಜ್ಞಾನಿ ಬರುತ್ತಾನೆಂದು ತಿಳಿದಿದ್ದೆ!' ನನ್ನ ಆತಂಕ ಮಾಯುವಾಗಿ ನಾನು, 'ನನಗೆ ಇಪ್ಪತ್ತೇಳು ವರ್ಷ' ಎಂದು ಇದಿರುತ್ತರ ಹೇಳಿದೆ.

ಲೆನಿನ್ ನಕ್ಕ—ವಿಸ್ಮಯಗೊಂಡ ತನ್ನ ಆರಾಧಕನ ಸಂಭ್ರಮವನ್ನು ಹೋಗಲಾಡಿಸುವ ಉದ್ದೇಶದಿಂದ."

ಆ ನಂತರ ಕೊಟ್ಟಂಥ ಲೆನಿನ್‌ನ ವ್ಯಕ್ತಿತ್ವದ ವಿಶ್ಲೇಷಣೆ ಅನನ್ಯ ಸಾಧಾರಣವಾದುದು, ಉಧೃತಗೊಳಿಸಲು ಅವಕಾಶವಿಲ್ಲ.

ಲೆನಿನ್‌ನಿಗೆ ಮೆಕ್ಸಿಕೊದಲ್ಲಿ ರಾಯ್ ಅವರು ಮಾಡಿದ ಕಾರ್ಯದ ಬಗ್ಗೆ ಮಾಹಿತಿ ಇತ್ತು. ಅವರ ಬಗ್ಗೆ ಇನ್ನಿಷ್ಟು ವಿವರ ಬೇಕೆಂದು ಹೇಳಿ, ಲೆನಿನ್ ರಾಯ್ ಅವರ ಕಾರ್ಯದ ಬಗ್ಗೆ ಮೆಚ್ಚಿಕೆ ವ್ಯಕ್ತಪಡಿಸಿ, ವಸಾಹತುಗಳಲ್ಲಿ ಕ್ರಾಂತಿ ಹೇಗೆ ನಿರ್ಮಿಸಬೇಕೆಂಬುದರ ಬಗ್ಗೆ ಸ್ವಲ್ಪ ಚರ್ಚೆ ಮಾಡಿ, ಎರಡನೇ ಜಾಗತಿಕ ಕಾಂಗ್ರೆಸ್ಸಿನಲ್ಲಿ ಆ ವಿಷಯ ಬರಲಿದೆ ಯೆಂದೂ ಆ ಬಗ್ಗೆ ಯೋಚನೆ ಮಾಡಿಡಬೇಕೆಂದೂ ರಾಯ್ ಅವರಿಗೆ ಸೂಚಿಸಿದ. ಅಷ್ಟರಲ್ಲಿ ಕಾಮ್ರೇಡ್ ಮಾರಿಯಾಳ ಕೆಂಪು ಬಲ್ಬು ಹೊತ್ತಿ ಕೊಂಡಿತು. ಲೆನಿನ್ ತುಂಟ ನಗೆ ನಕ್ಕು, ಮರಿಯಾಳ ಆದೇಶ ಮೀರು ವಂತಿಲ್ಲ ಎಂದು ನುಡಿದು, ರಾಯ್ ಅವರ ತೋಳು ಹಿಡಿದು ಬಾಗಿಲ ತನಕ ನಡೆದು ಹೋದ. ರಾಯ್ ಹೊರಗೆ ಹೋಗಲು ಬಾಗಿಲು ತೆರೆಯಿತು. ಹಾಗೂ ಆ ತೆರೆದ ಬಾಗಿಲಿನಿಂದ ಒಳಗೆ ನುಸುಳಿದ ವ್ಯಕ್ತಿ ಕಾಮ್ರೇಡ್ ಝಿನೋವೀವ್‌ನ ಪರಿಚಯವನ್ನು ಲೆನಿನ್ ಮಾಡಿಕೊಟ್ಟ. ಝಿನೋವಿವ್‌ನೂ ಕೈಕುಲುಕಿ, "ನಿಮ್ಮನ್ನು ಮತ್ತೊಮ್ಮೆ ಭೆಟ್ಟಿಯಾಗ ಬೇಕು"ಎಂದು ಪಿಸು ನುಡಿದ....

ಝಿನೋವೀವ್‌ನ ಅಧ್ಯಕ್ಷತೆಯಲ್ಲಿ ಮಾಸ್ಕೋದ ರೆಡ್‌ಸ್ಕ್ವಾರಿ ನಲ್ಲಿ ಅಧಿವೇಶನದ ಪ್ರಚಾರಕ್ಕಾಗಿ ಏರ್ಪಡಿಸಿದ ಸಭೆಯಲ್ಲಿ ರಾಯ್ ಮಾತನಾಡಿದರು :

"ನಾನು ಕಮ್ಯುನಿಸ್ಟ್ ತತ್ವದ ನವ ಉಪಾಸಕ. ಯಶಸ್ವೀ ಕ್ರಾಂತಿಯ ತವರುಮನೆಗೆ ನಿಷ್ಠಾವಂತ ಸೈನಿಕನೆಂದು ಕ್ರಾಂತಿಯ ಸಂಗ್ರಾಮದಲ್ಲಿ ಭಾಗವಹಿಸಲು ಬಂದಿದ್ದೇನೆ. ನನ್ನ ಒಂದೇ ಆಕಾಂಕ್ಷೆ ಯೆಂದರೆ ಸಾಮಾಜಿಕ ಸ್ವಾತಂತ್ರ್ಯದ ಸಂದೇಶವನ್ನು ವಸಾಹತುಗಳಲ್ಲಿಯ ಪದ ದಲಿತ ಜನತೆಯ ತನಕ ಮುಟ್ಟಿಸುವದು. ಹಾಗೆ ಮುಟ್ಟಿಸಲು ಬೇಕಾದ ಅನುಭವಸ್ಥ ಶಿಕ್ಷಣಕ್ಕಾಗಿ ನಾನಿಲ್ಲಿ ಬಂದಿದ್ದೇನೆ."

ಎರಡನೇ ಇಂಟರ್‌ನ್ಯಾಶನಲ್ ಕಾಂಗ್ರೆಸ್ಸು ಲೆನಿನ್‌ಗ್ರಾಡಿನಲ್ಲಿ ೧೯೨೦ರ ಜುಲೈ ೧೬ರಂದು ಪ್ರಾರಂಭವಾಯಿತು. ರಾಯ್ ಹಾಗೂ ಅವರ ಹೆಂಡತಿ ಈವ್ಲಿನ್ ರಾಯ್ ಮೆಕ್ಸಿಕೊದ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಗಳೆಂದು ಹಾಜರಿದ್ದರು. ಭಾರತದ ಪ್ರತಿನಿಧಿಗಳೆಂದರೆ ಅವನೀ ಮುಖರ್ಜಿ ಹಾಗೂ ಆಚಾರ್ಯ. ಆದರೆ ರಾಯ್ ಅವರೂ ಭಾರತದ ಪ್ರತಿನಿಧಿಯೆಂದೇ ಗಣಿಸಲ್ಪಟ್ಟರು. ಒಟ್ಟು ಜಗತ್ತಿನ ೨೭ ಕಮ್ಯುನಿಸ್ಟ್ ಪಕ್ಷಗಳ ಹಾಗೂ ೬೭ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಆ ಅಧಿವೇಶನಕ್ಕೆ ಬಂದಿದ್ದರು. ಈ ಅಧಿವೇಶನಕ್ಕಾಗಿ ಸ್ವತಃ ಲೆನಿನ್‌ನೇ ವಸಾಹತುಗಳಲ್ಲಿಯ ಕ್ರಾಂತಿಯ ಸ್ವರೂಪದ ಬಗ್ಗೆ ಒಂದು ಪ್ರಬಂಧ ಮಂಡಿಸಿದ್ದ. ರಾಯ್ ಅವರು ತಮ್ಮದೇ ಆದ ಇನ್ನೊಂದು ಪ್ರಬಂಧ ಮಂಡಿಸಿದ್ದರು–ಹಾಗೆ ಮಂಡಿಸಲು ಲೆನಿನ್ ಸ್ವತಃ ಅನುಮತಿ ಕೊಟ್ಟಿದ್ದ.

ಲೆನಿನ್ನನ ಪ್ರಬಂಧದಲ್ಲಿಯ ಮುಖ್ಯ ವಾದಸರಣಿ ಹೀಗಿತ್ತು: ವಸಾಹತುಗಳಲ್ಲಿದ್ದ ರಾಷ್ಟ್ರವಾದಿ ಜನತಂತ್ರಾತ್ಮಕ ಚಳುವಳಿಗಳಿಗೆ ಕಮ್ಯುನಿಸ್ಟರು ಸಂಪೂರ್ಣ ಬೆಂಬಲ ಕೊಡಬೇಕು ಹಾಗೂ ಪ್ರತ್ಯಕ್ಷ ಸಹಕಾರವನ್ನಿತ್ತು ಆ ಚಳುವಳಿಗಳಿಗೆ ಉಗ್ರತೆಯ ಸ್ವರೂಪ ಕೊಡಬೇಕು.

ರಾಯ್ ಅವರು ಲೆನಿನ್‌ನ ಭೂಮಿಕೆಗೆ ತಮ್ಮ ಪ್ರಬಂಧದಲ್ಲಿ ಸ್ವಲ್ಪ ವಿರೋಧ ವ್ಯಕ್ತಪಡಿಸಿ ಒಂದು ಮಹತ್ವದ ಸುಧಾರಣೆ ಸೂಚಿಸಿದರು. ಅವರ ಮುಖ್ಯ ವಾದಸರಣಿ ಹೀಗಿತ್ತು: ವಸಾಹತುಗಳಿಂದ ಮೊದಲಿಗೆ ಪರದೇಶೀ ಸಾಮ್ರಾಜ್ಯಶಾಹಿಯನ್ನೂ ಪರದೇಶೀ ಬಂಡವಾಳ ಶಾಹಿಯನ್ನೂ ಉಚ್ಚಾಟನೆಗೊಳಿಸಬೇಕು, ಸರಿ. ಅದಕ್ಕಾಗಿ ಬೂರ್ಜ್ವಾ ರಾಷ್ಟ್ರವಾದಿ ಸಂಘಟನೆಗಳಿಗೆ ಸಹಾಯ ಮಾಡಬೇಕು, ಸರಿ. ಆದರೆ ಬೂರ್ಜ್ವಾ ರಾಷ್ಟ್ರವಾದಿ ಜನರೇ ಸ್ವಾತಂತ್ರ್ಯ ಚಳುವಳಿಗಳ ನಾಯಕರಾಗಿರುವುದು ಒಳಿತಲ್ಲ. ಅಂದರೆ ಆ ರಾಷ್ಟ್ರವಾದಿ ಚಳುವಳಿಗಳ

ನಾಯಕತ್ವವು ಕ್ರಾಂತಿಕಾರೀ ಸಮಾಜವಾದಿಗಳ ಕೈಯಲ್ಲಿ ಹೋಗುವಂತೆ ನೋಡಿಕೊಳ್ಳುವದು ಅಗತ್ಯ. ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ ಸಂಘಟನೆಯು ಆ ದೃಷ್ಟಿಯಿಂದ ಮುಂದಿನ ಹೆಜ್ಜೆ ಇಡಬೇಕು.

ಈ ಎರಡೂ ಪ್ರಬಂಧಗಳ ಬಗ್ಗೆ ತುಂಬ ಚರ್ಚೆಯಾಗಿ, ಲೆನಿನ್‌ನ 'ರಾಷ್ಟ್ರವಾದಿ-ಜನತಂತ್ರಾತ್ಮಕ'ವೆನ್ನುವ ಶಬ್ದ ತೆಗೆದು ಬರೇ 'ರಾಷ್ಟ್ರವಾದೀ-ಕ್ರಾಂತಿಕಾರಕ' ಎಂಬ ಶಬ್ದ ಹಾಕಲಾಯಿತು, ಕೊನೆಗೆ ನಿರ್ಣಯವೇನಾಯಿತೆಂದರೆ :

"ಎಲ್ಲ ಕಮ್ಯುನಿಸ್ಟ್ ಪಾರ್ಟಿಗಳು ವಸಾಹತು ದೇಶಗಳಲ್ಲಿಯ ಕ್ರಾಂತಿಕಾರಿ ಸ್ವಾತಂತ್ರ್ಯ ಚಳುವಳಿಗಳಿಗೆ ಕ್ರಿಯಾಶೀಲ ಸಹಕಾರ ಕೊಡಬೇಕು. ಯಾವ ರೀತಿಯ ಸಹಕಾರ ಕೊಡಬೇಕೆನ್ನುವದರ ಬಗ್ಗೆ ಆ ಆ ದೇಶಗಳಲ್ಲಿಯ ಕಮ್ಯುನಿಸ್ಟ್ ಪಕ್ಷಗಳು ನಿರ್ಧರಿಸಬೇಕು. ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ ಆ ದೇಶಗಳಲ್ಲಿಯ ಬೂರ್ಜ್ವಾ-ಡೆಮೊಕ್ರ್ಯಾಟಿಕ್ ಸಂಸ್ಥೆಗಳೊಡನೆ ಹಂಗಾಮಿ ಸಂಬಂಧ ಬೆಳೆಸಬೇಕು, ಆದರೆ ಅವುಗಳೊಡನೆ ಒಂದಾಗಬಾರದು. ಆ ದೇಶಗಳಲ್ಲಿಯ ಕಾರ್ಮಿಕ ಚಳುವಳಿಗಳೊಡನೆ ಅವು ಎಷ್ಟೇ ಚಿಕ್ಕವಿದ್ದರೂ—ಆತ್ಮೀಯ ಸಂಬಂಧವಿಟ್ಟುಕೊಂಡು ಆ ಚಳುವಳಿಗಳು ಪ್ರತ್ಯೇಕವಾಗಿ ಬೆಳೆಯುವಂತೆ ನೋಡಿಕೊಳ್ಳಬೇಕು."

ಈ ನಿರ್ಣಯದಲ್ಲಿ ಅಡಕವಾದ 'ಬಲ' ಹಾಗೂ 'ಎಡ'—ಈ ಎರಡೂ ಹಂಚಿಕೆಗಳ ಪರಿಣಾಮವೆಂದರೆ ಮುಂದೆ ಚೈನಾದಲ್ಲಾದ ಕ್ರಾಂತಿಯ ಸೋಲು !

ರಾಯ್ ಅವರ ಒಂದು ಮುಖ್ಯ ಮುದ್ದೆ ಏನಾಗಿತ್ತೆಂದರೆ— ಏಶಿಯಾದ ವಸಾಹತುಗಳಲ್ಲಿ ಕ್ರಾಂತಿಯಾಗದ ಹೊರತು ಯುರೋಪದ ಸಾಮ್ರಾಜ್ಯವಾದಿ ರಾಷ್ಟ್ರಗಳಲ್ಲಿ ಕಮ್ಯುನಿಸ್ಟ್ ಚಳುವಳಿಗಳು ಸಫಲವಾಗಲಾರವು.

ಕಾಂಗ್ರೆಸ್ಸು ಲೆನಿನ್ ಹಾಗೂ ರಾಯ್—ಇಬ್ಬರ ಪ್ರಬಂಧಗಳನ್ನು ಸ್ವೀಕರಿಸಿ ಮುಂದಿನ ಅಧಿವೇಶನಗಳಲ್ಲಿ ಅವುಗಳ ಬಗ್ಗೆ ಚರ್ಚೆ ಮುಂದು

ಪರಿಸಲು ನಿರ್ಣಯಿಸಿತು. ಮುಂದಿನ ಮೂರು ಅಧಿವೇಶನಗಳಲ್ಲಿ ರಾಯ್ ಅವರು ಕಾಮಿಂಟರ್ನದ ಹಾಗೂ ಕಮ್ಯುನಿಸ್ಟ್ ಪಕ್ಷಗಳ 'ಸಂವಿಧಾನಾತ್ಮಕ' ದೃಷ್ಟಿಯ ಬಗ್ಗೆ ಟೀಕಾತ್ಮಕವಾಗಿ ಮಾತನಾಡಿದರು.

ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ದ ಎರಡನೇ ಅಧಿವೇಶನದ ನಂತರ ವಸಾಹತುಗಳಲ್ಲಿಯ ಕ್ರಾಂತಿಯ ಸಮಸ್ಯೆಗಳ ಕೆಲಸವನ್ನು ರಾಯ್ ಅವರಿಗೆ ಒಪ್ಪಿಸಿಯಾಗಿತ್ತು. ಈ ಕೆಲಸ ಅತ್ಯಂತ ಕಠಿಣವಾಗಿತ್ತು. ಭಾರತದ ಉದಾಹರಣೆಯನ್ನೇ ತೆಗೆದುಕೊಂಡರೆ ಕ್ರಾಂತಿಯ ಸಮಸ್ಯೆ ಎಷ್ಟೊಂದು ಕಠಿಣವಿತ್ತು ಎನ್ನುವುದು ಗೊತ್ತಾಗುವುದು. ೧೯೨೦ರ ಕಾಲವೆಂದರೆ ಮೊದಲೇ ಸಲ ಲೋಕಮಾನ್ಯ ಟಿಳಕರು ಉಗ್ರ ರಾಷ್ಟ್ರವಾದದ ಕಹಳೆ ಊದಿ ಜನಜಾಗೃತಿ ಮಾಡಿದ್ದರು. ಅದರ ಉಪಯೋಗ ಮಹಾತ್ಮಾ ಗಾಂಧಿಯವರು ಮಾಡಿಕೊಂಡು ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದರು. ಚಳುವಳಿ ಉಗ್ರವಾದರೆ ಬ್ರಿಟಿಷ್ ಸರಕಾರ ಸಂಧಾನ ಮಾಡಿಕೊಂಡೇ ತೀರುವರೆಂದು ರಾಯ್ ಭವಿಷ್ಯ ಹೇಳಿದ್ದರು. ಈ ಚಳುವಳಿ-ಸಂಧಾನದ ತಂತ್ರದಿಂದ ಕ್ರಾಂತಿ ಮುಂದೆ ಹೋಗುವದೆಂದು ಅವರಿಗೆ ಗೊತ್ತಿತ್ತು. ಕೊನೆಗೂ ಹಾಗೆ ಆಗಲಿಲ್ಲವೇ ? ಚಳುವಳಿ-ಅನುಗ್ರಹದ ತಂತ್ರದಿಂದಲೇ ಬ್ರಿಟಿಷರು ಭಾರತಕ್ಕೆ ಸತ್ತಾದಾನ ಮಾಡಲಿಲ್ಲವೇ ? ಹೀಗಾಗಲಿದೆಯೆಂದು ರಾಯ್ ಎಂದೋ ಹೇಳಿದ್ದರು. ಆದರೆ ಅವರ ಮುಖ್ಯ ಕಾಳಜಿ ಕಮ್ಯುನಿಸ್ಟ್ ಕ್ರಾಂತಿಯಾಗಿತ್ತು. ಇಂಥ ಕ್ರಾಂತಿಯ ಅಡಿಗಲ್ಲನ್ನು ಭಾರತದ ಸರಹದ್ದಿನಲ್ಲಿ ಹಾಕಬೇಕೆಂಬ ಯೋಜನೆ ರಾಯ್ ಮಾಡಿದರು. ಅದಕ್ಕಾಗಿ ತಾಷ್ಕಂದಕ್ಕೆ ಹೋಗಿ ಕೆಲವು ದಿನ ಇದ್ದರು. ತಾಷ್ಕಂದ ಪ್ರಯೋಗ ಯಶಸ್ವಿಯಾಗಲಾರದೆಂದು ಅನಿಸಿದೊಡನೆ ಇಂಟರ್‌ನ್ಯಾಶನಲ್ ಸಮಿತಿಯವರೇ ತಮ್ಮ ಕೇಂದ್ರವನ್ನು ಬರ್ಲಿನ್‌ಗೆ ಒಯ್ದರು. ಪೂರ್ವದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳ ಸ್ಥಾಪನೆ ಮಾಡಿ ಅವುಗಳನ್ನು ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ಲಿನ ಘಟಕಗಳಾಗಿ ಸಮಾವೇಶ ಮಾಡಿಕೊಂಡು ವ್ಯಾಪಕವಾದ ಚಳುವಳಿ

ಹೂಡಬೇಕೆಂಬುದು ರಾಯ್ ಅವರ ಮನಸಿಷ್ಯೆಯಾಗಿತ್ತು. ಆ ದಿಶೆಯಲ್ಲಿ ಅವರು ಬೀಜಾರೋಪಣದ ಕೆಲಸ ಕೈಗೊಂಡರು. ಆದರೆ ತಾಷ್ಕಂದದ ಪ್ರಯೋಗ ಅಸಫಲವಾದ್ದರಿಂದ ರಾಯ್ ಅವರ ಮೇಲೆ ನಾನಾ ತರದ ಆರೋಪಗಳನ್ನು ರಾಯಿಸ್ ಅವರ ಕಮ್ಯುನಿಸ್ಟ್ ಪ್ರತಿಸ್ಪರ್ಧಿಗಳು ಹೊರಿಸತೊಡಗಿದರು.

ಬರ್ಲಿನಿನಲ್ಲಿ ರಾಯ್ ೧೯೨೨ರಲ್ಲಿ 'ಇಂಡಿಯಾ ಇನ್ ಟ್ರಾನ್ಸಿಶನ್' ಎಂಬ ಪುಸ್ತಕ ಬರೆದರು ಹಾಗೂ 'ವ್ಯಾನ್‌ಗಾರ್ಡ್ ಆಫ್ ಇಂಡಿಯನ್ ಇಂಡೆಪೆಂಡೆನ್ಸ್' ಎಂಬ ನಿಯತಕಾಲಿಕೆಯನ್ನು ಆರಂಭಿಸಿದರು, ಅದಕ್ಕೆ ಮುಂದೆ 'ಅಡ್ವಾನ್ಸ್ ಗಾರ್ಡ್' ಎಂದು ಹೆಸರಿಡಲಾಯಿತು. ಅದೇ ವರ್ಷ ಕಾಮಿಂಟರ್ನದ ಪ್ರಿಸೀಡಿಯಮ್‌ದ ಸದಸ್ಯನೆಂದು ನಾಲ್ಕನೇ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ ಕಾಂಗ್ರೆಸ್ಸಿನಲ್ಲಿ ಭಾಗವಹಿಸಿದರು. (ರಾಯ್ ೧೯೨೧ರ ಮಧ್ಯದಲ್ಲಿಯೇ ಮಾಸ್ಕೋ ಸೋವಿಯಟ್‌ಕ್ಕೆ ಆರಿಸಿ ಹೋಗಿ ಕಾಮಿಂಟರ್ನದ ಸದಸ್ಯರಾಗಿದ್ದರು.) ಆ ಅಧಿವೇಶನದಲ್ಲಿ ರಾಯ್ ಒತ್ತಿಹೇಳಿದ್ದೆಂದರೆ ವಸಾಹತುಗಳಲ್ಲಿಯ ಚಳುವಳಿಗಳ ಬೂರ್ಜ್ವಾ ನಾಯಕತ್ವ ಅತ್ಯಂತ ಪುಕ್ಕ ಹಾಗೂ ಮಿಜಿಮಿಜಿ ವೃತ್ತಿಯುದಿದ್ದು, ಸಾಮಾನ್ಯ ಜನತೆಯನ್ನು ಅಂಥ ನಾಯಕತ್ವದಿಂದ ಬಿಡುಗಡೆಗೊಳಿಸಬೇಕು. ಸಾಮಾನ್ಯಜನತೆಗೆ ಕ್ರಾಂತಿಕಾರಿ ನಾಯಕತ್ವ ಕೊಡುವಂಥ ಕಮ್ಯುನಿಸ್ಟ್ ಪಕ್ಷಗಳನ್ನು ವಸಾಹುತಗಳಲ್ಲಿ ಸ್ಥಾಪನೆ ಮಾಡಬೇಕು.

೧೯೨೨ರಲ್ಲಿ ರಾಯ್ ಅವರು ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವ ಪ್ರಯತ್ನವನ್ನು ಸಾತತ್ಯವಾಗಿ ಮಾಡಿದರು. ಪ್ರಚಾರದ ಪುಸ್ತಕ, ನಿವೇದನೆ, ಪತ್ರಿಕೆಗಳನ್ನು ಭಾರತಕ್ಕೆ ಸಿಕ್ಕವರ ಜೊತೆ ಕಳಿಸಿದರು ; ಆಗಾಗ್ಗೆ ಸಾಧ್ಯವಿದ್ದಷ್ಟು ದೂತರನ್ನು ಕಳಿಸಿದರು ; ಭಾರತದ ಕ್ರಾಂತಿಕಾರಕ ಮುಖಂಡರಾದ ಡಾಂಗೆ, ಮುಜಫರ ಅಹಮದ, ಸಂಪೂರ್ಣಾನಂದ, ಸಿಂಗಾರವೇಲು ಇತ್ಯಾದಿಯವರೊಡನೆ ಒಂದಿ

ಬೇರೊಂದು ರೀತಿಯಲ್ಲಿ ಸಂಪರ್ಕ ಬೆಳೆಸಿದರು. ಬ್ರಿಟಿಷ್ ಸರಕಾರದ ಇಂಟೆಲಿಜೆನ್ಸ್ ಬ್ಯೂರೋದವರು ರಾಯ್‌ನ ಬಗ್ಗೆ ಆಗಾಗ್ಗೆ ಸರಕಾರಕ್ಕೆ ಮಾಹಿತಿ ಒದಗಿಸುತ್ತಲಿದ್ದರು.

ನಾಲ್ಕನೆಯ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ಲಿನ ಅಧಿವೇಶನದಲ್ಲಿ ರಾಯ್ ಅವರ ಕಾರ್ಯದ ಪ್ರಶಂಸೆ ಸಾಕಷ್ಟಾಯಿತು. ಅಧ್ಯಕ್ಷರಾದ ಝಿನೋವ್ಹೀವ್ ಅಂದದ್ದೇನೆಂದರೆ-"ಭಾರತದಲ್ಲಿ ಮೌಲಿಕವಾದ ಕಾರ್ಯವಾಗಿದೆ. ರಾಯ್ ಹಾಗೂ ಅವರ ಸಹಕಾರಿಯವರು ಕಮ್ಯುನಿಸ್ಟ್ ವಿಚಾರಸರಣಿಯು ಅನೇಕ ಜನರನ್ನು ಒಂದೆಡೆ ತಂದಿದ್ದಾರೆ. ರಾಯ್ ಅವರು ಸುರುಮಾಡಿದ ನಿಯತಕಾಲಿಕೆಗಳ ಮುಖಾಂತರ ಭಾರತದಲ್ಲಿಯ ಕಾರ್ಯಕ್ಕೆ ಒಂದು ಏಕಸೂತ್ರತೆ ಬಂದಿದೆ." ಕಾರ್ಲ ರ‍್ಯಾಡೆರ್ ಹೇಳಿದ: "ಭಾರತದಲ್ಲಿ ಒಂದು ಧ್ಯೇಯವಾದಿ ಕೇಂದ್ರ ಸ್ಥಾಪನೆಯಾಗಿದೆ. ರಾಯ್ ಅವರು ಭಾರತೀಯ ಪರಿಸ್ಥಿತಿಯ ಮಾರ್ಕ್ಸ್‌ವಾದೀ ಚಿಕಿತ್ಸೆ ಮಾಡುವಲ್ಲಿ ತುಂಬ ಯಶಸ್ಸು ಗಳಿಸಿದ್ದಾರೆ. ಪೂರ್ವದ ರಾಷ್ಟ್ರಗಳಲ್ಲಿ ಯಾವ ಕಮ್ಯುನಿಸ್ಟ್ ಪಕ್ಷವೂ ಇಂಥ ಕೆಲಸ ಮಾಡಿಲ್ಲ...."

ಹೀಗೆ ರಾಯ್ ಅವರ ನೇತೃತ್ವಕ್ಕೆ ಬೆಲೆ ಬರುತ್ತಿದ್ದಂತೆಯೇ ಅವರ ನೇತೃತ್ವವನ್ನು ವಿರೋಧಿಸುವ ಗುಂಪೂ ಸಿದ್ಧವಾಗತೊಡಗಿತು. ಆ ಗುಂಪಿನ ಹಿಂದೆ ರಶಿಯಾದ ಕೆಲವು ಮುಖಂಡರೂ ಇದ್ದರು. ಆ ಗುಂಪಿನಲ್ಲಿದ್ದ ಅವನೀ ಮುಖರ್ಜಿ, ವೀರೇಂದ್ರ ಚಟ್ಟೋಪಾಧ್ಯಾಯ ಹಾಗೂ ಬರಕತುಲ್ಲಾ ಇವರು ರಾಯ್ ಅವರ ಅವಹೇಳನೆ ಮಾಡ ತೊಡಗಿದರು....ಮುಂದೆ ಬರಲಿರುವ ಸ್ಟಾಲಿನ್ ಪರ್ವದ ನೆರಳು ಮೊದಲೇ ಬೀಳತೊಡಗಿದ್ದವು.

ಆಗ ರಾಯ್ ಅವರ ಲಕ್ಷ್ಯ ಭಾರತೀಯ ನ್ಯಾಶನಲ್ ಕಾಂಗ್ರೆಸಿನ ನೇತೃತ್ವದ ಪರಿವರ್ತನೆಯತ್ತಲೂ ಇತ್ತು. ೧೯೨೨ ಡಿಸೆಂಬರದ ಗಯಾದಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನಕ್ಕೆ ಚಿತ್ತರಂಜನ್‌ದಾಸ್

ಅವರು ಅಧ್ಯಕ್ಷರಾಗಲಿದ್ದಾರೆಂದು ತಿಳಿದ ಕೂಡಲೆ ರಾಯ್ ಅವರಿಗೆ ಚಿತ್ತರಂಜನ್‌ದಾಸ್ ಅವರ ಎಡಪಂಥೀಯ ವಿಚಾರ ಸರಣಿ ಸೇರಿದ್ದರಿಂದ ಅವರು ದಾಸ್ ಅವರಿಗೆ ಒಂದು ಸಂದೇಶ ಕಳಿಸಿದರು:

"ಭಾರತದ ಜನತೆಯ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಕಾಸ ಆಗಬೇಕಾದರೆ ಭಾರತವು ಸಾಮ್ರಾಜ್ಯವಾದಿ ಬ್ರಿಟನ್ನಿನಿಂದ ಸಂಪೂರ್ಣ ಬಿಡುಗಡೆ ಪಡೆಯಬೇಕು. ರಾಷ್ಟ್ರವಾದಿ ಚಳುವಳಿಯ ಉದ್ದೇಶ ಸಂಧಾನ ಹಾಗೂ ತಡಜೋಡಿನ ಶಾಂತಿವಾದಿ ಮಾರ್ಗದಿಂದ ಸಾಧ್ಯವಾಗಲಾರದು."

೧೯೨೪ರಲ್ಲಿ ಲೆನಿನ್ನನ ಮರಣದ ನಂತರ ರಶಿಯಾದ ರಾಜಕೀಯದ ವಾತಾವರಣದಲ್ಲಿ ಹೊಸ ಹೊಸ ಗಾಳಿಗಳು ಬೀಸತೊಡಗಿದವು. ರಾಯ್ ಅವರ ಸ್ಥಾನ ಅಸ್ಥಿರವಾಯಿತು. ರಶಿಯದ ಕಮ್ಯುನಿಸ್ಟ್ ಪಾರ್ಟಿಯಲ್ಲಿ ಸಂಚು-ಒಳಸಂಚುಗಳು ಸುರುವಾದವು. ಸ್ಟಾಲಿನ್ ಅಧಿಕಾರವನ್ನೆಲ್ಲ ತನ್ನ ಕೈಯಲ್ಲಿ ಒಂದುಗೂಡಿಸುತ್ತಿದ್ದ. ಅವನ ವಿರೋಧಿಗಳಿಗೆ ಅವಸಾನ ಕಾಲ ಬಂದಿತ್ತು.

೧೯೨೪ರಲ್ಲಿ ಬ್ರಿಟಿಷ್ ಸರಕಾರ ಭಾರತದಲ್ಲಿ ಕಮ್ಯುನಿಸ್ಟರ ವ್ಯವಹಾರಗಳ ಮೇಲೆ ಲಕ್ಷ್ಯವಿಟ್ಟು, ಕಾನಪುರ ಸಂಚನ್ನು ಬಯಲಿಗೆಳೆದು ಮುಕದ್ದಮೆ ಪ್ರಾರಂಭಿಸಿದರು. ಶೌಕತ್ ಉಸ್ಮಾನಿ, ಗುಲಾಮ ಹುಸೇನ, ಡಾಂಗೆ, ನಲಿನಿ ಗುಪ್ತ ಅವರ ಕೂಡ ರಾಯನೂ ಮುಖ್ಯ ಆರೋಪಿ. ಆರೋಪವೇನೆಂದರೆ ರಾಯ್ ಅವರ ನೇತೃತ್ವದಲ್ಲಿ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ದ ಒಂದು ಶಾಖೆಯನ್ನು ಸ್ಥಾಪಿಸಲು ಆರೋಪಿಗಳು ಯತ್ನಿಸುತ್ತಿದ್ದಾರೆ. ಕೈಯಲ್ಲಿ ಸಿಕ್ಕ ಆರೋಪಿಗಳಿಗೆ ಪ್ರತಿಯೊಬ್ಬರಿಗೆ ನಾಲ್ಕು ವರ್ಷ ಸಕ್ರಮಜೂರಿಯ ಶಿಕ್ಷೆ ಕೊಡಲ್ಪಟ್ಟಿತು. ಇದೇ ಸಮಯಕ್ಕೆ ರಾಯ್ ಬ್ರಿಟಿಷ್ ಪ್ರಧಾನಮಂತ್ರಿ ರ್‍ಯಾಮ್ಸೆ ಮ್ಯಾಕಡೊನಲ್ಡ್ ಅವರಿಗೆ ಪತ್ರ ಬರೆದು ಹಿಂದಿನ ಗುನ್ಹೆಗಳನ್ನು ಕ್ಷಮಿಸಿ ಭಾರತಕ್ಕೆ ಮರಳಿ ಹೋಗಲು ಪರವಾನಿಗಿ ಕೊಡಬೇಕು ಎಂದು ಕೇಳಿ

ಕೊಂಡಿದ್ದರು. ಮ್ಯಾಕಡೊನಲ್ಡ್ ಲೇಬರ್ ಪಕ್ಷದ ಪ್ರಧಾನಮಂತ್ರಿ ಇದ್ದುದರಿಂದ ಅವರೂ ತಮ್ಮ ಬಗ್ಗೆ ಸಹಾನುಭೂತಿ ತೋರಿಸಬಹುದೆಂದು ರಾಯ್ ಅವರಿಗೆ ಅನಿಸಿತು.

೧೯೨೪ರ ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಆ ಅಧಿವೇಶನದಲ್ಲಿ ರಾಯ್ ಅವರ ಒಂದು ಜಾಹೀರನಾಮೆಯನ್ನು ಹಂಚಲಾಯಿತು. ಅದರಲ್ಲಿ ಕ್ರಾಂತಿಕಾರಕ ರಾಷ್ಟ್ರವಾದಿ ಪಕ್ಷದ ಕಾರ್ಯಕ್ರಮವಿತ್ತು. ಕಾಂಗ್ರೆಸ್ಸಿನ ಕ್ರಾಂತಿ ವಿರೋಧಿ ನೇತೃತ್ವ ತನ್ನ ಐತಿಹಾಸಿಕ ಕರ್ತವ್ಯ ಮಾಡುವ ಶಕ್ತಿಯನ್ನು ಕಳೆದುಕೊಂಡಿದೆಯಾದ್ದರಿಂದ ಒಂದು ಕ್ರಾಂತಿಕಾರಕ ರಾಷ್ಟ್ರವಾದೀ ಪಕ್ಷದ ಸ್ಥಾಪನೆಯಾಗುವ ಅವಶ್ಯಕತೆಯ ಬಗ್ಗೆ ಅವರಲ್ಲಿ ಆಹ್ವಾನವಿತ್ತು. ಭಾಂಡವಲಶಾಹಿ ಸತ್ತೆಯ ವಿರುದ್ಧ ಅಂತರರಾಷ್ಟ್ರೀಯ ಕಾರ್ಮಿಕರ ಸಂಘರ್ಷದ ಜೊತೆಗೆ ಭಾರತದ ಕಾರ್ಮಿಕರೂ ಕೃಷಿಕರೂ ಸೇರಬೇಕು. ಕ್ರಾಂತಿಕಾರಕ ರಾಷ್ಟ್ರವಾದಿ ಪಕ್ಷಕ್ಕೆ ಕಮ್ಯುನಿಸ್ಟರು ಎಲ್ಲ ರೀತಿಯಿಂದ ಸಹಾಯ ಮಾಡುವರು; ಹೆಗಲಿಗೆ ಹೆಗಲು ಹಚ್ಚಿ ಹೋರಾಡುವರು-ಎಂದೆಲ್ಲ ಬರೆಯಲಾಗಿತ್ತು.

ಆದರೆ ಅಷ್ಟರಲ್ಲೇ, ಅಂದರೆ ೧೯೨೪ರ ಜುಲೈ ತಿಂಗಳಲ್ಲಿ ಕಾನಪುರದಲ್ಲಿಯೇ ಸತ್ಯಭಕ್ತನೆಂಬ ಎಡಪಂಥೀಯ ಕಾಂಗ್ರೆಸ್ ಸದಸ್ಯನೊಬ್ಬ ಇಂಡಿಯನ್ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿಬಿಟ್ಟ. ಜಾನಕಿಪ್ರಸಾದ ಬಾಗರಹಟ್ಟಾ ಆ ಬಗ್ಗೆ ರಾಯ್ ಅವರಿಗೆ ಒಂದು ಪತ್ರ ಬರೆದ. ರಾಯ್ ಅದಕ್ಕೆ ಉತ್ತರ ಬರೆದರು :

"ಭಾರತೀಯ ಕಮ್ಯುನಿಸ್ಟರ ಕೆಲಸ ಕಮ್ಯುನಿಜಮ್ಮದ ಪ್ರಚಾರವಲ್ಲ. ಅವರ ಮುಖ್ಯ ಕೆಲಸ ರಾಷ್ಟ್ರೀಯ ಕ್ರಾಂತಿಯನ್ನು ಸಂಘಟಿಸುವುದಾಗಿದೆ. ಕ್ರಾಂತಿಕಾರಿ–ರಾಷ್ಟ್ರವಾದಿ ಪಕ್ಷದ ಚೈತನ್ಯ ಹಾಗೂ ಸ್ಫೂರ್ತಿಗಳ ಸ್ಥಾನವಾಗುವದು ಕಮ್ಯುನಿಸ್ಟರ ಕೆಲಸ. ಕಾಂಗ್ರೆಸ್ ಪಕ್ಷದಲ್ಲಿದ್ದು ಕ್ರಾಂತಿಕಾರಕ-ರಾಷ್ಟ್ರವಾದಿ ಗುಂಪನ್ನು ಬಲಗೊಳಿಸಿ ಕಾಂಗ್ರೆಸ್ ಪಕ್ಷ

ವನ್ನು ವಶಪಡಿಸಿಕೊಳ್ಳುವದೇ ಕಮ್ಯುನಿಸ್ಟರು ಮಾಡಬೇಕಾದ ಕೆಲಸ."

ರಾಯ್ ಅವರ ವಿಚಾರಸರಣಿಗೆ ಪ್ರತಿಕ್ರಿಯೆ ಬರಲಿಲ್ಲ. ೧೯೨೫ರ ಡಿಸೆಂಬರದಲ್ಲಿ ಕಾನಪುರದಲ್ಲಿ ಭಾರತೀಯ ಕಮ್ಯುನಿಸ್ಟ ಪಕ್ಷದ ಅಧಿವೇಶನ ಜರುಗಿ, ಪಕ್ಷದ ಹೆಸರನ್ನು 'ಕಮ್ಯುನಿಸ್ಟ ಪಾರ್ಟಿ ಆಫ್ ಇಂಡಿಯಾ' ಎಂದು ಇಡಲಾಯಿತು. ರಾಯ್ ಅವರು ಕೂಡಲೆ ಅದಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಆದರೆ ಸಿಂಗಾರವೇಲು ಚೆಟ್ಟಿಯರ ಹಾಗೂ ಹಜರತ ಮೋಹಾನಿಯವರು ಭಾರತೀಯ ಕಮ್ಯುನಿಜಮ್ಮು ಬೋಲ್ಶೆವಿಜಮ್ಮಲ್ಲ; ಬೋಲ್ಶೆವಿಜಮ್ಮು ಭಾರತೀಯ ನೆಲದಲ್ಲಿ ಕಾಲೂರಲಾರದು ಎಂದು ಘೋಷಿಸಿದರು. ರಾಯ್ ಅವರಿಗೆ ಈ ವಿಚಾರ ಸರಿಬರಲಿಲ್ಲ ಹಾಗೂ ಅದನ್ನು ಬಲವಾಗಿ ವಿರೋಧಿಸಿದರು. ಏನೇ ಇದ್ದರೂ ರಾಯ್ ಅವರ ಪ್ರಚಾರದ ಮೂಲಕವೇ ಭಾರತದಲ್ಲಿ ಕಮ್ಯುನಿಸ್ಟ ಪಕ್ಷವು ಅಸ್ತಿತ್ವದಲ್ಲಿ ಬಂತು. ಅದು ಮುಂದೆ ರಾಯ್ ಅವರನ್ನು ಧಿಕ್ಕರಿಸಿತು-ಆ ಮಾತು ಬೇರೆ.

೧೯೨೪ರ ನಂತರ ಉಂಟಾದ ಒಂದು ಸಂಗತಿಯೆಂದರೆ ಇಂಗ್ಲೆಂಡಿನ ಕಮ್ಯುನಿಸ್ಟ ಪಾರ್ಟಿಯು ಮಾಸ್ಕೋದ ಮೇಲೆ ಪ್ರಭಾವ ಬೀರಿ ಭಾರತದಲ್ಲಿಯ ಕಮ್ಯುನಿಸ್ಟ ಪಾರ್ಟಿಯನ್ನು ತನ್ನ ಅಂಕಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿತು. ರಾಯ್ ಅವರಿಗೆ ಇದು ಎಳ್ಳಷ್ಟೂ ಬೇಡವಾಗಿತ್ತು. ಆದರೂ ಕಾಮಿಂಟಾರ್ನಕ್ಕೆ ರಾಯ್ ಅವರನ್ನು ಭಾರತೀಯ ಕಮ್ಯುನಿಸ್ಟ ಪಕ್ಷದಿಂದ ದೂರ ಸರಿಸಬೇಕಿತ್ತು, ಹಾಗೂ ಯುರೋಪದಿಂದಲೇ ಹೊರಗಿಡುವದಿತ್ತು. ಅದಕ್ಕಾಗಿ ಕಾಮಿಂಟರ್ನ್ ಇಂಗ್ಲೆಂಡಿನ ಕಮ್ಯುನಿಸ್ಟ ಪಾರ್ಟಿಗೇ ಭಾರತೀಯರ ರಾಜಕೀಯವನ್ನು ರೂಪಿಸಲು ಆದೇಶ ಕೊಟ್ಟರು. ರಾಯ್ ಅವರ ವಿರೋಧಿಗಳ ಪ್ರಾಬಲ್ಯ ಕಾಮಿಂಟಾರ್ನ್‌ದಲ್ಲಿ ಬೆಳೆಯುತ್ತಿತ್ತು.

ಕಮ್ಯುನಿಸ್ಟ ಇಂಟರ್‌ನ್ಯಾಶನಲ್ಲಿನ ಕಾರ್ಯಕಾರಿ ಸಮಿತಿಯಲ್ಲಿ ಸ್ಟಾಲಿನ್ ತನ್ನ ಪ್ರಾಬಲ್ಯ ಬೆಳೆಸಿದ್ದ. ೧೯೨೫ರಲ್ಲಿ ಚೀನದಲ್ಲಿ ಕಮ್ಯುನಿಸ್ಟ

ಪಾರ್ಟಿಯು ಪರಿಸ್ಥಿತಿಯಲ್ಲಿ ತೊಂದರೆಯುಂಟಾಗಿತ್ತು, ರಾಷ್ಟ್ರೀಯ ಬೂರ್ಜ್ವಾ ಪಾರ್ಟಿಯಾದ ಕುಮಿಂಟಾಂಗದಲ್ಲಿಯೂ ಬದಲಾವಣೆಗಳಾಗಿ, ಎರಡೂ ಪಕ್ಷಗಳ ಸಂಬಂಧದಲ್ಲಿ ಬಿಕ್ಕಟ್ಟು ಉಂಟಾಗಿತ್ತು. ಸ್ಟಾಲಿನ್‌ನಿಗೆ ಕುಮಿಂಟಾಂಗದ ವಿರೋಧ ಕಟ್ಟಿಕೊಳ್ಳುವ ಮನಸ್ಸಿರಲಿಲ್ಲ. ಆದರೆ ಕೃಷಿಕರ ಕ್ರಾಂತಿಯೂ ಆಗಬೇಕೆಂದು ಅವನ ಮನಿಷೆ. ಆದ್ದರಿಂದ ಚೀನದಲ್ಲಿ ಕಮ್ಯುನಿಸ್ಟ್ ಕ್ರಾಂತಿ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿದ್ದು ಅದಕ್ಕೆ ಒಂದು ಹೊಸ ಮಾರ್ಗದ ಅವಶ್ಯಕತೆ ಇತ್ತು. ಕಮ್ಯುನಿಸ್ಟ್ ಪಕ್ಷ ಕುಮಿಂಟಾಂಗ್‌ದ ಒಳಗಿರಬೇಕೋ, ಹೊರಬರಬೇಕೋ ಎಂಬುದು ಕೂಡ ಪ್ರಶ್ನೆಯಾಗಿತ್ತು. ಸ್ಟಾಲಿನ್ ಸೂಚಿಸಿದ್ದೇನೆಂದರೆ ಕಮ್ಯುನಿಸ್ಟ್ ಪಕ್ಷ ಒಳಗೆ ಇರಲೇಬೇಕೆಂದಿಲ್ಲ. ಈ ಬಿಕ್ಕಟ್ಟನ್ನು ಬಗೆಹರಿಸಲು ಸ್ಟಾಲಿನ್ ರಾಯ್ ಅವರನ್ನು ಚೀನದೇಶಕ್ಕೆ ಕಳಿಸಿದ. ಸ್ಟಾಲಿನ್‌ನ ದ್ವಂದ್ವಾತ್ಮಕ ವಿಚಾರಸರಣಿಯನ್ನು ತಲೆಯೊಳಗೆ ಇಟ್ಟುಕೊಂಡು ೧೯೨೭ರಲ್ಲಿ ರಾಯ್ ಚೀನಾಗೆ ಹೋಗಿ ಎರಡು-ಮೂರು ವರ್ಷಗಳ ಹಿಂದೆ ಹೋದ ಹಳೆಯ ಸ್ನೇಹಿತ ಬೊರೊದಿನ್‌ನನ್ನು ಕೂಡಿಕೊಂಡರು.

ರಾಯ್ ಅವರನ್ನು ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ಲು ಚೀನಾಕ್ಕೆ ಕಳಿಸುವಾಗ ರಾಯ್ ಅವರ ವೈಚಾರಿಕ ಶಕ್ತಿಯಲ್ಲಿ ಹಾಗೂ ಅವರ ಜವಾಬದಾರೀ ವ್ಯಕ್ತಿತ್ವದಲ್ಲಿ ಸ್ಟಾಲಿನ್ ಹಾಗೂ ಬುಖಾರಿನ್ ಇಬ್ಬರಿಗೂ ಸಂಪೂರ್ಣ ವಿಶ್ವಾಸವಿತ್ತೆಂಬುದರಲ್ಲಿ ಎಳ್ಳಷ್ಟು ಸಂಶಯವಿಲ್ಲ.

ಆದರೂ ರಶಿಯಾದ ಕಮ್ಯುನಿಸ್ಟ್ ಜಗತ್ತಿನ ರೀತಿ-ನೀತಿಗಳು, ಯುಕ್ತಿ-ಕುಯುಕ್ತಿಗಳು, ಸಂಚು-ಒಳಸಂಚುಗಳು ಬೆಳೆಯುತ್ತ ರಾಜಕಾರಣದ ಮೂಲಕ ರಾಯ್ ಅವರ ನೇರ ಮನಸ್ಸು ಗಾಸಿಗೊಂಡಿರಬೇಕು. ಆದರೂ ಸ್ಟಾಲಿನ್‌ನಲ್ಲಿ ವಿಶ್ವಾಸವಿಟ್ಟು ರಾಯ್ ಕಮ್ಯುನಿಸ್ಟ್ ಕ್ರಾಂತಿಯ ನಿಷ್ಠಾವಂತ ಸೈನಿಕನಂತೆ ಸ್ಟಾಲಿನ್‌ನ ಆದೇಶ ಮೇರೆಗೆ ಚೀನಕ್ಕೆ ನಿರಾಗಸ ಮನಸ್ಸಿನಿಂದಲೇ ಹೋದರೆನ್ನಬೇಕು.

ಅಧ್ಯಾಯ ೪

ಚೀನದಲ್ಲಿ ಕ್ರಾಂತಿಯ ಮಾರ್ಗದರ್ಶನ : ಅಪಜಯ

ಈ ಶತಮಾನದ ಮೂರನೇ ದಶಕದಲ್ಲಿ, ಚೀನದಲ್ಲಿ ಕುವೋಮಿನ್ ಟಾಂಗ್ ಎಂಬ ರಾಷ್ಟ್ರೀಯ ಪಕ್ಷದ ನೇತೃತ್ವದಲ್ಲಿ ಒಂದು ರಾಜ್ಯಕ್ರಾಂತಿ ನಡೆದಿತ್ತು. ಈ ರಾಷ್ಟ್ರೀಯ ಪಕ್ಷದ ಗುರಿಯೆಂದರೆ ಸಾಮ್ರಾಜ್ಯಶಾಹಿಯ ನಾಶ, ಸರಂಜಾಮು ಶಾಹಿಯ ನಾಶ ಹಾಗೂ ರಾಷ್ಟ್ರವಾದಿ ಜನತಂತ್ರದ ಸ್ಥಾಪನೆ. ಚಾಂಗ್ ಕೈ ಶೇಖ್ ಈ ಕುವೊಮಿನ್ ಟಾಂಗದ ನಾಯಕ. ಈ ಪಕ್ಷದ ಸ್ವರೂಪವೇನಿತ್ತೆಂದರೆ-ಆಗಿನ ನಮ್ಮ ಭಾರತೀಯ ಕಾಂಗ್ರೆಸ್ ಪಕ್ಷದಲ್ಲಿದ್ದಂತೆ-ಅದರಲ್ಲಿ ಬಂಡವಾಳಗಾರರಿದ್ದರು, ಮಧ್ಯಮ ವರ್ಗದ ಬಡವರಿದ್ದರು, ಕಾರ್ಮಿಕರಿದ್ದರು, ರೈತರಿದ್ದರು. ಅನಿವಾರ್ಯ ವಾಗಿಯೇ ಕುವೊಮಿನ್ ಟಾಂಗ್‌ನಲ್ಲಿ 'ಎಡ' ಹಾಗೂ 'ಬಲ' ಎಂಬ ಎರಡು ಗಣಗಳಿದ್ದವು. ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ದ ಧೋರಣೆಯ ಮೇರೆಗೆ ಚೀನದ ಕಮ್ಯುನಿಸ್ಟ್ ಪಕ್ಷ ಕುವೊಮಿನ್ ಟಾಂಗ ರೊಡನೆ ಸಹಕರಿಸುತ್ತ ಬಂದಿತ್ತು. ಅದರಲ್ಲೂ ಎಡ-ಗಣದ ನೇತೃತ್ವ ವನ್ನು ತನ್ನ ಕೈಯಲ್ಲಿ ಇಟ್ಟುಕೊಂಡಿತ್ತು. ೧೯೨೩ರಲ್ಲೇ ಅಲ್ಲಿ ಹೋದ ಮೈಕಲ್ ಬೊರೊದಿನ್ (ರಾಯ್ ಅವರ ಮೆಕ್ಸಿಕೋ ಗೆಳೆಯ) ಕಮ್ಯುನಿಸ್ಟ್ ಪಕ್ಷದ ರಾಜಕೀಯ ಸಲಹೆಗಾರನಾಗಿದ್ದ. ಜೊತೆಗೆ ರಶಿಯಾದ ಮಿಲಿಟರಿ ಸಲಹೆಗಾರರೂ ಇದ್ದರು. ರಾಜ್ಯಕ್ರಾಂತಿಯ ಕೆಲಸ, ಕ್ರಾಂತಿಗೆ ಕಮ್ಯುನಿಜಮ್ಮಿನ ದೀಕ್ಷೆ ಕೊಡುವ ಕೆಲಸ ಎಲ್ಲ ಸರಿಯಾಗೇ

ನಡೆದಿತ್ತು. ಆದರೆ ಸಾಮ್ರಾಜ್ಯಶಾಹೀ ಹಾಗೂ ಬಂಡವಾಳಶಾಹಿ ಶಕ್ತಿಗಳು ಸುಮ್ಮನೆ ಕೂತಿರಲಿಲ್ಲ. ಅವು ಕುವೊಮಿನ್ ಟಾಂಗ್‌ದ ಮಹಾ ನಾಯಕನಾದ ಚಾಂಗ್ ಕೈ ಶೇಖನನ್ನೇ ಬುಟ್ಟಿಯಲ್ಲಿ ಹಾಕಿಕೊಂಡು ಕಮ್ಯುನಿಸ್ಟರ ವಿರುದ್ಧ ಕಾರಸ್ಥಾನ ಹೂಡಿದವು.

೧೯೨೭ರ ಮಾರ್ಚಿ ತಿಂಗಳಲ್ಲಿ ಜನರಲ್ ಚಾಂಗ್ ಕೈ ಶೇಖ ಕಮ್ಯುನಿಸ್ಟರ ವಿರುದ್ಧ ಕೃತಿ ನಡೆಸಲು ಆರಂಭಿಸಿದ. ನಿಜವೆಂದರೆ, ರಾಷ್ಟ್ರವಾದಿ ಶಕ್ತಿಗಳು ಕಮ್ಯುನಿಸ್ಟರ ಸಹಾಯದಿಂದಲೇ ಸೈನ್ಯಬಲದ ಮುಖಾಂತರ ಶಾಂಘಾಯ ನಗರವನ್ನು ಗೆದ್ದುಕೊಂಡಿದ್ದವು. ತಮ್ಮ ಧೋರಣೆ–ಯೋಜನೆಗಳು ಯಶಸ್ವಿಯಾಗುತ್ತಿವೆಯೆಂದು ಕಮ್ಯುನಿಸ್ಟರಿಗೆ ಅನಿಸುವಾಗಲೇ ಚಾಂಗ್ ಕೈ ಶೇಖ ವಿಶ್ವಾಸದ್ರೋಹ ಮಾಡಿದ. ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ಶಕ್ತಿಗಳ ಹಸ್ತಕನಾದ ಆತ ಕಮ್ಯುನಿಸ್ಟರ ಉಚ್ಚಾಟನೆಯ ಕೆಲಸ ಪ್ರಾರಂಭಿಸಿದ. ಆಗ ಉದ್ಭವಿಸಿದ ಪ್ರಶ್ನೆಯೆಂದರೆ: ಚೀನದ ಕಮ್ಯುನಿಸ್ಟರು ಕುವೊಮಿನ್‌ಟಾಂಗ್ ಪಕ್ಷದಲ್ಲಿ ಇರಬೇಕೋ? ಹೊರಬೀಳಬೇಕೋ?

ಮಾಸ್ಕೋದ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ನಲ್ಲಿ ಈ ವಿಷಯದಲ್ಲಿ ಮತಭೇದಗಳಿದ್ದರೂ ಕೊನೆಗೆ ಅವರು ನಿರ್ಣಯಿಸಿದ್ದೇನೆಂದರೆ– ಕುವೊಮಿನ್‌ಟಾಂಗ್‌ದಿಂದ ಬೇರೆಯಾಗಬಾರದು; ಆದರೆ ಈ ಪಕ್ಷದ ಎಡ–ಗಣದ ಜೊತೆ ನಿಕಟವಾದ ಸಂಬಂಧವಿಟ್ಟುಕೊಂಡು, ಕಾರ್ಮಿಕ-ರೈತ ಸಂಘಟನೆಗಳನ್ನು ಬಲಪಡಿಸಬೇಕು. ರಾಯ್ ಅವರೂ ಅದೇ ವಿಚಾರದವರಿದ್ದರು: ಕಾರ್ಮಿಕ ಕೃಷಿಕರ ಕ್ರಾಂತಿಯಾಗದಿದ್ದರೆ ಚೀನ ದೇಶಕ್ಕೆ ಸಾಮ್ರಾಜ್ಯವಾದೀ ಹಾಗೂ ಮಿಲಿಟರಿ ಹುಕುಮಶಾಹಿಯಿಂದ ಬಿಡುಗಡೆಯಿಲ್ಲ. ಆದರೆ ಚೀನದ ಕಮ್ಯುಸ್ಟರ ವಿಚಾರ ಬೇರೆನೇ ಇತ್ತು. ಮೊದಲಿಗೆ ರಾಷ್ಟ್ರೀಯ ಬೂರ್ಜ್ವಾ ಶಕ್ತಿಗೆ ರಾಜ್ಯಕ್ರಾಂತಿಯಲ್ಲಿ ಸಹಾಯ ಮಾಡಬೇಕು. ಈಗಲೇ ಯಾವದೇ ಕಲಹ ಪ್ರಾರಂಭಿಸಬಾರದು. ರಾಯ್ ಒಬ್ಬರೇ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ನಲ್ಲಿನ ಕಾರ್ಯಕಾರಿಣಿಯ

ಸಭೆಯಲ್ಲಿ ಚೀನದಲ್ಲಿ ಈಗ ಹೊಸ ಮಾರ್ಗವನ್ನೇ ಕಮ್ಯುನಿಸ್ಟರು ಶೋಧಿಸಬೇಕು ಹಾಗೂ ಕುವೊಮಿನ್‌ಟಾಂಗ್‌ದಿಂದ ಬೇರೆಯಾಗುವ ಪ್ರಸಂಗ ಬಂದರೂ ತಮ್ಮ ಮಾರ್ಗ, ಅಂದರೆ ಕಾರ್ಮಿಕ-ಕೃಷಿಕ ಕ್ರಾಂತಿಯ ಮಾರ್ಗ ಬಿಡಬಾರದು ಎಂದು ಹೇಳಿದರು.

ಚೀನ ದೇಶ ಸೇರಿದ ದಿನದಿಂದಲೇ ರಾಯ್ ಅವರಿಗೆ ಚೀನ ಕಮ್ಯುನಿಸ್ಟ್ ಪಕ್ಷದ ಸಹಕಾರ ಸಹಾನುಭೂತಿ ದೊರೆಯಲಿಲ್ಲ. ಚೀನೀ ಕಮ್ಯುನಿಸ್ಟರಿಗೆ ಈಗಲೇ ಕಾರ್ಮಿಕ–ಕೃಷಿಕರ ಕ್ರಾಂತಿ ಬೇಕಿರಲಿಲ್ಲ. ಅವರ ಹಿಂದೆ ಕಾಮ್ರೆಡ್ ಬೊರೊದಿನ್‌ನ ಬೆಂಬಲವಿತ್ತು. ರಾಯ್-ಬೊರೊದಿನ್ ಈ ಇಬ್ಬರು ಸ್ನೇಹಿತರ ಮಧ್ಯೆ ವಿರೋಧದ ಗೋಡೆ ಎದ್ದು ನಿಂತಿತು. ಚೀನದಲ್ಲಿಯ ಕಮ್ಯುನಿಸ್ಟ್ ಪಕ್ಷದ ಎಲ್ಲ ಕಾರಭಾರ, ಎಲ್ಲ ಆರ್ಥಿಕ ಅಧಿಕಾರ ಬೊರೊದಿನ್‌ನ ಕೈಯಲ್ಲಿದ್ದುದರಿಂದ ರಾಯ್ ಅವರಿಗೆ ಚೀನದಲ್ಲಿ ತೊಂದರೆ ಸುರುವಾಯಿತು.

ಕುವೊಮಿನ್‌ಟಾಂಗದ ಎಡ–ಗಣವೂ ಕಮ್ಯುನಿಸ್ಟರ ಬಗ್ಗೆ ಸಂಶಯ ವ್ಯಕ್ತಪಡಿಸತೊಡಗಿತು. ತಮ್ಮ ಕ್ರಾಂತಿಯನ್ನು ಕಮ್ಯುನಿಸ್ಟರು ತಮ್ಮದೆಂದು ಕಸಿದುಕೊಳ್ಳುತ್ತಿದ್ದಾರೆಂದು ಅವರಿಗನಿಸಿತು. ಚಾಂಗ್ ಕೈ ಶೇಖನಂತೂ ಕೈತೊಳೆದುಕೊಂಡು ಕಮ್ಯುನಿಸ್ಟರ ಬೆನ್ನು ಹತ್ತಿದ: ಕೆಲವರನ್ನು ಹಿಡಿದು ಜೈಲಿನಲ್ಲಿಟ್ಟ; ಕೆಲವರನ್ನು ಗುಂಡು ಹಾಕಿ ಕೊಲ್ಲಿಸಿದ.

ಕುವೊಮಿನ್‌ಟಾಂಗ್‌ದ ಎಡ-ಗಣವು ಉತ್ತರ ಚೀನದಲ್ಲಿ ಸತ್ತಾಧಾರಿಯಾಗಿದ್ದರೂ ರಾಯ್ ಹೇಳುವಂಥ ಕೃಷಿಕರ ಕ್ರಾಂತಿಯನ್ನು ಈಗ ಬೇಡವೆಂದು ಮುಂದೂಡಿದರು. ಬೊರೊದಿನ್‌ಗೂ ಅದೇ ಬೇಕಿತ್ತು. ಬೊರೊದಿನ್ನನ ಮತವೇನೆಂದರೆ ಕ್ರಾಂತಿಯನ್ನು ವ್ಯಾಪಕ ಮಾಡಬೇಕು; ರಾಯ್ ಅವರ ಮತ ಕ್ರಾಂತಿಯನ್ನು ತೀವ್ರತರ ಮಾಡಬೇಕು, ಉಗ್ರವಾಗಿಸಬೇಕು. ಸ್ಟಾಲಿನ್‌ನ ಆದೇಶವನ್ನು ಬೊರೋದಿನ್ ಹಾಗೂ ಚೀನೀ ಕಮ್ಯುನಿಸ್ಟರು ದುರ್ಲಕ್ಷಿಸಿದರು. ಕುವೊಮಿನ್‌ಟಾಂಗ್‌ದ ಎಡ-

ಗಣವು ಚಾಂಗ್ ಕೈ ಶೇಖನ ಬಲ-ಗಣದೊಡನೆ ಒಪ್ಪಂದ ಮಾಡಿಕೊಂಡಿತು. ಕ್ರಾಂತಿ ಸಫಲವಾಗಲಿಲ್ಲ; ಪ್ರತಿಕ್ರಾಂತಿ ಸಫಲವಾಯಿತು! ರಶಿಯಾದ ಕಮ್ಯುನಿಸ್ಟರು ಸಿಕ್ಕ ಮಾರ್ಗದಿಂದ ೧೯೨೭ರ ಜುಲೈನಲ್ಲಿ ಚೀನ ಬಿಟ್ಟು ರಶಿಯಾ ಸೇರಿದರು.

ಮಾಸ್ಕೊದಲ್ಲಿ ರಾಯ್ ಅವರ ಮುಖಭಂಗವಾಯಿತು. ನೇರ ಬರ್ಲಿನಿಗೆ ಹೋಗಿ ಚೀನದ ಬಗ್ಗೆ ರಿಪೋರ್ಟ್‌ನ್ನೂ ಒಂದು ಪುಸ್ತಕವನ್ನೂ ಬರೆಯಲು ಪ್ರಾರಂಭಿಸಿದರು. ಈ ಚೀನದ ಸೋಲಿನಿಂದ ರಾಯ್ ಅವರ ಕಾಮಿಂಟಾರ್ನದಲ್ಲಿಯ ಸ್ಥಾನ ಇನ್ನೂ ಅಸ್ಥಿರವಾಯಿತು. ರಾಯ್ ಅವರ ಮಿತ್ರನಾಗಿದ್ದ ಸ್ಟಾಲಿನ್ ಕೂಡ ರಾಯ್ ಅವರನ್ನು ನೋಡಲು ಬಯಸಲಿಲ್ಲವೆಂದ ಮೇಲೆ ರಾಯ್-ರಶಿಯಾ ಸಂಬಂಧದ ಅವನತಿಯು ಕಾಲ ಸುರುವಾಯಿತು.

೧೯೨೮ರ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ಲಿನ ಆರನೇ ಅಧಿವೇಶನಕ್ಕೆ ರಾಯ್ ಹೋಗಲಿಲ್ಲ. ಆ ಅಧಿವೇಶನದಲ್ಲಿ ರಾಯ್ ಅವರ ವಿರುದ್ಧ ಟೀಕಾಸ್ತ್ರಗಳು ಬಿಡಲ್ಪಟ್ಟವು. ರಾಯ್ ಅಷ್ಟರೊಳಗೇ ಪ್ರತಿಪಾದಿಸಿದ 'ನಿರ್ವಸಾಹತೀಕರಣ' (Decolonization')ದ ವಿಚಾರವನ್ನು ಖಂಡಿಸಿ ಅವರನ್ನು 'ಸಾಮ್ರಾಜ್ಯಶಾಹಿಯ ಹಸ್ತಕ' ಎಂದು ಕರೆಯಲಾಯಿತು. ಚೀನದ ಕಮ್ಯುನಿಸ್ಟ್ ಕ್ರಾಂತಿಯ ಸೋಲಿಗೆ ರಾಯ್ ಅವರೇ ಸಂಪೂರ್ಣ ಜವಾಬ್ದಾರರೆಂದು ಸೂಚಿಸಲಾಯಿತು.

ಒಂದು ವರ್ಷದ ನಂತರ ರಾಯ್ ಬರೆದ ಒಂದು ಲೇಖನದ ನೆಪ ಮಾಡಿ ರಾಯ್ ಅವರನ್ನು ಕಾಮಿಂಟಾರ್ನದಿಂದಲೂ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ಲಿನ ಕಾರ್ಯಕಾರಿಣಿಯಿಂದಲೂ ಅಫೀಶಿಯಲ್ಲಾಗಿ ತೆಗೆದು ಹಾಕಲಾಯಿತು. ಈ ಎಲ್ಲ ಘಟನೆಗಳ ಹಿಂದೆ ರಶಿಯಾದಲ್ಲಿ ನಡೆಯುತ್ತಿದ್ದ ಸತ್ತೆಯ ರಾಜಕೀಯ, ಸ್ಟಾಲಿನ್ನನ ಹೊಸ ಗುಂಪಿನ ಸತ್ತೆಯ ಪ್ರಭುತ್ವದ ಕಾರಸ್ಥಾನಗಳಿದ್ದು, ಅಲ್ಲಿಯ ಅಂತರಿಕ ಸತ್ತೆಯ ಪೈಪೋಟಿಗೆ ರಾಯ್ ಬಲಿಯಾದವರೆಂದು ಹೇಳಬಹುದಾಗಿದೆ. ಸ್ಟಾಲಿನ್-

ಬುಖಾರಿನ್‌ರ ನಡುವಿನ ಸತ್ತೆಯ ಸ್ಪರ್ಧೆಯು ಬುಖಾರಿನ್ನನಿಗೆ ಹೆಚ್ಚು ಹತ್ತಿರನಾದ ಅವರ ಮೇಲೆ ಆಘಾತ ಬಿದ್ದಿರಬೇಕೆಂದೂ ರಾಯ್ ಕೆಲವರ ಊಹೆ.

ಜರ್ಮನಿಯಲ್ಲಿಯೂ ಕಮ್ಯೂನಿಸ್ಟರ ಪರಿಸ್ಥಿತಿ ಅತ್ಯಂತ ಗಂಭೀರವಾಗಿತ್ತು. ಯುರೋಪದಲ್ಲಿ ಕಮ್ಯೂನಿಸ್ಟ ಇಂಟರ್‌ನ್ಯಾಶನಲ್ಲರ ಹಿಡಿತ ಸಂಪೂರ್ಣ ಹೋಗಿ ಬಿಟ್ಟಿತ್ತು. ಭಾರತದಲ್ಲಿಯೂ ಪರಿಸ್ಥಿತಿ ಗಂಭೀರವಾಗಿತ್ತು. ೧೯೨೯ರಲ್ಲಿ ಎಲ್ಲ ಕಮ್ಯೂನಿಸ್ಟ ಮುಖಂಡರನ್ನು ಬಂಧಿಸಲಾಗಿತ್ತು. ಅಲ್ಲಿಯ ಕಮ್ಯೂನಿಸ್ಟ್ ಚಳುವಳಿ ತೀರ ಅವನತಿಯ ಸ್ಥಿತಿಯಲ್ಲಿತ್ತು. ರಾಯ್ ಅವರಿಗೆ ಭಾರತಕ್ಕೆ ಹೋಗಿ-ಅವರ ಮೇಲೆ ಕಾನಪುರ-ಮೀರಜ ಕಾರಸ್ಥಾನಗಳ ಬಗೆಗಿನ ಮೊಕದ್ದಮೆಗಳಲ್ಲಿ ಮುಖ್ಯ ಆರೋಪಿಯೆಂದು ವಾರಂಟಿದ್ದರೂ, ಅದಕ್ಕಾಗಿ ತೆತ್ತಬೇಕಾದ ಶಿಕ್ಷೆಯನ್ನು ಅನುಭವಿಸಲು ಸ್ಥಿರನಾಗಿ ಪ್ರತ್ಯಕ್ಷ ಅಲ್ಲಿದ್ದು ಕ್ರಾಂತಿಯ ಕೆಲಸ ಮಾಡುವ ತೀವ್ರ ಮನಸ್ಸಾಯಿತು. ೧೯೩೦ರ ನವೆಂಬರ ೧೪ಕ್ಕೆ ಯುರೋಪ ಬಿಟ್ಟು ಭಾರತಕ್ಕೆ ಹೊರಟು ನಿಂತರು. ಅವರು ಯುರೋಪ ವಾಸ್ತವ್ಯದ ಕೊನೆಯ ವಾರವನ್ನು ತಮ್ಮ ಭಾವಿ ಪತ್ನಿ ಎಲೆನ್ ಗೊಡ್‌ಶಾಕ್‌ಳೊಡನೆ ಆಲ್ಪ್ಸ್ ಪರ್ವತದಲ್ಲಿಯ ಒಂದು ಹಿಲ್‌ಸ್ಟೇಶನ್ನಿನಲ್ಲಿ ಕಳೆದು, ಡಾ. ಮಹಮೂದ ಎಂದು ಹೆಸರಿಟ್ಟುಕೊಂಡು, ಕರಾಚಿ ಮಾರ್ಗವಾಗಿ ಮುಂಬಯಿಗೆ ೧೯೩೦ರ ಡಿಸೆಂಬರ ತಿಂಗಳಲ್ಲಿ ಬಂದು ತಲುಪಿದರು.

ಮುಂದಿನ ಘಟ್ಟಕ್ಕೆ ಹೋಗುವ ಮೊದಲು, ಯಾವ 'ನಿರ್ವಸಾಹತೀಕರಣ'ದ ವಿಚಾರಸರಣಿಯ ನೆಪದಿಂದ ರಾಯ್ ಅವರನ್ನು ಕಾಮಿಂಟಾರ್ನ್‌ದಿಂದ ತೆಗೆದು ಹಾಕಲಾಯಿತೋ ಆ 'decolonisation'ದ ಪರಿಕಲ್ಪನೆಯ ಬಗ್ಗೆ ಸ್ವಲ್ಪ ಹೇಳಬೇಕು. ಯಾಕೆಂದರೆ, ಮುಂದೆ ಭಾರತದಲ್ಲಿ ಈ ಪರಿಕಲ್ಪನೆಯನ್ನು ಕಾರ್ಯರೂಪದಲ್ಲಿಳಿಸಲು ರಾಯ್ ಯತ್ನಿಸಿದ್ದುಂಟು.

ರಾಯ್ ಅವರು ಯಾವಾಗಲೂ ವೈಚಾರಿಕ ಸ್ವಾತಂತ್ರ್ಯದಲ್ಲಿ ಗಾಢವಾದ ನಿಷ್ಠೆ ಇಟ್ಟವರು ಹಾಗೂ ತಮಗೆ ಅನಿಸಿದ್ದನ್ನು ಯಾರ ಮುಲಾಜಿಲ್ಲದೆ ವ್ಯಕ್ತಪಡಿಸುವ ಬೌದ್ಧಿಕ ಧೈರ್ಯ ಇದ್ದವರು. ರಶಿಯದಲ್ಲಿ ಸುಮ್ಮನೆ ಬಾಯಿಮುಚ್ಚಿ ಕೊಂಡು ಸತ್ತಾಧಾರಿಗಳ ಮಾತು ಕೇಳಿಕೊಂಡು ಅವರು ಹೇಳಿದ ಕೆಲಸ ಮಾಡಿಕೊಂಡು ಪ್ರ್ಯಾಕ್ಟಿಕಲ್ ರಾಜಕಾರಣಿಯಂತೆ ಇರುವುದು ರಾಯ್ ಅವರ ಮೂಲ ವ್ಯಕ್ತಿತ್ವಕ್ಕೆ ಒಗ್ಗದಂಥ ಮಾತು. ಅಂತೇ ಕಮ್ಯುನಿಜಮ್ಮನ್ನು ನಿಷ್ಠಾವಂತನಾಗಿಯೇ ಆಚರಿಸುವಾಗ ಕೂಡ ಅವರಲ್ಲಿ ಮಾರ್ಕ್ಸ್‌ನ ಮೂಲತತ್ವಗಳ ಬಗ್ಗೆ ಚಿಂತನೆ ನಡೆದೇ ಇತ್ತು. ಮಾರ್ಕ್ಸ್‌ನ ವಿಚಾರಸರಣಿಯನ್ನು ಬೆಳೆಸುವದರತ್ತ, ಅದರಲ್ಲಿ ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡುವದರತ್ತ ರಾಯ್ ಅವರ ಧ್ಯಾಸವಿತ್ತು.

'ನಿರ್ವಸಾಹತೀಕರಣ' (decolonjsation)

'ನಿರ್ವಸಾಹತೀಕರಣ' (decolonisation) ಎಂಬ ಪದ ಮುಂದೆ ಮಹತ್ವ ಪಡೆದದ್ದು ಫ್ರಾಂಜ್ ಫ್ಯಾನೊನ The Wretched of the Earth ಪುಸ್ತಕದಲ್ಲಿಯ ಅವನ ವಾದಸರಣಿಯಲ್ಲಿ. ಫ್ಯಾನೋ ಈ ಪದವನ್ನು ವಸಾಹತುಗಳು ಸಾಮ್ರಾಜ್ಯಶಾಹಿಯಿಂದ ಪಡೆಯುವ ಬಿಡುಗಡೆ ಎಂಬ ಅರ್ಥದಲ್ಲಿ ಉಪಯೋಗಿಸುತ್ತಾನೆ. ರಾಜಕೀಯ ಡಿಕಲೋನೈಜೇಶನ್ ಹಾಗೂ ನಂತರ ಬರುವ ಸಾಂಸ್ಕೃತಿಕ ಡಿಕಲೋನೈಜೇಶನ್ನದ ಬಗ್ಗೆ ಫ್ಯಾನೋ ಮಾತಾಡುತ್ತಾನೆ. ಆದರೆ ರಾಯ್ ಅವರು ಈ ಪದವನ್ನು ಸಾಮ್ರಾಜ್ಯಶಾಹಿಗೆ ಸಂಬಂಧಿಸಿದಂತೆ ಅರ್ಥೈಸುತ್ತಾರೆ. ಹಲವಾರು ಕಾರಣಗಳ ಮೂಲಕ ಸಾಮ್ರಾಜ್ಯಶಾಹಿ–ಬಂಡವಾಳಶಾಹಿಯು ಪ್ರಪಂಚದಲ್ಲಿ ಬಿಕ್ಕಟ್ಟು ಬಂದೊದಗಿ ಅದು 'ನಿರ್ವಸಾಹತೀಕರಣ'ದ ಪ್ರಕ್ರಿಯೆಗೆ ಒಳಗಾಗುತ್ತದೆ. ಅಂದರೆ ವಸಾಹತುಗಳ ಮೇಲಿನ ಅದರ ಹಿಡಿತ ಕಡಿಮೆಯಾಗುತ್ತದೆ, ಸಡಿಲವಾಗುತ್ತದೆ.

ಪೂರ್ಣ ಔದ್ಯೋಗೀಕರಣಗೊಂಡ ದೇಶಗಳಲ್ಲಿಯ ಹೆಚ್ಚಿನ (surplus) ಬಂಡವಾಳವು ವಸಾಹತುಗಳಲ್ಲಿ ವಿನಿಯೋಗಿಸಲ್ಪಡುತ್ತದೆ- ಈ ವಿನಿಯೋಗದಿಂದ ಹೆಚ್ಚಿನ ಲಾಭ ಪಡೆಯುವ ಉದ್ದೇಶವಿರುತ್ತದೆ.

ಸಾಮ್ರಾಜ್ಯಶಾಹೀ ಬಂಡವಾಳಶಾಹಿಯು ಮೊದಲ ಘಟ್ಟ ಅತ್ಯಂತ ಲಾಭಕಾರಿಯಾಗಿರುತ್ತದೆ. ವಸಾಹತುಗಳಲ್ಲಿದ್ದ ಸರಂಜಾಮುಶಾಹಿಯು ಮೂಲಕ ಅಲ್ಲಿಯ ದುಡಿಮೆಗಾರರ ಶೋಷಣೆಯನ್ನು ಸುಲಭವಾಗಿ ಮಾಡಬಹುದಾಗಿದೆ.

ಆದರೆ ಜಗತ್ತಿನ ಮಾರ್ಕೆಟ್ಟಿನಲ್ಲಿ ಸ್ಪರ್ಧೆ ಹೆಚ್ಚಾದಂತೆ ಆ ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ದೇಶಗಳು ತಮ್ಮ ದೇಶಗಳಲ್ಲಿಯ ಯಂತ್ರ-ಸಾಮುಗ್ರಿಗಳ ಆಧುನೀಕರಣದಲ್ಲಿ ಲಾಭದ ಹೆಚ್ಚಿನ ಹಣವನ್ನು ವಿನಿಯೋಗಿಸಬೇಕಾಗುತ್ತದೆ.

ಇದರ ಫಲವಾಗಿ, ವಸಾಹತುಗಳಲ್ಲಿ ಬಂಡವಾಳವನ್ನು ವಿನಿಯೋಗಿಸುವದು ಕಡಿಮೆಯಾಗುತ್ತದೆ. ಜಗತ್ತಿನ ಮಾರ್ಕೆಟ್ಟಿನಲ್ಲಿ ಸ್ಪರ್ಧೆ ಬೆಳೆದಂತೆ ಆ ದೇಶಗಳಲ್ಲಿಯ ಬಂಡವಾಳದ ಸರ್ಪ್ಲಸ್ಸೂ ಕಡಿಮೆಯಾಗುತ್ತದೆ.

ಸಾಮ್ರಾಜ್ಯಶಾಹೀ ದೇಶಗಳ ಮುಂದೆ ಗಂಭೀರ ಸಮಸ್ಯೆಯುಂಟಾಗುತ್ತದೆ : ವಸಾಹತುಗಳಲ್ಲಿಯ ಸರಂಜಾಮುಶಾಹೀ ಅರ್ಥವ್ಯವಸ್ಥೆ ಈಗ ಆ ದೇಶಗಳಿಗೆ ಉಪಯೋಗವಾಗುವದಿಲ್ಲ. ವಸಾಹತುಗಳನ್ನು ಔದ್ಯೋಗಿಕರಣಗೊಳಿಸುವದೊಂದೇ ಅವರಿಗೆ ಉಳಿದ ಮಾರ್ಗವಾಗುತ್ತದೆ. ಅವುಗಳಿಗೆ ವಸಾಹತುಗಳಲ್ಲಿಯ ಭೂಮಿಯ ಉಪಯೋಗ ಕಡಿಮೆಯಾಗುತ್ತದೆ....ಆದ್ದರಿಂದ ಸಾಮ್ರಾಜ್ಯಶಾಹೀ ದೇಶಗಳು ವಸಾಹತುಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡುತ್ತಾರೆ. ವಸಾಹತುಗಳಲ್ಲಿಯ ಔದ್ಯೋಗಿಕರಣ ಬೆಳೆದಂತೆ ಸಾಮ್ರಾಜ್ಯಶಾಹಿ ತನ್ನ ಪ್ರಭುತ್ವ ಕಳೆದುಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ.ಸಾಮ್ರಾಜ್ಯಶಾಹೀ ಬೂರ್ಜ್ವಾ ಸರಕಾರವು ತನ್ನ ವಸಾಹತುಗಳಿಗೆ ಅಧಿಕಾರ ಒಪ್ಪಿಸುವ

ಅನಿವಾರ್ಯತೆ ಬಂದೊದಗುತ್ತದೆ. ಇದಕ್ಕೇ ರಾಯ್ 'ನಿರ್ವಸಾಹತೀಕರಣ' ಅನ್ನುವದು.

ರಾಯ್ ಅವರ ಈ ವಿಚಾರಸರಣಿ ಸಾಮ್ರಾಜ್ಯಶಾಹೀ ಎಂದರೆ ಬರೇ ಶೋಷಣೆ ಮಾಡುವ ಸರ್ವಾಧಿಕಾರತ್ವ ಎಂಬ ಹಳೆಯ ಮಾರ್ಕ್ಸ್‌ವಾದೀ ವಿಚಾರಸರಣಿಗೆ ಭಿನ್ನವಾದದ್ದರಿಂದ ಪರಂಪರಾಗತ ಕಮ್ಯುನಿಸ್ಟರು ರಾಯ್ ಅವರನ್ನು ವಿರೋಧಿಸುವದು ಅನಿವಾರ್ಯವಾಗಿತ್ತು.

ರಾಯ್ ಅವರು ತಮ್ಮ ವಿಚಾರಸರಣಿ ಬಿಟ್ಟುಕೊಡಲಿಲ್ಲ. ಅವರು ತಮ್ಮ ಭವಿಷ್ಯವಾಣಿಯಿಂದ ಯಾವಾಗಲೂ ಹೇಳುತ್ತಿದ್ದರು: 'ಬ್ರಿಟಿಷರು ಭಾರತಕ್ಕೂ ಉಳಿದ ವಸಾಹತುಗಳಿಗೂ ಸ್ವಾತಂತ್ರ್ಯ ಪ್ರಧಾನ ಮಾಡುವ ಸಮಯ ಸಮೀಪ ಬಂದಿದೆ'ಯೆಂದು. ಅಷ್ಟರಲ್ಲಿಯೇ ಭಾರತದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕತ್ವದಲ್ಲಿ ಬದಲು ತರಬೇಕು ಹಾಗೂ ಕಮ್ಯುನಿಸ್ಟ ಚಳುವಳಿಯನ್ನು ಶಕ್ತಿಯುತಗೊಳಿಸಬೇಕೆಂದು ರಾಯ್ ಇಚ್ಛಿಸಿದರು.

ಆದರೆ ಭಾರತೀಯ ಕಮ್ಯುನಿಸ್ಟರು ಬ್ರಿಟಿಷ್ ಕಮ್ಯುನಿಸ್ಟರ ಅಂಕಿತದಲ್ಲಿದ್ದು, ಮಾಸ್ಕೋದಿಂದ ಹೊರಗೆ ತಳ್ಳಲ್ಪಟ್ಟ ರಾಯ್ ಅವರ ಬಗ್ಗೆ ಸಹಾನುಭೂತಿ ತೋರಿಸಲಿಲ್ಲ. ತದ್ವಿರುದ್ಧವಾಗಿ, ರಾಯ್ ಅವರ ಅವಹೇಳನ ಮಾಡುವದು ಅವರ ಮುಖ್ಯ ಕೆಲಸಗಳಲ್ಲೊಂದಾಯಿತು.

ಇಂಥ ಪರಿಸ್ಥಿತಿಯಲ್ಲಿ ಮಾನವೇಂದ್ರನಾಥ ರಾಯ್ ಅವರು ಸುಮಾರು ಹದಿನಾಲ್ಕು ವರ್ಷಗಳ ಪರದೇಶ ವಾಸದ ನಂತರ ಮಾತೃಭೂಮಿಯ ಮೇಲೆ 'ತಿರಸ್ಕೃತ' ಕಮ್ಯುನಿಸ್ಟನೆಂದು, ಕಾಲಿರಿಸಿದರು.

ಅಧ್ಯಾಯ ೫

ರ್ಯಾಡಿಕಲ್ ಡೆಮೊಕ್ರೆಟಿಕ್ ಪಕ್ಷದ ಸ್ಥಾಪನೆ

ಮುಂಬಯಿಗೆ ಡಾ. ಮಹಮೂದ ಎಂಬ ಹೆಸರಿನಲ್ಲಿ ಬಂದಿಳಿದ ನಂತರ ರಾಯ್ ಅವರಿಗೆ ಅವರ ಸ್ನೇಹಿತರ ಪ್ರಯತ್ನದಿಂದ ಏಳು ತಿಂಗಳುಗಳ 'ಸ್ವತಂತ್ರ' ಅಜ್ಞಾತವಾಸ ಪ್ರಾಪ್ತವಾಯಿತು. ಅದೂ ಒಂದು ಅದ್ಭುತರಮ್ಯ ಕತೆಯೇ. ಆದರೆ ಕಡೆಗೆ ಇಲ್ಲಿ ಅವಕಾಶವಿಲ್ಲ. ಈ ಅಜ್ಞಾತವಾಸದಲ್ಲಿ ಅವರು ಮಾಡಿದ ಕಾರ್ಯ ಅಷ್ಟಿಷ್ಟಲ್ಲ. ಬ್ರಿಟಿಷ್ ಸರಕಾರದ ಪೋಲಿಸರು ಅವರ ಬೆನ್ನು ಹತ್ತಿದ್ದರೂ, ಅವರು ಸ್ವತಂತ್ರ ವಾಗಿ ಆಗಾಗ್ಗೆ ವೇಷ, ಹೆಸರು ಬದಲಿಸಿ ಧೈರ್ಯದಿಂದ ಮುಂಬಯಿ, ಕರಾಚಿ, ಉತ್ತರ ಹಿಂದುಸ್ತಾನದಲ್ಲಿ ತಮಗೆಲ್ಲಿ ಬೇಕೋ ಅಲ್ಲಿ ಹೋಗಿ ಸಾಕಷ್ಟು ರಾಜಕೀಯ ಮುಖಂಡರಿಗೆ ಭೆಟ್ಟಿಯಾದರು. ಎಷ್ಟೋ ಸಲ ಕಾರ್ಮಿಕರ ಸಭೆಗಳಲ್ಲಿ ಗುಪ್ತರೀತಿಯಲ್ಲಿ ಹಾಜರಿರುತ್ತಿದ್ದರು. ಎಷ್ಟೋ ಕಡೆ ಭಾಷಣಗಳನ್ನೂ ಕೊಟ್ಟರು. ಜವಹರಲಾಲ ನೆಹರು ಅವರ ಆಮಂತ್ರಣದ ಮೇರೆಗೆ (ನೆಹರೂ ೧೯೨೭ರಲ್ಲಿ ಮಾಸ್ಕೋಕ್ಕೆ ಹೋದಾಗ ರಾಯ್ ಅವರ ಭೆಟ್ಟಿಯಾಗಿತ್ತು. ಭಾರತಕ್ಕೆ ರಾಯ್ ಮರಳಿದ ನಂತರ ಅವರಿಬ್ಬರ ನಡುವೆ ಪತ್ರವ್ಯವಹಾರವೂ ಆಗಿರಬೇಕು.) ರಾಯ್ ಅವರು ೧೯೩೧ರ ಕಾಂಗ್ರೆಸ್ಸಿನ ಕರಾಚಿ ಅಧಿವೇಶನಕ್ಕೆ ಶ್ರೀ ಬ್ಯಾನರ್ಜಿ ಎಂದು ಹೋಗಿದ್ದರು. ಅಧಿವೇಶನದಲ್ಲಿ ರಾಯ್ ಅವರು ನೆಹರೂ ಅವರ ಜೊತೆ ಸಾಕಷ್ಟು ಚರ್ಚೆ ಮಾಡಿದರಲ್ಲದೆ, ಇತರ

ಮುಖಂಡರೊಡನೆ, ಅದರಲ್ಲೂ ಸುಭಾಷಚಂದ್ರ ಬೋಸ್‌ರ ಜೊತೆ, ವಿಚಾರ ವಿನಿಮಯ ಮಾಡಿದರು. ಸೋವಿಯಟ್ ರಶಿಯಾಕ್ಕೆ ಹೋಗಿ ಬಂದ ನಂತರ ನೆಹರೂ ಅವರ ಮನಸ್ಸು ಸಮಾಜವಾದದ ಕಡೆಗೆ ಒಲಿದದ್ದು ಎಲ್ಲ ಕಾಂಗ್ರೆಸಿಗರಿಗೆ ಗೊತ್ತಿತ್ತು. ರಾಷ್ಟ್ರೀಯ ಆಂದೋಲನ ವನ್ನು ಸಮಾಜವಾದದತ್ತ ಒಯ್ಯುವ ಅವರ ಪ್ರಯತ್ನವಿತ್ತು. ರಾಯ್ ಅವರ ವಿಚಾರಗಳ ಬಗ್ಗೆ ನೆಹರೂ ಅವರಿಗೆ ಆದರ ಉಂಟಾಗಿದ್ದರಿಂದಲೇ ಅವರ ಉಪಯೋಗ ಮಾಡಿಕೊಳ್ಳಲು ಅವರನ್ನು ಕರಾಚಿಗೆ ಕರೆದಿದ್ದರು. ಗಾಂಧಿ–ಆಯರ್ವಿನ್ ಕರಾರಿಗೆ ಕಾಂಗ್ರೆಸ್ಸು ಅನುಮತಿ ಕೊಟ್ಟಿತಾದರೂ ರಾಯ್ ಅವರ ಬಗ್ಗೆ ನೇರ ಅಸಮಾಧಾನ ವ್ಯಕ್ತಪಡಿಸಿದರು. ಗಾಂಧೀಜಿ ಯವರ ನೇತೃತ್ವದ ಸಂಪೂರ್ಣ ಹಿಡಿತ ಕಾಂಗ್ರೆಸಿನ ಮೇಲೆ ಇದೆಯೆಂದು ಗುರುತಿಸಿಯೂ ಕಾಂಗ್ರೆಸಿನೊಳಗೇ ಒಂದು ಕ್ರಾಂತಿಕಾರಿ ಎಡ-ಗಣದ ಇನ್ನೊಂದು ನೇತೃತ್ವದ ಕೇಂದ್ರ ಸಿದ್ಧ ಮಾಡಲೇಬೇಕೆಂದು ಯೋಚಿಸಿದರು.

ಅಷ್ಟರಲ್ಲಿ ೧೯೩೧ರ ಜುಲೈ ೨೧ ರಂದು ಮುಂಬಯಿಯಲ್ಲಿ ರಾಯ್ ಅವರನ್ನು ಬಂಧಿಸಲಾಯಿತು. (ಅದಕ್ಕೆ ತುಂಬ ಮಾತನಾಡುವ ಕವಿ ಹರೀಂದ್ರನಾಥ ಚಟ್ಟೋಪಾಧ್ಯಾಯ ಅವರ ವಾಚಾಳಿತನ ಕಾರಣ ವಾಯಿತು.) ಅವರ ಮೇಲೆ ಹೂಡಿದ ಮೊಕದ್ದಮೆಯಲ್ಲಿ ಸರಕಾರವು ಕಾನಪುರ-ಮೀರತ ಕಾರಸ್ಥಾನಗಳಲ್ಲಿ ಭಾಗವಹಿಸಿದ ಆರೋಪಗಳೊಡನೆ ಹಳೆಯ ಕ್ರಾಂತಿಕಾರೀ ಆರೋಪಗಳೂ ಸಮಾವೇಶಗೊಂಡಿದ್ದವು.

ರಾಯ್ ಅವರು ತಮ್ಮ ಸ್ವರಕ್ಷಣೆಯ ನಿವೇದನೆಯಲ್ಲಿ ಕ್ರಾಂತಿ ಎಂದರೇನು, ಕ್ರಾಂತಿಯ ಐತಿಹಾಸಿಕ ಅವಶ್ಯಕತೆ ಎಂದರೇನು ಇತ್ಯಾದಿ ವಿಷಯಗಳಿವೆ. ಅವರಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಖಂಡನೆಯ ಜೊತೆಗೆ,ಭಾರತದ ಬೂರ್ಜ್ವಾ ಬಂಡವಾಳಶಾಹಿಯ ಖಂಡನೆಯೂ ಇದೆ. "ಕ್ರಾಂತಿಯೆಂದರೆ ದೇಶದ ಐತಿಹಾಸಿಕ ಪರಿಸ್ಥಿತಿಯಿಂದ ನಿರ್ಮಾಣವಾಗು ತ್ತದೆ, ಕ್ರಾಂತಿಯ ಪ್ರಕ್ರಿಯೆ ಉಳಿದವರಿಗಿಂತ ಮುಂಚೆ ನನಗೆ ಗೊತ್ತಾದದ್ದು ನನ್ನ ಭಾಗ್ಯ, ನನ್ನ ಶ್ರೇಯಸ್ಸು. ಕ್ರಾಂತಿಗೆ ನಾನು

ಜವಾಬದಾರನಲ್ಲ. ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ ಜವಾಬ್ದಾರನಲ್ಲ. ಸಾಮ್ರಾಜ್ಯಶಾಹಿಯೇ ಕ್ರಾಂತಿಗೆ ಜವಾಬ್ದಾರವಿರುತ್ತದೆ. ನನಗೆ ಶಿಕ್ಷೆ ಮಾಡಿದಿರೆಂದು ಕ್ರಾಂತಿ ನಿಲ್ಲುತ್ತದೆಯೇ ?"

ರಾಯ್ ಅವರಿಗೆ ೧೨ ವರ್ಷದ ಜೇಲುವಾಸದ ಶಿಕ್ಷೆಯಾಯಿತು. ಮತ್ತೆ ಅಪೀಲು ಮಾಡಿಕೊಂಡ ನಂತರ ಶಿಕ್ಷೆಯನ್ನು ಆರು ವರ್ಷಕ್ಕೆ ಇಳಿಸಲಾಯಿತು.

ಜೇಲಿನಲ್ಲಿ–ಕಾನಪುರ, ಬರೇಲಿ, ಅಲಮೋಡ ಹಾಗೂ ಡೆಹರಾಡೂನ ಒಟ್ಟು ೫ ವರ್ಷ ೪ ತಿಂಗಳು ರಾಯ್ ಅವರು ಕಳೆದರು. ಜೇಲುವಾಸದಲ್ಲಿ ಅವರ ಉಕ್ಕಿನಂತಹ ದೇಹ ಕಾಯಿಲೆಯಿಂದ, ಅಶಕ್ತತೆಯಿಂದ ಅಸ್ಥಿಪಂಜರವಾಯಿತು... ಆದರೆ ಜೇಲಿನಲ್ಲಿದ್ದಷ್ಟು ವರ್ಷ ಅವರು ವಿಜ್ಞಾನ, ತತ್ವಜ್ಞಾನ, ರಾಜಕಾರಣ, ಸಮಾಜವಿಜ್ಞಾನ ಇತ್ಯಾದಿ ವಿಷಯಗಳನ್ನು ಗಹನವಾಗಿ ಅಭ್ಯಸಿಸಿದರು. ಅವರ ಭಾವೀ ಪತ್ನಿ ಎಲೆನ್ ಹಾಗೂ ಇವರ ಜರ್ಮನ್ ಸ್ನೇಹಿತರು ಸಾಕಷ್ಟು ಗ್ರಂಥಗಳನ್ನು ಕಳಿಸಿಕೊಡುತ್ತಿದ್ದರು. ಗಾಂಧೀಜಿಯವರಂತೆ ಚರಖವನ್ನು ತಿರುವುದನ್ನೂ ಕಲಿತರು....ಓದುವುದರ ಜೊತೆಗೆ ಸಾಕಷ್ಟು ಲೇಖನಗಳನ್ನು ಬರೆದರು. ಶಿಕ್ಷೆಯ ಮುಕ್ತಾಯ ಸಮೀಪ ಬಂದಾಗ, ರಾಯ್ ಅವರು ಎಲೆನ್‌ಗೆ ಬರೆದ ಪತ್ರದಲ್ಲಿ ತಾವು ಇನ್ನೂ ಐದು ವರ್ಷ ವಿಜ್ಞಾನ–ತತ್ವಜ್ಞಾನಗಳ ಲಕ್ಷ್ಯ ಕೇಂದ್ರೀಕರಿಸಿದರೆ ಆ ಸಂಶೋಧನೆಯಿಂದ ಏನಾದರೂ ಒಂದು ಶಾಶ್ವತ ಗ್ರಂಥ ಬರೆಯಬಹುದು ಎಂಬ ಆಶೆ ವ್ಯಕ್ತಪಡಿಸಿದ್ದಾರೆ. ಜೊತೆಗೆ ಬಹುಶಃ ಕ್ರಾಂತಿಯ ಸಲುವಾಗಿ ಭಾರತ ಪಕ್ವವಾಗಿಲ್ಲವೇನೋ ಎಂದು ನಿರಾಶೆಯನ್ನೂ ವ್ಯಕ್ತಪಡಿಸಿದ್ದಾರೆ. 'ಭಾರತ ಇನ್ನೂ ಹದಿನೈದನೆಯ ಶತಮಾನದಲ್ಲಿದ್ದಂತಿದೆ; ಸಾಮಾಜಿಕ ಗತಿಹೀನತೆ, ದಾರಿದ್ರ್ಯ, ಅಜ್ಞಾನ–ಇವೆಲ್ಲ ನೋಡಿದರೆ ಮನಸ್ಸು ವಿಷಣ್ಣವಾಗುತ್ತದೆ. ದುರ್ದೈವದ ಮಾತೆಂದರೆ ಭಾವಿ ಸೂತ್ರಧಾರಿ

ಗಳಿಗೆ ನಮ್ಮ ಪರಿಸ್ಥಿತಿಯ ಸ್ವರೂಪ ಹಾಗೂ ಗಾಂಧೀಯರ್ಗೆ ತಿಳಿದಿಲ್ಲ ವೇನೋ, ಎಂದು ಒಮ್ಮೊಮ್ಮೆ ಹಳಹಳಿಸಿದ್ದುಂಟು.

೧೯೩೬ ನವೆಂಬರದಲ್ಲಿ ರಾಯ್ ಬಿಡುಗಡೆಯಾಗಿ ಬಂದ ನಂತರ ಮೊದಲಿಗೆ ಜವಹರಲಾಲ ನೆಹರೂ ಅವರನ್ನು ಭೆಟ್ಟಿಯಾದರು. ಮುಂದೆ ಸ್ವಲ್ಪ ದಿನಗಳಲ್ಲಿ ಜರ್ಮನಿಯಿಂದ ಬಂದ ಎಲಿನ್‌ರೊಡನೆ ಮುಂಬಯಿಯಲ್ಲಿ ರೆಜಿಸ್ಟರ್ಡ್ ಪದ್ಧತಿಯಿಂದ ವಿವಾಹಬದ್ಧರಾದರು.

ಭಾರತೀಯ ಕಮ್ಯುನಿಸ್ಟ್ ಪಾರ್ಟಿಯಂತೂ ರಾಯ್ ಹಾಗೂ ರಾಯ್ ಗುಂಪಿನ ಮೇಲೆ ಬಹಿಷ್ಕಾರ ಹಾಕಿಬಿಟ್ಟಿದ್ದರು. ಈಗ ಭಾರತೀಯ ಕಮ್ಯುನಿಸ್ಟ್ ಪಕ್ಷದ ಸೂತ್ರಗಳು ರಶಿಯಾ, ಇಂಗ್ಲೆಂಡ್, ಜರ್ಮನಿ, ಚೀನ ಕಮ್ಯುನಿಸ್ಟ್ ಪಕ್ಷಗಳ ಕೈಯಲ್ಲಿದ್ದವು.

ರಾಯ್ ಜೇಲಿನಲ್ಲಿದ್ದಾಗ ರಾಯ್‌ವಾದಿಗಳು ಸುಮ್ಮನೆ ಕೂತಿರಲಿಲ್ಲ. ಟ್ರೇಡ್ ಯೂನಿಯನ್ ಸಂಘಟಿಸುವಲ್ಲಿ, ಕಾರ್ಮಿಕರ ಸಂಘಗಳನ್ನು ನಿರ್ಮಿಸುವಲ್ಲಿ ಸಾಕಷ್ಟು ಕೆಲಸ ಮಾಡಿದ್ದರು.

ರಾಯ್ ಕಾಂಗ್ರೆಸ್ ಸೇರಲು ನಿರ್ಧರಿಸಿದರು. ಸಮಾಜವಾದಿಗಳೂ ಕಾಂಗ್ರೆಸ್ಸಿನಲ್ಲಿಯ ಬಲ-ಗಣದವರೂ ರಾಯ್ ಯಾಕೆ ಕಾಂಗ್ರೆಸ್ ಸೇರುತ್ತಿದ್ದಾರೆ ಎಂದು ಪ್ರಶ್ನಿಸತೊಡಗಿದರು. ಆಗ ರಾಯ್ ಪ್ರಕಟಿಸಿದ ನಿವೇದನೆಯಲ್ಲಿ ಹೇಳಿದ್ದೇನೆಂದರೆ :

"ಕಾಂಗ್ರೆಸ್ ಕಮ್ಯುನಿಸ್ಟ್ ಪಂಥೀಯವಾಗುವ ಮಾತೇ ಇಲ್ಲ. ತದ್ವಿರುದ್ಧವಾಗಿ ಭಾರತೀಯ ಜನತೆಯ ಸ್ವಾತಂತ್ರ್ಯಕ್ಕೋಸ್ಕರ ಕಮ್ಯುನಿಸ್ಟರೂ ಕಾಂಗ್ರೆಸ್ಸನ್ನೇ ಸೇರಬೇಕು. ಕಾಂಗ್ರೆಸಿನೊಡನೆ ಅನೇಕ ವಿಷಯಗಳಲ್ಲಿ ನನ್ನ ಮತಭೇದಗಳಿದ್ದರೂ, ನಾನು ಯಾವಾಗಲೂ ಕಾಂಗ್ರೆಸ್ಸಿನ ಸಮರ್ಥನೆಯನ್ನೇ ಮಾಡಿದ್ದೇನೆ. ಕಾಂಗ್ರೆಸ್ಸನ್ನು ಔಪಚಾರಿಕವಾಗಿ ನಾನು ಸೇರುವಾಗ ನಾನು ಜಾಹೀರರೀತಿಯಲ್ಲಿ ಹೇಳ ಬಯಸುವದೆಂದರೆ—ಲೋಕಶಾಹಿವಾದಿ ಸ್ವಾತಂತ್ರ್ಯ ಬಿಟ್ಟು ಬೇರೆ ಯಾವ ಕಾರ್ಯಕ್ರಮಕ್ಕಾಗಿ ನಾನು ಒತ್ತಾಯಪಡಿಸುವದಿಲ್ಲ."

ರಾಯ್ ಅವರ ಮಾರ್ಕ್ಸ್‌ವಾದದಲ್ಲಿ ಬದಲಾವಣೆ ಕಂಡು ಬಂತು: ಕಾರ್ಮಿಕರಲ್ಲಿಯಷ್ಟೇ ಕ್ರಾಂತಿಕಾರೀ ಶಕ್ತಿ ಇರುತ್ತದೆಯೆಂತಲ್ಲ. ಉಳಿದ ವರ್ಗಗಳೂ ಕೆಲವೊಂದು ಐತಿಹಾಸಿಕ ಸಮಯಗಳಲ್ಲಿ ಕ್ರಾಂತಿಕಾರಿ ಯಾಗುವ ಸಂಭವವಿದೆ. ಆದ್ದರಿಂದ ವರ್ಗ-ಭೇದದ ತತ್ವದ ಮೇಲೆ ಕೆಲಸ ಮಾಡುವದಕ್ಕಿಂತ ಸಾಮಾಜಿಕ ಪರಿವರ್ತನೆಯೂ ಸಮಾಜವಾದ ದತ್ತ ಒಯ್ಯಬಹುದೆಂಬ ವಿಚಾರ ರಾಯ್ ಅವರಲ್ಲಿ ಮೂಡಿತ್ತು. ಅವರೆ ಕಾಂಗ್ರೆಸ್ಸಿನ ನೇತೃತ್ವವನ್ನು ಬದಲಿಸಬೇಕು ಯಾಕಂದರೆ ಅದು ತೀರ ಪರಂಪರೆನಿಷ್ಠವಾಗಿದೆ. ಈ ದೃಷ್ಟಿಯಿಂದ ೧೯೩೯ರ ಜೂನ್ ತಿಂಗಳಲ್ಲಿ ರಾಯ್ 'ಲೀಗ್ ಆಫ್ ರ್‍ಯಾಡಿಕಲ್ ಕಾಂಗ್ರೆಸ್‌ಮೆನ್' ಎಂಬ ಒಂದು ಗುಂಪನ್ನು ಕಾಂಗ್ರೆಸ್ಸಿನಲ್ಲಿಯೇ ನಿರ್ಮಿಸಿದರು.

ಅಷ್ಟರಲ್ಲಿಯೇ ೧೯೩೭ರ ಏಪ್ರಿಲ್‌ದಲ್ಲಿ 'ಇಂಡಿಪೆಂಡೆಂಟ್ ಇಂಡಿಯಾ' ಎಂಬ ವಾರಪತ್ರಿಕೆಯನ್ನು ಪ್ರಾರಂಭಿದ್ದು ಸಿ ಹಳೆ ಮಾತಾ ಗಿತ್ತು. (ಇದೇ ಮುಂದೆ ೧೯೪೯ರಲ್ಲಿ 'ರಾಡಿಕಲ್ ಹ್ಯೂಮನಿಸ್ಟ್' ಎಂಬ ಪತ್ರಿಕೆಯಾಯಿತು. ಆ ಮಾತು ಮುಂದೆ.)

೧೯೩೯ ಸೆಪ್ಟೆಂಬರ್ ೧ಕ್ಕೆ ಎರಡನೇ ಮಹಾಯುದ್ಧದ ಕಹಳೆ ಊದಲ್ಪಟ್ಟಿತು.

ಜರ್ಮನಿಯಲ್ಲಿ ಫ್ಯಾಸಿಜಮ್ಮಿನ ಕ್ರೂರ ಉದಯವನ್ನು ಕಣ್ಣಾರೆ ಕಂಡ ರಾಯ್ ಅವರಿಗೆ ಇಡೀ ಯುರೋಪವನ್ನೇ ಕಬಳಿಸಲಿದ್ದ ಆ ದುಷ್ಟಶಕ್ತಿಯನ್ನು ಎಲ್ಲ ಪ್ರಜಾಸತ್ತಾತ್ಮಕ ದೇಶಗಳು ಒಂದುಗೂಡಿ ಸದೆಬಡೆಯಲೇಬೇಕು. ಇಲ್ಲದಿದ್ದರೆ ಇಡೀ ಪ್ರಪಂಚಕ್ಕೇ ದುರಂತ ಕಾದಿದೆ ಎಂದು ತೀವ್ರವಾಗಿ ಅನಿಸತೊಡಗಿತು. ಆದ್ದರಿಂದ ಮಿತ್ರ ರಾಷ್ಟ್ರದವರಿಗೆ ಎಲ್ಲೆಯೂ ಕೈಲಾದ ಮಟ್ಟಿಗೆ ಸಹಾಯ ಮಾಡಬೇಕೆಂದು ರಾಯ್ ಪ್ರತಿಪಾದಿಸತೊಡಗಿದರು.

ಕಾಂಗ್ರೆಸ್ಸು ರಾಯ್ ಅವರ ಮಾತು ಕೇಳುವ ಪರಿಸ್ಥಿತಿಯಲ್ಲಿರ ಲಿಲ್ಲ. ಫೈಜಪುರ ಅಧಿವೇಶನದ ನಂತರ (ಆ ಅಧಿವೇಶನದಲ್ಲಿ

ಪ್ರೆಸಿಡೆಂಟರಾದ ನೆಹರೂ ರಾಯ್ ಅವರನ್ನು ಅತ್ಯಂತ ಹಾರ್ದಿಕವಾಗಿ ಸ್ವಾಗತಿಸಿದ್ದರು.) ಕಾಂಗ್ರೆಸ್ಸಿನ ದಾರಿಯೇ ಬೇರೆ ರಾಯ್ ಅವರ ದಾರಿಯೇ ಬೇರೆ—ಎಂಬ ಮಾತು ರಾಯ್ ಅವರಿಗೂ ಅವರ ಸಹಕಾರಿಗಳಿಗೂ ಖಾತ್ರಿಯಾಗತೊಡಗಿತ್ತು. ರಾಯ್ ಅವರು ದೇಶದ ತುಂಬೆಲ್ಲ ಅಡ್ಡಾಡಿ ಸಾಮಾಜಿಕ—ರಾಜಕೀಯ—ಸಾಂಸ್ಕೃತಿಕ ಎಲ್ಲ ವಿಷಯಗಳ ಮೇಲೆ ಭಾಷಣ ಮಾಡುತ್ತ ಜನಜಾಗೃತಿ, ಅದರಲ್ಲೂ ಸುಶಿಕ್ಷಿತ ಮಧ್ಯಮ ವರ್ಗದವರ ಜಾಗೃತಿ ಮಾಡಿದರೂ, ಕಾಂಗ್ರೆಸ್ಸಿನ ಅಧಿವೇಶನಗಳಲ್ಲಿ ಅವರ ಸ್ಥಾನ ಗೌಣವಾಗತೊಡಗಿತು. ಕಾಂಗ್ರೆಸ್ಸಿನ ಬಲಪಂಥೀಯರ ಬಲ ಪರೀಕ್ಷೆ ೧೯೩೯ರ ಕಾಂಗ್ರೆಸ್ ಅಧಿವೇಶನಕ್ಕೆ ಸುಭಾಷಚಂದ್ರರು ಆರಿಸಿಬಂದಾಗ ಆಯಿತು. ರಾಯ್ ಸುಭಾಷಚಂದ್ರರಿಗೆ ಪತ್ರ ಬರೆದು ಕಾಂಗ್ರೆಸ್ಸಿನ ನೇತೃತ್ವವನ್ನು ಬದಲಿಸಿ ಅದನ್ನು ಹೆಚ್ಚು ಕ್ರಾಂತಿಕಾರಿಯನ್ನಾಗಿ ಮಾಡಬೇಕು ಎಂದು ಸೂಚಿಸಿದರು. ನಂತರ ತ್ರಿಪುರಿ ಕಾಂಗ್ರೆಸ್ಸಿನಲ್ಲಿ ಆದದ್ದೇ ಬೇರೆ—ಸುಭಾಷಬಾಬು ಅವರಿಗೆ ಹಾಜರಾಗಲಿಕ್ಕಾಗಲಿಲ್ಲ; ಗಾಂಧೀವಾದೀ ನೇತೃತ್ವಕ್ಕೇ ಪ್ರಭುತ್ವ ಸಿಕ್ಕಿತು ಹಾಗೂ ಎಡಪಂಥೀಯರನ್ನು ಬದಿಗ ಸರಿಸಲಾಯಿತು. ವಿಷಯ ನಿಯಾಮಕ ಸಮಿತಿಯಲ್ಲಿ ಪಂತ ಅವರ ಠರಾವಿಗೆ ರಾಯ್ ಒಂದು ದುರಸ್ತಿ ಸೂಚಿಸಿದರು; ಆದರೆ ಅದು ಸಂಪೂರ್ಣ ದುರ್ಲಕ್ಷಿತವಾಯಿತು. ಆಗಲೇ 'ಲೀಗ್ ಅಫ್ ರ್ಯಾಡಿಕಲ್ ಕಾಂಗ್ರೆಸ್ ಮೆನ್' ಜನ್ಮತಾಳಿದ್ದು.

ಈಗ ಎರಡನೇ ಮಹಾಯುದ್ಧ ಸುರುವಾಗಿ ಹಿಟ್ಲರನು ಯುರೋಪಿನಲ್ಲಿ ಎರಡು-ಮೂರು ತಿಂಗಳಲ್ಲೇ ಹಲ್ಲೆ ಮಾಡಿದ್ದ; ಪೋಲಂಡನ್ನು ಗೆದ್ದಿದ್ದ; ಇಂಗ್ಲೆಂಡ್, ಫ್ರಾನ್ಸ್ ಯುದ್ಧಕ್ಕೆ ಸಿದ್ಧರಾಗತೊಡಗಿದ್ದರು; ಬ್ರಿಟಿಷರ ಹಡಗುಗಳನ್ನು ಹಿಟ್ಲರ್ ಮುಳುಗಿಸಿದ್ದ; ಇಂಗ್ಲೆಂಡಿನ ಮೇಲೆ ಬಾಂಬ್ ರೇಡ ಮಾಡಿದ್ದ; ರಶಿಯಾ ಯುದ್ಧಕ್ಕೆ ಸಿದ್ಧವಾಗಿ ಪೋಲಂಡದ ಸರಹದ್ದಿಗೆ ಸೈನ್ಯ ನಿಲ್ಲಿಸಿತ್ತು; ಇಟಲಿಯು ಲೀಗ್ ಅಫ್ ನೇಶನ್ಸ್ ತೊರೆದು ಜರ್ಮನಿಗೆ ಕೂಡಿಕೊಂಡಿತ್ತು;

ಜರ್ಮನಿಯ ಒಳಗೆ ಜ್ಯೂ ಜನರ ಹತ್ಯಾಕಾಂಡವಾಗುತ್ತಿತ್ತು....ಒಂದೇ ಎರಡೇ ? ಈ ಮರಣಯುದ್ಧದ ಬೇಗೆ ಎಲ್ಲ ದೇಶಗಳಿಗೂ ಹತ್ತಿಕೊಳ್ಳ ಹತ್ತಿತು....ಇಂಥ ಪರಿಸ್ಥಿತಿಯಲ್ಲಿ ಭಾರತೀಯ ನ್ಯಾಶನಲ್ ಕಾಂಗ್ರೆಸ್ಸು ಬ್ರಿಟಿಷರಿಗೆ, 'ನಮಗೆ ಮೊದಲು ಸ್ವಾತಂತ್ರ್ಯ ಕೊಡಿ. ನಾವು ನಿಮಗೆ ಸಹಾಯ ಮಾಡುತ್ತೇವೆ,' ಎಂದು ಹೇಳಿದರು. ರಾಯ್ ಹೇಳಿದರು : 'ಈ ಮಹಾಯುದ್ಧದ ನಂತರ ಬ್ರಿಟಿಷ್ ಸಾಮ್ರಾಜ್ಯಶಾಹಿ ಉಳಿಯಲಾರದು. ಸ್ವಾತಂತ್ರ್ಯ ತಾನಾಗಿಯೇ ಬರುತ್ತದೆ. ಈಗ ಫ್ಯಾಸಿಜಮ್ಮಿನ ವಿರುದ್ಧ ನಡೆದ ಯುದ್ಧಕ್ಕೆ ನಾವು ಯಾವ ಶರ್ತು ಇಲ್ಲದೆ ಸಹಾಯ ಮಾಡಬೇಕು.' ಹೀಗೆ ಹೇಳುವಾಗ ರಾಯ್ ತಮ್ಮ 'ನಿರ್ವಸಾಹತೀಕರಣ'ದ ತತ್ವವನ್ನು ಉಪಯೋಗಿಸಿಕೊಂಡರು.

ರಾಷ್ಟ್ರವಾದೀ ಭಾವನೆಗಳು ಉಚ್ಚಾಂಕ ಮುಟ್ಟಿದ ಕಾಲವದು. ರಾಯ್ ಅವರ ಅಷ್ಟು ತರ್ಕಶುದ್ಧವಾದ ವಿಚಾರ ಯಾರ ಮನಸ್ಸಿನಲ್ಲಿ ನಟ್ಟೀತು ? ಆತನ ಮಾತು ಅರಣ್ಯರೋದನವಾಯಿತು. ಮೊದಲೇ ಕಾಂಗ್ರೆಸ್ಸಿನಲ್ಲಿಯ ಬಲಪಂಥೀಯ ಪ್ರಭುತ್ವಕ್ಕೆ ಬೇಸತ್ತ ರಾಯ್ ಕಾಂಗ್ರೆಸ್ ತ್ಯಜಿಸಿ ೧೯೪೦ರ ಡಿಸೆಂಬರ್ ತಿಂಗಳಲ್ಲಿ ಒಂದು ಹೊಸ ಪಕ್ಷವನ್ನು ಪ್ರಸ್ಥಾಪಿಸಿದ. ಅದೇ ರ್‍ಯಾಡಿಕಲ್ ಡೆಮೊಕ್ರೆಟಿಕ್ ಪಾರ್ಟಿ.

ಅಧ್ಯಾಯ ೬

ರ್ಯಾಡಿಕಲ್ ಪಕ್ಷದ ಧೋರಣೆ ಹಾಗೂ ಕಾರ್ಯ

ಇಲ್ಲೀತನಕ ರಾಯ್ ಅವರು ಮೊದಲೇ ಪ್ರಸ್ಥಾಪಿತಗೊಂಡ ಗುಂಪುಗಳೊಂದಿಗೆ ಅಥವಾ ಪಕ್ಷಗಳೊಂದಿಗೆ ಕೆಲಸ ಮಾಡಿದ್ದರು. ಈಗ ಅವರೇ ಸ್ವತಃ ಪ್ರಸ್ಥಾಪಿಸಿದ ಪಕ್ಷದ ನಾಯಕರಾದರು. ಪಕ್ಷ ಕಟ್ಟುವರೆಂದರೆ ಸಂಘಟನೆಯ ಕಾರ್ಯ, ಪ್ರಚಾರದ ಕಾರ್ಯ, ಕೆಲವು ಮುಖ್ಯ ಧೋರಣೆಗಳನ್ನು ನಿಶ್ಚಿತಗೊಳಿಸಿ ಅವುಗಳನ್ನು ಕಾರ್ಯರೂಪದಲ್ಲಿ ತರುವ ಕೆಲಸ, ಕೆಲವು ಉಪಸಂಸ್ಥೆಗಳನ್ನು ಕಟ್ಟುವ ಕೆಲಸ ಇತ್ಯಾದಿ.

ರಾಯ್ ಅವರು ಡಿಸೆಂಬರ್ ೨೦ಕ್ಕೆ ಅಖಿಲ ಭಾರತೀಯ ಪರಿಷತ್ತನ್ನು ಮುಂಬೈಯಲ್ಲಿ ಕರೆದರು. ಈ ಪರಿಷತ್ತಿನಲ್ಲಿಯೇ ರ್ಯಾಡಿಕಲ್ ಡೆಮೊಕ್ರೆಟಿಕ್ ಪಕ್ಷದ ಸ್ಥಾಪನೆಯಾಯಿತು. ಕಾಂಗ್ರೆಸಿನ ಹೊರಗೆ ಒಂದು ಜನತೆಯ ಪಕ್ಷ ಕಟ್ಟಬೇಕೆನ್ನುವ ಅವರ ಕನಸು ಪೂರ್ತಿಯಾಯಿತು. ಭಾರತದ ನಿಜವಾದ ಸ್ವಾತಂತ್ರ್ಯದ ಹೋರಾಟಕ್ಕೆ ಒಂದು ಜನತೆಯ ಪಕ್ಷ ಬೇಕೇಬೇಕು ಎಂದು ಅವರಿಗೆ ಮೊದಲಿನಿಂದಲೂ ಅನಿಸಿತ್ತು. ಕಾಂಗ್ರೆಸ್ಸಿನ ಮುಖಾಂತರವೇ ಇಂಥ ಪಕ್ಷ ಕಟ್ಟುವ ಆಶೆ ಹಿಂಗಿ ಹೋಗಿತ್ತು. ಆದ್ದರಿಂದ 'ಲೀಗ್ ಆಫ್ ರ್ಯಾಡಿಕಲ್ ಕಾಂಗ್ರೆಸ್ ಮೆನ್'ನನ್ನು 'ರ್ಯಾಡಿಕಲ್ ಡೆಮೊಕ್ರೆಟಿಕ್ ಪಾರ್ಟಿ'ಗೆ ಪರಿವರ್ತಿಸಬೇಕಾಯಿತು. ಈ ಹೊಸ ಪಾರ್ಟಿಯ ಕೆಲಸಕ್ಕಾಗಿ ಸ್ಥಾನಿಕ ಸಂಘಟನೆಗಳನ್ನು ನಿರ್ಮಿಸುವದು ಮುಖ್ಯ ಕಾರ್ಯ ಹಾಗೂ ದೇಶದಲ್ಲಿಯ

ವಿಚಾರವಂತರನ್ನೂ ಸಮಾಜಸುಧಾರಕರನ್ನೂ ಸ್ವತಂತ್ರ ವೃತ್ತಿಯ ರಾಜಕಾರಣಿಗಳನ್ನೂ ಒಂದೆಡೆ ತರಲಿಕ್ಕೆಂದು ನ್ಯಾಶನಲ್ ಡೆಮೊಕ್ರೆಟಿಕ್ ಯೂನಿಯನ್ ಎಂದೂ ಸಂಘಟಿಸಿ ದೇಶದ ತುಂಬ ಅದರ ಶಾಖೆಗಳನ್ನು ತೆರೆಯುವದೂ ಅವಶ್ಯ—ಎಂದು ರಾಯ್ ಪ್ರತಿಪಾದಿಸಿದರು.

ಮೊದಲಿನ ಮುಖ್ಯ ಧೋರಣೆ—ಇಡಿಯ ಜಗತ್ತನ್ನೇ ಕಬಳಿಸಲು ನಿಂತ ಫ್ಯಾಸಿಜಮ್ಮಿನ ವಿರುದ್ಧ ಜನಜಾಗೃತಿ ಮಾಡುವದು. ಫ್ಯಾಸಿಜಮ್ಮು ದುಷ್ಟ ರಾಷ್ಟ್ರವಾದವಾಗಿದ್ದು ಜನರನ್ನು ಬರೇ ಭಾವನೆಗಳ ಆಧಾರದ ಮೇಲೆ ಸಂಘಟಿಸಿ ಹಿಂಸೆಯ ಮುಖಾಂತರ ಪ್ರಭುತ್ವ ಬೆಳಿಸುವ ಒಂದು ಕೆಟ್ಟ ವಿಚಾರಸರಣಿ; ಮೊದಲನೇ ಮಹಾಯುದ್ಧದ ಸೋಲಿನ ನೈರಾಶ್ಯದಿಂದ ಜರ್ಮನಿಯಲ್ಲಿ ಹುಟ್ಟಿದಂಥ, ಈ ರಾಕ್ಷಸೀ ಶಕ್ತಿ ಈಗ ಭಸ್ಮಾಸುರನಂತೆ ಎಲ್ಲೆಡೆಗೂ ಬೇಗ ಹೆಚ್ಚುವಂಥ, ಬರೇ ದ್ವೇಷದ ಭಾವನೆಯ ಮೇಲೇ ಸೆಡ್ಡುಹೊಡೆದು ನಿಂತಂಥ ಅವಿಚಾರದ ವಿಧ್ವಂಸಕ ಪ್ರವೃತ್ತಿ; ಆದ್ದರಿಂದ ಫ್ಯಾಸಿಜಂನ್ನು ಸೋಲಿಸಿ ನಾಶ ಮಾಡುವದು ಪ್ರತಿಯೊಬ್ಬನ ಆದ್ಯಕರ್ತವ್ಯ. ಮಿತ್ರ ರಾಷ್ಟ್ರಗಳ ಯುದ್ಧಕಾರ್ಯದಲ್ಲಿ ಸಹಾಯ ಮಾಡುವದು; ಇಂಗ್ಲೆಂಡ್, ಫ್ರಾನ್ಸ್ ದೇಶಗಳ ಜನತೆಯ ಕೆಲಸದಲ್ಲಿ ಸಹಭಾಗಿಯಾಗುವದು. ಈ ಯುದ್ಧದ ನಂತರ ಬ್ರಿಟಿಷ್ ಸಾಮ್ರಾಜ್ಯಶಾಹಿ ಸಂಪೂರ್ಣ ನಾಶವಾಗಲಿದ್ದು ಬ್ರಿಟಿಷರು ತಾವಾಗಿಯೇ ವಸಾಹತುಗಳಿಗೆ ಸ್ವಾತಂತ್ರ್ಯ ನೀಡುವರು-ಹೀಗಿದ್ದಾಗ ನಾವು ಫ್ಯಾಸಿಜಮ್ಮದ ವಿರುದ್ಧ ಬ್ರಿಟನ್ನಿಗೆ ಸಹಾಯ ಮಾಡಬೇಕು....

ಇಂಥ ವಿಚಾರಸರಣಿಯನ್ನು ಬ್ರಿಟಿಷರ ವಿರುದ್ಧ ದ್ವೇಷದಿಂದ ಹೋರಾಡುವ ಭಾರತೀಯ ರಾಷ್ಟ್ರವಾದಿಗಳ ಗಂಟಲಿನಲ್ಲಿ ಇಳಿಸುವದು ಅತ್ಯಂತ ಕಠಿಣ ಕೆಲಸವಾಗಿತ್ತು. ಬ್ರಿಟಿಷರಿಗೆ ನಮ್ಮ ಸಹಾಯ ಬೇಕಿದ್ದರೆ ನಮಗೆ ಈಗಲೇ ಸ್ವಾತಂತ್ರ್ಯ ಕೊಡಲಿ ಅಥವಾ ಯುದ್ಧದ ನಂತರ ಸ್ವಾತಂತ್ರ್ಯ ಕೊಡುವ ಘೋಷಣೆ ಮಾಡಲಿ ಎಂಬುದು ಕಾಂಗ್ರೆಸ್ಸಿನ ಮತ. ಎಷ್ಟೋ ಭಾರತೀಯ ರಾಷ್ಟ್ರವಾದಿಗಳು ಒಳಗೊಳಗೇ ಜರ್ಮನಿ

ಯನ್ನೂ ನಂತರ ಜಪಾನನ್ನೂ ಮೆಚ್ಚಿಕೊಂಡು, ಬ್ರಿಟನಿನ ವಿನಾಶದ ಹಾದಿ ಕಾಯುತ್ತಿದ್ದರು- ಹಿಟ್ಲರನ ಆರ್ಯವಂಶದ ಅಭಿಮಾನವನ್ನೂ ಅವನ ರಾಷ್ಟ್ರೀಯ ಸಂಕೇತವಾದ ಸ್ವಸ್ತಿಕವನ್ನೂ ಕೌತುಕದಿಂದ ನೋಡಿ ತಲೆದೂಗುತ್ತಿದ್ದರು. ಇಂಥ ರಾಷ್ಟ್ರವಾದೀ ಮನೋವೃತ್ತಿಯ ಜನರು ಭಾರತದಿಂದ ಅಹಿಂಸಾತ್ಮಕ ರೀತಿಯಲ್ಲಿಯೇ ಬ್ರಿಟಿಷರನ್ನು ಓಡಿಸಲು ಒಂದು ಸುಸಂಧಿ ಬಂದಿದೆಯೆಂದು ಉತ್ಸಾಹಗೊಂಡಿದ್ದರು. ಮೊದಲಿಗೆ ರಶಿಯಾ-ಜರ್ಮನಿಗಳ ಸಂಧಾನವಾದೊಡನೆ ಭಾರತೀಯ ಕಮ್ಯುನಿಸ್ಟರು ಜರ್ಮನಿಯತ್ತಲೇ ಒಲಿದಿದ್ದರು: ಸಮಾಜವಾದಿಗಳು ಗೊಂದಲಮಯ ಸ್ಥಿತಿಯಲ್ಲಿದ್ದರು. ಸದ್ಯ ಏನಿದ್ದರೂ ಕೊನೆಗೆ ಜರ್ಮನಿ ರಶಿಯಾದ ಮೇಲೆ ದಂಡೆತ್ತಿ ಹೋಗಲಿದೆ ಎಂದು ರಾಯ್ ಭವಿಷ್ಯ ಹೇಳಿದ್ದರು. ೧೯೪೧ರ ಜೂನ್ ತಿಂಗಳಲ್ಲಿ ಜರ್ಮನಿ ರಶಿಯಾದ ಮೇಲೆ ಏರಿ ಹೋದ ನಂತರ ಹಾಗೂ ರಶಿಯಾ ಮಿತ್ರರಾಷ್ಟ್ರಗಳೊಡನೆ ಕೂಡಿ ಕೊಂಡಾಗ ಭಾರತೀಯ ಕಮ್ಯುನಿಸ್ಟರು ಈ ಮಹಾಯುದ್ಧಕ್ಕೆ 'ಜನತಾ ಯುದ್ಧ' (ಪೀಪಲ್ಸ್ ವಾರ್) ಎನ್ನತೊಡಗಿದರು.

೧೯೪೨ರ 'ಚಲೇ ಜಾವ್' ಚಳುವಳಿಯೆಂದರೆ ಭಾರತೀಯ ರಾಷ್ಟ್ರವಾದೀ ವಿಚಾರಸರಣಿಯ ಉಚ್ಚಾಂಕವೇ ಸರಿ. ಈ ಚಳುವಳಿ ತಪ್ಪೆಂದು ಹೇಳುವ ರಾಯ್‌ವಾದಿಗಳು ನಗೆಗೀಡಾದರು, ಬ್ರಿಟಿಷರ ಹಸ್ತಕರೆಂಬ ಹೀಯಾಳಿಕೆಗೆ ಗುರಿಯಾದರು. ಉತ್ಕಟ ಭಾವನೆಗಳ ಪ್ರಪಂಚದಲ್ಲಿ ತರ್ಕಶುದ್ಧ ವಿಚಾರಸರಣಿ ಎಷ್ಟೋಸಲ ನಿರ್ವೀರ್ಯ ವಾಗುತ್ತವೆ ಎಂಬುದಕ್ಕೆ ಆಗಿನ ರಾಯ್‌ವಾದಿಗಳ ಅಸಹಾಯಕತೆಯೇ ಸಾಕ್ಷಿ. ಈ ಸಂದರ್ಭದಲ್ಲಿ ರಾಯ್ ಎಲ್ಲೆಡೆಗೆ ಅಡ್ಡಾಡಿ ಮಾಡಿದ ಭಾಷಣಗಳ ತುಣುಕುಗಳನ್ನು ನೋಡಬಹುದು:

'ಜಾಗತಿಕ ಪ್ರತೀಗಾಮಿ ಶಕ್ತಿಯ ಕೇಂದ್ರವಾದಂಥ ಫ್ಯಾಸಿಜಂದ ವಿರುದ್ಧ ಜೀವವನ್ನು ಪಣಕ್ಕೆ ಹಚ್ಚಿ ಹೋರಾಡುತ್ತಿದ್ದ ಚರ್ಚಿಲ್ ನನಗೆ ಈ ಸಂದರ್ಭದಲ್ಲಿ ಕಾಂಗ್ರೆಸಿನ ಎಡ-ಬಲ ಜನರಿಗಿಂತ ಹೆಚ್ಚು ಕ್ರಾಂತಿ

ಕಾರಕನಾಗಿ ತೋರುತ್ತಿದ್ದಾನೆ. ಫ್ಯಾಸಿಜಂದ ವಿರುದ್ಧ ನಡೆದ ಹೋರಾಟದ ಪ್ರತೀಕವಾಗಿದ್ದಾನೆ ಚರ್ಚಿಲ್."

'ಚಲೇ ಜಾವ್' ಚಳುವಳಿಯು ಪ್ರಾರಂಭವಾದಾಗ ರಾಯ್ ಹೇಳುತ್ತಾರೆ :

"ಕಾಂಗ್ರೆಸ್ ಈಗ ತಟಸ್ಥ ಉಳಿದಿಲ್ಲ. ಅದು ಯುದ್ಧದ ಆ ಬದಿಗೆ ಅಂದರೆ ಫ್ಯಾಸಿಜಂದ ಕಡೆಗೆ ನಿಂತಿದೆ. ಅಂದರೆ ಕಾಂಗ್ರೆಸ್ಸಿನ ಈ ಚಳಿವಳಿಯ ಮೂಲಕ ಶತ್ರುರಾಷ್ಟ್ರಗಳಿಗೆ ಪ್ರಚಂಡ ಸಹಾಯು ಹಾಗೂ ಸಮಾಧಾನ ಸಿಗಲಿದೆ."

ರಾಯ್ ಅವರ ಅಂದಿನ ಮಾತುಗಳಲ್ಲಿ, ಕೃತಿಗಳಲ್ಲಿ ಒಂದು ರೀತಿಯ ಕ್ರಾಂತಿಕಾರೀ ಶೌರ್ಯವಿತ್ತು, ಕಮ್ಯುನಿಸ್ಟ್ ವಿಚಾರಸರಣಿಯ ಪ್ರಖರತೆ ಇತ್ತು. ಆದರೆ ಅವರ ಹಾದಿ ಒಬ್ಬಂಟಿಗನ ಹಾದಿಯಾಗಿತ್ತು. ಪ್ರವಾದಿ ಪುರುಷನ ಏಕಾಕಿತನದಲ್ಲಿ ಅವರು ನುಡಿದ ಭವಿಷ್ಯವಾಣಿ ಮುಂದೆ ಖರೇ ಆದರೂ ಅದಕ್ಕೆ ಸಿಗಬೇಕಾದ ಬೆಲೆ ಸಿಗಲಿಲ್ಲ. ಅವರಿಗೆ ಒಂದೇ ಸಮಾಧಾನವೆಂದರೆ 'ಚಲೇ ಜಾವ್' ಚಳುವಳಿಯು ಒಡಿತ ಸಾವಕಾಶ ಕಡಿಮೆಯಾಯಿತು ಹಾಗೂ ಫ್ಯಾಸಿಜಂದ ವಿರುದ್ಧ ಹೋರಾಟ ನಡೆಸಿದ ಮಿತ್ರರಾಷ್ಟ್ರಗಳು ಒಂದರ ನಂತರ ಇನ್ನೊಂದ ರಂತೆ ವಿಜಯುಗಳನ್ನು ಪಡೆಯತೊಡಗಿದರು. ಭಾರತ ಸ್ವತಂತ್ರವಾಗುವ ಕನಸೂ ನನಸಾಗುವ ಪರಿಸ್ಥಿತಿ ಸಮೀಪ ಬರತೊಡಗಿತ್ತು.

*　*　*

ರಾಯ್ ಅವರ ಮುಂದಿನ ಧೋರಣೆ ಅತ್ಯಂತ ಮಹತ್ವದ್ದಾಗಿತ್ತು. ಆ ಧೋರಣೆಯೇ ಭಾರತದ ವಿಚಾರವಂತರನ್ನು ರ್‍ಯಾಡಿಕಲ್ ಪಕ್ಷಕ್ಕೆ ಎಳೆದದ್ದು. ಅದೆಂದರೆ ರಾಷ್ಟ್ರದ ಪುನರ್ರಚನೆಯ ಕಾರ್ಯಕ್ರಮ-ಜನತೆಗೆ ಬರಲಿರುವ ಸ್ವಾತಂತ್ರ್ಯದ ಫಲಗಳನ್ನು ಮುಟ್ಟಿಸುವ ಕಾರ್ಯಕ್ರಮ.

ಸ್ವತಂತ್ರ ಭಾರತದ ಆರ್ಥಿಕ ಪುನರ್ರಚನೆಯ ಯೋಜನೆಯನ್ನು ಸಿದ್ಧಪಡಿಸುವ ಕೆಲಸವನ್ನು ರಾಯ್ ಅವರು ಇಂಡಿಯನ್ ಫೆಡರೇಶನ್

ಅಫ್ ಲೇಬರ್‌ಕ್ಕೆ ಒಪ್ಪಿಸಿದರು. ಆ ಯೋಜನೆಗೆ 'ಪೀಪಲ್ಸ್ ಪ್ಲ್ಯಾನ್' ಅಂದರೆ 'ಜನತಾ ಯೋಜನೆ' ಎಂದು ಹೆಸರಿಟ್ಟರು. ಕಾಂಗ್ರೆಸ್ಸಿನ ಹಿಂದಿದ್ದ ಬಂಡವಾಳಗಾರರು ಸಿದ್ಧಪಡಿಸಿದ 'ಮುಂಬಯಿ ಯೋಜನೆ'ಗೆ ವಿರುದ್ಧವಾಗಿ ೧೯೪೪ರಲ್ಲಿ 'ಜನತಾ ಯೋಜನೆ' ಸಿದ್ಧವಾಯಿತು. ಈ ಯೋಜನೆಯ ಮುಖ್ಯ ತತ್ವಗಳೆಂದರೆ–

೧. ನಿಜವಾದ (ಬರೇ 'ಔಪಚಾರಿಕ'ವಲ್ಲದ) ಲೋಕಶಾಹಿಯ ಸ್ಥಾಪನ : ಅಂದರೆ ರಾಜಕೀಯ ಹಾಗೂ ಆರ್ಥಿಕ ವಿಕೇಂದ್ರೀಕರಣ;
೨. ಕಾರ್ಮಿಕರಿಗಿಂತ ರೈತರ ಭವಿತವ್ಯದ ವಿಚಾರ : ರೈತರ ಜೀವನದ ಸ್ವರೂಪದಲ್ಲಿ ಮೂಲಗಾಮಿ ಪರಿವರ್ತನೆ ;
೩. ಮಧ್ಯಸ್ಥ 'ದಲ್ಲಾಳಿ' ವರ್ಗದ ಶೋಷಣೆಯನ್ನು ಸಂಪೂರ್ಣ ನಿಲ್ಲಿಸಿ, ಸಹಕಾರಿ ಸಂಸ್ಥೆಗಳ ಮುಖಾಂತರ ಎಲ್ಲ ವ್ಯವಹಾರ ಮಾಡುವದು;
೪. ಬಹುಸಂಖ್ಯ ಜನತೆಯ ಜೀವನಮಾನವನ್ನು ಸರ್ವಾಂಗೀಣ ವಾಗಿ ಎತ್ತರಿಸುವದು.

೧೯೪೫ರಲ್ಲಿ ರಾಯ್ ತಮ್ಮ ಪಾರ್ಟಿಯ ವತಿಯಿಂದ ಸ್ವತಂತ್ರ ಭಾರತದ ಸಂವಿಧಾನ ಹೇಗಿರಬೇಕೆನ್ನುವದರ ಬಗ್ಗೆ ಒಂದು ಡ್ರಾಫ್ಟ್ ಸಿದ್ಧಪಡಿಸಿದರು.

ಈ 'ಡ್ರಾಫ್ಟ್'ದಲ್ಲಿ ೧೩ ಅಧ್ಯಾಯಗಳಿದ್ದು ಒಟ್ಟು ೧೩೭ ಆರ್ಟಿಕಲ್ಸ್ ಇವೆ. ಮೊದಲನೇ ಅಧ್ಯಾಯದಲ್ಲಿ 'ಮಾನವೀ ಹಕ್ಕುಗಳ ಹಾಗೂ ಮೂಲಭೂತ ತತ್ವಗಳ' ಪ್ರತಿಪಾದನೆಯಿದೆ. ಅವರಲ್ಲಿಯ ಕೆಲವು ವೈಶಿಷ್ಟ್ಯಪೂರ್ಣ ಅಂಶಗಳು ಇಂತಿವೆ :

ಯಾವದೇ ರೀತಿಯ ಜುಲುಮಿನ ವಿರುದ್ಧ, ಶೋಷಣೆಯ ವಿರುದ್ಧ ಹಾಗೂ ಅನ್ಯಾಯದ ವಿರುದ್ಧ ಬಂಡೇಳುವದು ಒಂದು ಪವಿತ್ರವಾದ ಹಕ್ಕು.

ಭಾಷೆ, ಸಂಸ್ಕೃತಿಯ ಸಮರೂಪದ ತತ್ವದ ಮೇಲೆ ಸಂಘಟಿತವಾದ ಭಾರತದ ಪ್ರಾಂತಗಳು ಸ್ವಾಯತ್ತವಿದ್ದು, ಅಂಥ ಪ್ರಾಂತಗಳ ಸ್ವಖುಶಿಯ ಸಂಘಟನೆಯೆಂದರೇನೇ ಭಾರತ ಫೆಡರಲ್ ಯುನಿಯನ್.

ಎಲ್ಲ ಭೂಮಿ ಹಾಗೂ ಅದರ ಗರ್ಭದಲ್ಲಿಯ ಎಲ್ಲ ಖನಿಜಗಳು ಭಾರತೀಯ ಜನತೆಯ ಸಾಮೂಹಿಕ ಸೊತ್ತು.

ಹದಿನಾಲ್ಕು ವರ್ಷವಾಗುವವರೆಗೆ ಎಲ್ಲ ಮಕ್ಕಳಿಗೆ ಕಡ್ಡಾಯದ ಮುಕ್ತ ಶಿಕ್ಷಣ.

ಪುರುಷ ಹಾಗೂ ಸ್ತ್ರೀಯರಿಗೆ ನಾಗರಿಕತೆಯ ಸಮಾನ ಹಕ್ಕು, ಸಮಾನ ಜವಾಬ್ದಾರಿಗಳು.

ಅಲ್ಪಸಂಖ್ಯಾತರ ಹಕ್ಕುಗಳ ಸಂರಕ್ಷಣೆ ಎಲ್ಲ ಸಾರ್ವಜನಿಕ ಸಂಸ್ಥೆಗಳಲ್ಲಿ ಅವರಿಗೆ ಪ್ರತ್ಯೇಕ ಸ್ಥಾನಗಳು.

ವಯಸ್ಸಾದವರಿಗೆ, ಕಾಯಿಲೆ ಬಿದ್ದವರಿಗೆ, ಅಂಗ ವಿಕಲರಿಗೆ ಸಾಮಾಜಿಕ ಸಂರಕ್ಷಣೆ.

ಇತ್ಯಾದಿ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯದ ೨೫ ತತ್ವಗಳಿವೆ.

ಎರಡನೆಯ ಅಧ್ಯಾಯದಲ್ಲಿ 'ಸಂಘಟಿತ ಜನತಂತ್ರ'ದ ಕಲ್ಪನೆ ಬರುತ್ತದೆ. ಪ್ರತಿಯೊಂದು ಹಳ್ಳಿ, ಪಟ್ಟಣ, ನಗರಗಳಲ್ಲಿ ಜನರ ಸ್ಥಾನಿಕ ಕಮಿಟಿಗಳ ಮೂಲಕ ಜನತಂತ್ರದ ಶಕ್ತಿಗಳು ಅಭಿವ್ಯಕ್ತಗೊಳ್ಳಬೇಕು. ಈ ಸ್ಥಾನಿಕ ಕಮಿಟಿಗಳು ವಯಸ್ಸಿಗೆ ಬಂದವರ ಮತಗಳ ಮುಖಾಂತರ ಪ್ರತಿವರ್ಷ ಚುನಾಯಿತವಾಗಬೇಕು. ಈ ಕಮಿಟಿಗಳು ಪ್ರಾಂತೀಯ ಜನತಾ ಕೌನ್ಸಿಲ್‌ಗಳಿಗೂ ಫೆಡರಲ್ ಅಸೆಂಬ್ಲಿಗೂ ಚುನಾವಣೆಗೆ ಉಮೇದವಾರರ ಹೆಸರು ಸೂಚಿಸಬೇಕು. ಪ್ರತಿಯೊಂದು ಮತದಾರ ಸಂಘಕ್ಕೆ ತಮ್ಮ ಪ್ರತಿನಿಧಿಗಳನ್ನು ತಿರುಗಿ ಕರೆಯಿಸಿಕೊಳ್ಳುವ ಹಕ್ಕು ಇರಬೇಕು. ಸರಕಾರದ ಯಾವದೇ ನಿರ್ಣಯವನ್ನು ಮತದಾರರ ನೇರ ತೀರ್ಮಾನಕ್ಕಾಗಿ (referandum)

ಕೇಳುವ ಹಕ್ಕಿರಬೇಕು–ಇತ್ಯಾದಿ ತತ್ವಗಳ ಮೇಲೆ ಕಲಮುಗಳನ್ನು ಸಿದ್ಧಪಡಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಫೆಡರಲ್ ಯೂನಿಯನ್‌ದ ಸ್ವರೂಪ ಹಾಗೂ ರಚನೆ ಹೇಗಿರಬೇಕೆಂಬುದರ ಬಗ್ಗೆ ಕಲಮುಗಳಿವೆ. ಅಲ್ಲಿ ಯಾವದೇ ಪ್ರಾಂತಕ್ಕೆ ಫೆಡರಲ್ ಯೂನಿಯನ್ನಿನಿಂದ ಬೇರ್ಪಟ್ಟು ಪ್ರತ್ಯೇಕವಾಗಿರಬಹುದು; ಅಥವಾ ಹಾಗೆ ಬೇರ್ಪಟ್ಟ ಪ್ರಾಂತಗಳ ಇನ್ನೊಂದು ಫೆಡರಲ್ ಯೂನಿಯನ್ನೂ ಸಿದ್ಧವಾಗಬಹುದು.

ಭಾರತೀಯ ಫೆಡರಲ್ ಯೂನಿಯನ್ ಹಾಗೂ ಫೆಡರಲ್ ಅಸೆಂಬ್ಲಿಯ ಅನ್ಯೋನ್ಯ ಸಂಬಂಧದ ಬಗ್ಗೆ ನಾಲ್ಕನೆಯ ಅಧ್ಯಾಯದಲ್ಲಿ ವಿವರಣೆ ಇದೆ. ಐದನೆಯ ಅಧ್ಯಾಯದಲ್ಲಿ 'ಕೌನ್ಸಿಲ್ ಆಫ್ ಸ್ಟೇಟ್'ದ ಒಂದು ಮಹತ್ವದ ಘಟಕದ ವಿವರಗಳಿವೆ. ಇದು ಪ್ರಾಮುಖ್ಯವಾಗಿ ಸಲಹಾ ಸಮಿತಿಯಾಗಿದ್ದು ಅದರಲ್ಲಿ ಭಾರತದ ಮಹತ್ವದ ಕಸಬುಗಳ (ಎಂಜಿನಿಯರ್, ಅರ್ಥಶಾಸ್ತ್ರಜ್ಞ, ವಿಜ್ಞಾನಿ, ಡಾಕ್ಟರ್, ಕಾಯಿದೆತಜ್ಞ, ಐತಿಹಾಸಕಾರ, ತತ್ವಜ್ಞಾನಿ ಇತ್ಯಾದಿ) ಪ್ರತಿನಿಧಿಗಳ ಈ ಕೌನ್ಸಿಲ್ಲು ಆಗಾಗ್ಗೆ ಕೂಡಿ ಸರಕಾರದ ಎಲ್ಲ ಸಮಸ್ಯೆಗಳ ಬಗ್ಗೆ ಸಲಹೆ ಕೊಡಬೇಕು, ಹಾಗೂ ಈ ಕೌನ್ಸಿಲಿನ ಅವಧಿ ಆರುವರ್ಷವಿರಬೇಕು. ಆರ್ಥಿಕ, ಶೈಕ್ಷಣಿಕ ಸಾಂಸ್ಕೃತಿಕ ಇತ್ಯಾದಿ ಯೋಜನೆಗಳನ್ನು ಈ ಕೌನ್ಸಿಲ್ಲು ಸಿದ್ಧಮಾಡಿಕೊಡಬೇಕು.

ಸಮಾಜದ ಆರ್ಥಿಕ ಪುನರ್‌ರಚನೆಯ ವಿಷಯ ೧೧ನೆಯ ಅಧ್ಯಾಯದಲ್ಲಿ ಬರುತ್ತದೆ. ಈ ಪುನರ್‌ರಚನೆಯ ಉದ್ದೇಶವೆಂದರೆ ದೇಶದಲ್ಲಿಯ ಪ್ರತಿಯೊಬ್ಬ ನಾಗರಿಕನಿಗೆ ಒಳ್ಳೆಯ ಮಟ್ಟದ ಜೀವನ ನಡೆಸಲು ಯಾವ ಸೌಕರ್ಯಗಳು ಬೇಕೋ ಅವೆಲ್ಲವುಗಳನ್ನು ಒದಗಿಸಿ, ಜೀವನದ ಸಾಂಸ್ಕೃತಿಕ ಆಯಾಮದ ಬೆಳವಣಿಗೆಗಾಗಿ ಸಾಕಷ್ಟು ವಿರಾಮಕಾಲವನ್ನೂ ಒದಗಿಸಬೇಕು.

ಜನರ ಆವಶ್ಯಕತೆಗಳನ್ನು ಪೂರೈಸುವದೇ ಎಲ್ಲ ಉದ್ದಿಮೆಗಳ ಮುಖ್ಯ ಕರ್ತವ್ಯ-ಸ್ವಂತ ಲಾಭಕ್ಕಾಗಿ ಅಲ್ಲ. ಉತ್ಪನ್ನದ ಯೋಜನೆಯನ್ನೂ ಅವರ ಹಂಚಿಕೆಯನ್ನೂ ಸರಕಾರವೇ ಮಾಡಬೇಕು.

ಈ ಡ್ರಾಫ್ಟ್ ಸಂವಿಧಾನದ ಕೆಲವು ಅಂಶಗಳನ್ನು ಕೊಡುವ ಉದ್ದೇಶವೆಂದರೆ ರಾಯ್ ಅವರು 'ಸಂಘಟಿತ ಜನತಂತ್ರ'ದ ಬಗ್ಗೆ ಸಾಕಷ್ಟು ಆಳವಾಗಿ ಯೋಚಿಸಿದ್ದರು. ಈ ಸಂವಿಧಾನದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ರಾಯ್ ಅವರಿಗೆ ಪಾರ್ಲಿಮೆಂಟರಿ ಡೆಮೊಕ್ರಸಿ ಸಮ್ಮತವಿದ್ದಿಲ್ಲ.

ಸಂವಿಧಾನದ ಈ ಮಸೂದೆ (ಡ್ರಾಫ್ಟ್) ಪಾರಂಪಾರಿಕ ಘಟನಾತಜ್ಞರಿಗೆ ಒಪ್ಪಿಗೆ ಇಲ್ಲದಿದ್ದರೂ ನಾವು ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ರಾಯ್ ಅವರಿಗೆ ಪ್ರಾಮುಖ್ಯವಾಗಿ ಸಾಮಾನ್ಯ ಜನತೆಯ ಸಾರ್ವಭೌಮ ಸತ್ತೆಯನ್ನು ಪ್ರಸ್ಥಾಪಿಸುವ ಹಂಬಲವಿತ್ತು. ಈ ಸಂವಿಧಾನದ ಆಧಾರಸ್ತಂಭವೆಂದರೇ ಜನತಾ ಕಮಿಟಿಗಳು ಅಥವಾ ಲೋಕ ಸಮಿತಿಗಳು.

ರಾಯ್ ಆಗ ತೀರ ಆಹ್ವಾನಕೊಡುವ ಮೂಡಿನಲ್ಲಿದ್ದರು, ರ‍್ಯಾಡಿಕಲ್ ಪಕ್ಷದ ಸ್ಥಾಪನೆಯ ಹಿಂದಿನ ಮುಖ್ಯ ಉದ್ದೇಶವೆಂದರೆ. ರಾಯ್ ಹೇಳಿದ್ದು, ಉಳಿದ ಯಾವ ಪಕ್ಷಕ್ಕೂ ಜನತೆಯ ನಿಜವಾದ ಸ್ವಾತಂತ್ರ್ಯ ಬೇಕಿಲ್ಲವಾದ್ದರಿಂದ ಹೊಸ ಪಕ್ಷ ತೆಗೆಯಬೇಕಾಯಿತು. ಹಳೆಯ ಪಕ್ಷಗಳು ತಮ್ಮ ಕಾರ್ಯಕ್ರಮಗಳನ್ನು ಸಾದರಪಡಿಸಲಿ ಹಾಗೂ ಆ ಕಾರ್ಯಕ್ರಮಗಳು ಜನತೆಯ ಹಿತಕ್ಕಾಗಿ, ಜನತೆಯ ಸ್ವಾತಂತ್ರ್ಯಕ್ಕಾಗಿ ರಚಿಸಲ್ಪಟ್ಟಿವೆ ಎಂದು ಕಂಡು ಬಂದರೆ ತಾವು ರ‍್ಯಾಡಿಕಲ್ ಪಕ್ಷವನ್ನು ಕೂಡಲೆ ಮುಚ್ಚಿಬಿಡುತ್ತೇವೆ. ರಾಯ್ ಅವರ ಪ್ರಕಾರ ಕಾಂಗ್ರೆಸ್ಸು ಬಂಡವಾಳದಾರರ ಪಕ್ಷವಿದ್ದುದರಿಂದ ಅದು ಬರೇತೋರಿಕೆಯ ಜನತಂತ್ರ ಕಟ್ಟಲಿದೆ-ನಿಜವಾದ ಜನತಂತ್ರವಲ್ಲ.

ಕ್ರಿಪ್ಸ್ ಯೋಜನೆಯಾಯಿತು, ವೇವೆಲ್ ಯೋಜನೆಯಾಯಿತು- ಬ್ರಿಟಿಷ್ ಸರಕಾರವು ಕಾಂಗ್ರೆಸ್ಸಿಗೇ ಸತ್ತೆಯನ್ನು ಕೊಡುವ ಸಿದ್ಧತೆ ಮಾಡತೊಡಗಿತು. ಅವರಿಗೆ ಕಾಳಜಿ ಇದ್ದದ್ದು ಬೇರೆ ಯಾವ ಪಕ್ಷದ ಬಗ್ಗೆ ಅಲ್ಲ-ಬರೇ ಮುಸ್ಲಿಮ್‌ಲೀಗದ ಬಗ್ಗೆ.

ಯುದ್ಧ ಮುಗಿದ ನಂತರ ಕೂಡಲೆ ಬೇರೆ ಬೇರೆ ಪ್ರಾಂತಗಳ ಲ್ಲಿಯ ವಿಧಾನಸಭೆಗಳಿಗೆ ಹಾಗೂ ಕೇಂದ್ರೀಯ ಅಸೆಂಬ್ಲಿಯ ಸಲುವಾಗಿ ೧೯೪೬ರಲ್ಲಿ ಚುನಾವಣೆಗಳಾದವು. ರ್‍ಯಾಡಿಕಲ್ ಪಕ್ಷವೂ ಅತ್ಯಂತ ಹುಮ್ಮಸ್ಸಿನಿಂದ ನಿರ್ಧಾರದಿಂದ ಚುನಾವಣೆಗಳಲ್ಲಿ ಭಾಗವಹಿಸಿತು. ಕೆಲವರಾದರೂ ರ್‍ಯಾಡಿಕಲ್ ಪಕ್ಷದ ಉಮೇದುವಾರರು ಯಶಸ್ಸುಗಳಿಸ ಬಹುದೆಂದು ರಾಯ್ ತಿಳಿದಿದ್ದರು. ಕೆಲವರಿದ್ದರೂ ಸಾಕು ಸಾಕಷ್ಟು ವಿಧಾಯಕ ಕೆಲಸ ಮಾಡಬಹುದೆಂದು ಅವರ ಆಶೆ. ಆದರೆ ಕಾಂಗ್ರೆಸ್- ಮುಸ್ಲಿಮಲೀಗಗಳ ಗಾಳಿಗಳು ಜೋರಾಗಿ ಬೀಸಿದ್ದರಿಂದ, ಮರಳಿ ಭಾವನೆ ಹಾಗೂ ಜಾತೀಯತೆ ಜನರ ಮನಸ್ಸಿನ ಮೇಲೆ ಪ್ರಭಾವ ಬೀರಿದ್ದರಿಂದ, ಕಾಂಗ್ರೆಸ್ಸನ್ನು ಟೀಕಿಸುವ, ಗಾಂಧೀ-ನೆಹರೂ ಅವರನ್ನು ಟೀಕಿಸುವ, ಯಾವುದೋ ಯುಟೋಪಿಯದ ಬಗ್ಗೆ ಮಾತನಾಡುವ, ಸತ್ತೆಯ ಪರಂಪರೆಯಿಲ್ಲದ, ಒಳಗಿನ-ಹೊರಗಿನ ಯಾವ ಶಕ್ತಿಗಳ ಆಸರೆ ಇಲ್ಲದ, ಬರೇ ತರ್ಕಶುದ್ಧತೆಯ ಬುದ್ಧಿವಾದದ ಶಕ್ತಿಯ ಮೇಲೆ ಪ್ರಚಾರಮಾಡುವ ರ್‍ಯಾಡಿಕಲ್ ಪಕ್ಷಕ್ಕೆ ಎಲ್ಲಿಯೂ ಒಂದು ಸ್ಥಳವೂ ಸಿಗಲಿಲ್ಲ.

ರಾಯ್ ಈ ಸತ್ತೆಯ ರಾಜಕಾರಣವೇ ಕೆಟ್ಟದ್ದೆಂದು, ಭಾರತದ ಪರಿಸ್ಥಿತಿ ಇನ್ನೂ ತರ್ಕಶುದ್ಧ ಬುದ್ಧಿವಾದಕ್ಕೆ ಸಿದ್ಧವಾಗಿಲ್ಲವೆಂದು ನಿಷ್ಕರ್ಷೆಗೆ ಬಂದರು. ಹಾಗೂ ೧೯೪೮ ಡಿಸೆಂಬರ್ ತಿಂಗಳಲ್ಲಿ-ಎಂಟು ವರ್ಷದ ಹೋರಾಟದ ನಂತರ-ರಾಯ್ ರ್‍ಯಾಡಿಕಲ್ ಡೆಮೊಕ್ರೆಟಿಕ್ ಪಕ್ಷವನ್ನು ಬರಖಾಸ್ತಗೊಳಿಸಿದರು.

ಪಕ್ಷವನ್ನು ವಿಸರ್ಜಿಸಲು ಹೊರಗಿನ ಘಟನೆಗಳು ಕಾರಣವಾದಂತೆ ರಾಯ್ ಅವರಲ್ಲಿ ಬಹಳ ದಿನಗಳಿಂದ ಉಂಟಾಗುತ್ತಿದ್ದ ವೈಚಾರಿಕ ಪರಿವರ್ತನೆಯೂ ಕಾರಣವಾಗಿತ್ತು.

ಜೇಲಿನಲ್ಲಿರುವಾಗಲೆ ರಾಯ್ ಅವರು ವಿಜ್ಞಾನ-ತತ್ವಜ್ಞಾನದ ಆಳವಾದ ಅಭ್ಯಾಸ ಮಾಡಿದ್ದರು. ಆಗಲೇ ಮಾರ್ಕ್ಸ್‌ವಾದವನ್ನು ಸ್ವಲ್ಪ ಪರೀಕ್ಷಿಸಿ ನೋಡಬೇಕೆಂದು ಅನಿಸಿರಲಿಕ್ಕೂ ಸಾಕು. ಮುಂದೆ ಸ್ಟಾಲಿನ್‌ನು 'ಪ್ರಲಿಟೇರಿಯಟ್‌ದ ಸಾರ್ವಭೌಮತ್ವ'ದ ಮಾರ್ಕ್ಸ್‌ನ ಕಲ್ಪನೆಯ ಮೇಲೆ ತನ್ನ ವೈಯಕ್ತಿಕ ಸಾರ್ವಭೌಮತ್ವದ ಆಳಿಕೆ ಸುರುಮಾಡಿದಾಗ, ಎಲ್ಲ ಸತ್ತೆಯನ್ನು ತನ್ನ ಕೈಯಲ್ಲಿ ಕೇಂದ್ರೀಕರಿಸಿಕೊಂಡು ತನ್ನ ವಿರೋಧಿಗಳನ್ನು ನಿರ್ದಾಕ್ಷಿಣ್ಯವಾಗಿ 'ಇಲ್ಲವಾಗಿ'ಸುವಾಗ, ರಾಯ್ ಅವರಿಗೆ ಸಾಕ್ಷಾತ್ಕಾರವಾಗಿದ್ದು – ಕಮ್ಯುನಿಜಮ್ಮಿನಲ್ಲಿ ವ್ಯಕ್ತಿಸ್ವಾತಂತ್ರ್ಯವಿಲ್ಲ, ವ್ಯಕ್ತಿಗೆ ಕಿಮ್ಮತ್ತಿಲ್ಲ, ಕಮ್ಯುನಿಜಮ್ಮದ 'ಗುರಿ ಸರಿಯಿದ್ದರೆ ತೀರಿತು, ಸಾಧನೆ ಸರಿ ಇರಬೇಕೆಂದಿಲ್ಲ' ಎಂಬ ಅನೀತಿಪರ ವೃತ್ತಿಯಿಂದ ರಶಿಯದ ರಾಜಕಾರಣ ಬರೇ ಸಂಶಯ-ಭೀತಿ-ಅಸೂಯೆ-ಸಂಚು-ಒಳಸಂಚುಗಳಿಂದ ಹೊಲಸೆದ್ದು ಹೋದ ರೀತಿ-ಹೀಗೇಕೆ ನಡೆಯುತ್ತಿದೆ ? ಮಾರ್ಕ್ಸ್‌ನೇ ಎಲ್ಲಿಯಾದರೂ ತಪ್ಪಿದ್ದಾನೆಯೋ ? ಮಾರ್ಕ್ಸ್‌ನ ಮೊದಲ ಕೃತಿಗಳಲ್ಲಿ ಆತ ಸಂಪೂರ್ಣ ಮಾನವತಾವಾದಿಯಾಗಿದ್ದು, ಪ್ರತಿಯೊಬ್ಬ ವ್ಯಕ್ತಿಗೂ ಸ್ವಾತಂತ್ರ್ಯ, ಸುಖ ಸಿಗಬೇಕು, ಅವನ ಸುತ್ತಲಿನ ಜಗತ್ತಿನೊಡನೆ ಅವನು ಉಪಯೋಗಿಸುವ ಸಾಧನೆಗಳೊಡನೆ ಆತ ಸಾಮರಸ್ಯದಿಂದಿರಬೇಕು, ವಿಘಟಿತವಾಗಬಾರದು–ವಿಘಟನೆ (alienation) ಯೇ ಮಾನವೀ ದುಃಖದ ಮೂಲ ಇತ್ಯಾದಿಯಾಗಿ ಹೇಳಿದ್ದ. ಸಮಾಜ ರಚನೆಯನ್ನು ಪರಿವರ್ತನೆಗೊಳಿಸಲೆಂದೇ ಮುಂದೆ ಸಮಾಜ ಜೀವನದ ಕೇಂದ್ರ ಪ್ರಕ್ರಿಯೆಯನ್ನು ಗುರುತಿಸಿ ಅದನ್ನು ಬದಲಿಸಿದರೇನೆ ಕ್ರಾಂತಿ ಸಾಧ್ಯ, ಮಾನವೀ ಸಮಾಜದ ಆದರ್ಶ ಸಂಘಟನೆ ಸಾಧ್ಯ ಎಂದು ನಿರ್ಧರಿಸಿ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ಬರೆದ,

ಅಲ್ಲಿಂದ ಮಾರ್ಕ್ಸ್‌ನ ವಿಚಾರಸರಣಿ ಬೇರೆಯಾಯಿತು.... ಇದನ್ನೆಲ್ಲ ಸರಿಯಾಗಿ ತಾನು ಆತ್ಮಸಾಲ್ ಮಾಡಿಕೊಂಡ ರಾಯ್ ಅದನ್ನೀಗ ವಿಜ್ಞಾನ–ತತ್ತ್ವಜ್ಞಾನದ ಇತಿಹಾಸದ ಬೆಳಕಿನಲ್ಲಿ ಪರೀಕ್ಷಿಸಿ ನೋಡಬೇಕೆಂದು ಯೋಚಿಸಿದ್ದರು. ಪಕ್ಷದ ರಾಜಕಾರಣದ ಜವಾಬ್ದಾರಿಯನ್ನು ಹೊತ್ತು ಕಾರ್ಯಗತವಾದಾಗಲೂ ರಾಯ್ ಮಾರ್ಕ್ಸ್‌ವಾದದಿಂದಾಚೆ ಹೋಗುವ ಹವ್ಯಾಸದಲ್ಲಿದ್ದರು.

ಆದ್ದರಿಂದ, ಪಕ್ಷದ ವಿಸರ್ಜನೆ ಮಾಡಿದ ಕೂಡಲೆ, 'ಇಂಡಿಯನ್ ರಿನೇಜನ್ಸ್ ಮೂವ್‌ಮೆಂಟ್'ನ್ನು ಪ್ರಾರಂಭಿಸಿ ರ್‍ಯಾಡಿಕಲ್ ಹ್ಯೂಮನಿಜಮ್ ಅಂದರೆ ನವಮಾನವತಾವಾದದ ತತ್ತ್ವಪ್ರಣಾಲಿಯನ್ನು ರಾಯ್ ಸೃಷ್ಟಿಸತೊಡಗಿದರು.

ಅಧ್ಯಾಯ ೭

ನವಮಾನವತಾವಾದದ ನಾಂದಿ

೧೯೪೭ರಲ್ಲಿ ಎಮ್.ಎನ್. ರಾಯ್ ಅವರು 'ಸಾಯಂಟಿಫಿಕ್ ಪಾಲಿಟಿಕ್ಸ್' ('Scientific Politics') ಎಂಬ ಗ್ರಂಥವನ್ನು ಪ್ರಕಟಿಸಿದರು. ಅವರಲ್ಲಿ ಮೊದಲು ಮಾರ್ಕ್ಸ್‌ವಾದದ ಬಗ್ಗೆ ಪ್ರಶಂಸಾತ್ಮಕವಾಗಿಯೇ ಮಾತನಾಡುತ್ತಾರೆ. "ಭೌತಿಕ ಪ್ರಕೃತಿ, ಸಾಮಾಜಿಕ ಉತ್ಕ್ರಾಂತಿ ಹಾಗೂ ಮಾನವೀ ಪ್ರಜ್ಞೆ ಮತ್ತು ಭಾವನೆ-ಈ ಮೂರೂ ಪ್ರಕ್ರಿಯೆಗಳನ್ನು ಒಂದುಗೂಡಿಸಿ ಒಂದು ತತ್ವಜ್ಞಾನ ನಿರ್ಮಿಸುವ ಬೌದ್ಧಿಕ ಪ್ರಯತ್ನದಿಂದ ಮಾರ್ಕ್ಸ್‌ವಾದ ಹೊರಬಂತು." ಮೊದ ಮೊದಲಿಗೆ ಮಾರ್ಕ್ಸ್ ಸಂಪೂರ್ಣ ಮಾನವತಾವಾದಿಯಾಗಿದ್ದು ವೈಯಕ್ತಿಕ ಸ್ವಾತಂತ್ರ್ಯದ ಪ್ರತಿಪಾದಕನೂ ಆಗಿದ್ದ. ಹಾಗೂ ಮಾರ್ಕ್ಸ್‌ನ ಸಮಾಜವಾದವೆಂದರೆ 'ಸ್ವಾತಂತ್ರ್ಯದ ರಾಜ್ಯ'ವೆಂದು ವ್ಯಾಖ್ಯಾನಿಸಿ, ಸಮಾಜವಾದದಲ್ಲಿ ಮನುಷ್ಯ ಸಾಮಾಜಿಕ ಪರಿಸರದ ಮೇಲೆ ಸಂಪೂರ್ಣ ನಿಯಂತ್ರಣ ದೊರಕಿಸುತ್ತಾನೆ ಹಾಗೂ ಮಾನವೀ ಬುದ್ಧಿಶಕ್ತಿಯಿಂದ ತನ್ನ ಜೀವನವನ್ನು ಹಿಂಸಿಸುವ ಅವಿವೇಕೀ ಶಕ್ತಿಗಳನ್ನು ಗೆದ್ದು ನಿಲ್ಲುತ್ತಾನೆ ಎಂಬುದು ಮಾರ್ಕ್ಸ್‌ನ ಮೊದಲಿನ ಕಲ್ಪನೆಯಾಗಿತ್ತು ಹಾಗೂ ಅದೇ ಕಲ್ಪನೆ ರಾಯ್ ಅವರ ಆದರ್ಶವಾಗಿತ್ತು.

ಆದರೆ ಮಾರ್ಕ್ಸ್ ಮುಂದೆ ಪ್ರತಿಪಾದಿಸಿದ ತತ್ವವೆಂದರೆ ಸಮಾಜದ ಐತಿಹಾಸಿಕ ಪ್ರಕ್ರಿಯೆಯು ಅದರ ಆರ್ಥಿಕ ಪ್ರಕ್ರಿಯೆಯನ್ನೇ ಮೂಲತಃ

ಅವಲಂಬಿಸಿದೆ ಹಾಗೂ ಮಾನವೀಪ್ರಜ್ಞೆ ಆತನ ಅಸ್ತಿತ್ವದ ಮೇಲೆ ನಿಂತಿದೆ; ಈ ಅಸ್ತಿತ್ವ ಮೂಲತಃ ಆರ್ಥಿಕ ಪ್ರಕ್ರಿಯಿಂದ ನಿಯಂತ್ರಿತವಾಗಿದೆ. ರಾಯ್ ಅವರು ಈ ಪ್ರಮುಖ ತತ್ವವನ್ನೇ ಪ್ರಶ್ನಿಸಿದರು.

ಮಾರ್ಕ್ಸ್‌ನ ಭೌತಿಕವಾದ (Materialism) ದಿಂದ ಅವನ ಈ ತತ್ವ ತಾರ್ಕಿಕವಾಗಿ ಉದ್ಭೂತವಾಗುತ್ತದೆಯೋ ? ಮಾನವನ ಬೆಳವಣಿಗೆಗೆ ಅವನ ಆರ್ಥಿಕ ಉದ್ದಿಷ್ಟವೇ ಕಾರಣ ಎಂದು ಮಾರ್ಕ್ಸ್ ಯಾವ ಆಧಾರದ ಮೇಲೆ ಹೇಳಿದ ? ಅನಾಗರಿಕ ಸ್ಥಿತಿಯ ಆದಿ ಮಾನವ ತನ್ನ ಪ್ರಾಣಿ ಸಹಜ ಅಸ್ತಿತ್ವಕ್ಕಾಗಿ ಹೋರಾಟ ನಡೆಸಿದ, ನಿಜ. ಆದರೆ ಆದಿ ಮಾನವನ ಬೌದ್ಧಿಕ ಪ್ರಯತ್ನಕ್ಕೆ ಪ್ರತ್ಯೇಕವಾದ ಬೆಲೆ ಇಲ್ಲವೇ ? ದೈಹಿಕ ಜರೂರಿಗಳೆಂದರೇ ಆರ್ಥಿಕ ಉದ್ದಿಷ್ಟವೆಂದು ಮಾರ್ಕ್ಸ್ ಹೇಗೆ ಹೇಳಿದ ?

ರಾಯ್ ೧೯೪೬ ರಿಂದಲೇ ತಮ್ಮ ಸ್ಟಡಿಸರ್ಕಲ್ಲುಗಳಲ್ಲಿ ಈ ರೀತಿಯ ಪ್ರಶ್ನೆಗಳನ್ನು ಎತ್ತಿ ಎಲ್ಲರೊಡನೆ ಚರ್ಚಾಪತ್ರಗಳನ್ನು ಪ್ರಾರಂಭಿಸಿದ್ದರು. (ಮುಂಬೈಯಲ್ಲಿ ನಡೆದ ರಾಯ್ ಅವರ ಎಂಟು ದಿನದ ಒಂದು ಸ್ಟಡಿ ಸರ್ಕಲ್‌ಗೆ ಈ ಲೇಖಕನೂ ಹೋಗಿದ್ದ- ಧಾರವಾಡದ ಅನೇಕ ಸ್ನೇಹಿತರ ಜೊತೆ.)

ರಾಯ್ ಅವರು ಮಾರ್ಕ್ಸ್‌ವಾದದ ವಿಶ್ಲೇಷಣೆ ಮಾಡುತ್ತ ಅದು ಸೃಷ್ಟಿಯಾದ ಪರಿಸರದ ವಿವೇಚನೆ ಮಾಡಿದರು. ಔದ್ಯೋಗಿಕ ಕ್ರಾಂತಿಯ ಕಾಲದಲ್ಲಿ ಅಂದರೆ ಆರ್ಥಿಕ ವ್ಯವಹಾರದಲ್ಲಿ ಇಡಿಯ ಯುರೋಪದ ಸಮಾಜ ಮಗ್ನವಾದ ಕಾಲದಲ್ಲಿ ಮಾರ್ಕ್ಸ್ ತನ್ನ ತತ್ವಜ್ಞಾನ ಸೃಷ್ಟಿಸಿದ್ದರಿಂದ ಅವನಿಗೆ ಆರ್ಥಿಕ ಪ್ರಕ್ರಿಯೆಯೇ ಅತ್ಯಂತ ಮಹತ್ವದ ಪ್ರೇರಕಶಕ್ತಿಯಾಗಿ ಕಂಡಿರಬೇಕು ಎಂದು ರಾಯ್ ಹೇಳಿದರು. ಉತ್ಪಾದನೆಯ ಸಾಧನೆಗಳು ಅತ್ಯಂತ ಮಹತ್ವದವು, ನಿಜ. ಆದರೆ ಈ ಉತ್ಪಾದನೆಯ ಸಾಧನೆಗಳನ್ನು ಸೃಷ್ಟಿಸಿದವರು ಯಾರು ? ರಾಯ್ ಹೇಳಿದ್ದು: ಉತ್ಪಾದನೆಯ ಸಾಧನೆಗಳ ಸೃಷ್ಟಿಯು ಮುಂಚೆ ಆ

ಸಾಧನೆಗಳ ಸೃಷ್ಟಿಯ ಕಲ್ಪನೆ, ಆ ಸೃಷ್ಟಿಯ ಯೋಚನೆಯನ್ನು ಸೃಷ್ಟಿಸಿದವರಾರು ?

ರಾಯ್ ಆಧುನಿಕ ಅಂಥ್ರೊಪಾಲಜಿಯ ಸಂಶೋಧನೆಗಳ ಆಧಾರದ ಮೇಲೆ ಪ್ರತಿಪಾದಿಸಿದ್ದೇನಂದರೆ-ಆದಿ ಮಾನವನ ತಲೆಯಲ್ಲಿಯ ಮಿದುಳಿನಲ್ಲಿ ಹುಟ್ಟಿದ ಯೋಚನೆ (idea)ಯ ಮೂಲಕವೇ ಉತ್ಪಾದಕ ಸಾಧನೆಗಳ ಸೃಷ್ಟಿಯಾಯಿತು. ಮಂಗ–ಮನುಷ್ಯ ಗಿಡದ ಟೊಂಗೆಯನ್ನು ಮುರಿದು ಅದರ ಸಾಧನೆಯಿಂದ ಹಣ್ಣು ಹರಿದ ಎಂದು ಇಟ್ಟುಕೊಳ್ಳೋಣ. ಗಿಡವೇರಿ ಹಣ್ಣು ಹರಿಯುವದಕ್ಕಿಂತ ಆತ ತನ್ನ ಕೈಯನ್ನೇ ಒಂದು ರೀತಿ ಟೊಂಗೆಯ ಮುಖಾಂತರ ಉದ್ದ ಮಾಡಿದನಲ್ಲವೇ ? ಸಾಧನೆಯ ಸೃಷ್ಟಿಯ ಮುಂಚೆ ಯೋಚನೆ ಮಿದುಳಿನಲ್ಲಿ ಹುಟ್ಟುತ್ತದೆ.

ಮಾರ್ಕ್ಸ್‌ನ ಕ್ರಾಂತಿಯ ಕಲ್ಪನೆಯಲ್ಲಿ ಮನುಷ್ಯರ ಸೃಜನಶೀಲ ಕೃತಿಯ ಕಲ್ಪನೆ ಅಡಕಗೊಂಡಿರುವಾಗ, ಆತ ಐತಿಹಾಸಿಕ ಪ್ರಕ್ರಿಯೆಯ ವಿಶ್ಲೇಷಣೆಯನ್ನು ಬರೇ ಆರ್ಥಿಕ ದೃಷ್ಟಿಯಿಂದ ಮಾಡುವದು ತಪ್ಪಲ್ಲವೇ ? ಆರ್ಥಿಕ ನಿಯತಿಯನ್ನು ಒಪ್ಪಿಕೊಂಡರೆ ಮನುಷ್ಯನ ಸೃಜನಶಕ್ತಿಗೆ ಅವಕಾಶವೇ ಇಲ್ಲವಾಗುತ್ತದಲ್ಲ ? ಆರ್ಥಿಕ ನಿಯತಿಯೇ ಮುಖ್ಯವಾದರೆ ಮನುಷ್ಯ ಇತಿಹಾಸವನ್ನು ಹೇಗೆ ಸೃಜಿಸಬಲ್ಲ ?

ಆದ್ದರಿಂದ, ರಾಯ್ ಹೇಳಿದ್ದು: ಮಾರ್ಕ್ಸ್ ಕ್ರಾಂತಿಯನ್ನು ಪ್ರತಿಪಾದಿಸುವಾಗ ಆತ ತನ್ನ ಭೌತಿಕ-ಆರ್ಥಿಕ ನಿಯತಿಯ ತತ್ವದಿಂದ ದೂರ ಹೋಗಿದ್ದಾನೆ. 'ಜಗತ್ತಿನ ಕಾರ್ಮಿಕರೇ, ನೀವು ಒಂದಾಗಿರಿ, ನಿಮ್ಮ ಬಂಧನಗಳನ್ನು ಹರಿದೊಗೆಯಿರಿ' ಎಂದು ಸಂಬೋಧಿಸುವಾಗ ಅವನ ಅಂತರ್ಯದಲ್ಲಿ ಮನುಷ್ಯ ಇತಿಹಾಸದ ಕರ್ತೃ, ಆತ ಸೃಜನಶೀಲ ಶಕ್ತಿಯುಳ್ಳವ ಎಂಬ ಕಲ್ಪನೆ ಇದ್ದೇ ಇದೆ ತಾನೇ ?

ಮಾನವೀ ಸಮಾಜ ನಿಯಂತ್ರಿತವಾಗಿದೆ, ನಿಜ. ಆದರೆ ಆ ನಿಯಂತ್ರಣಕ್ಕೆ ಹಲವಾರು ಕಾರಣಗಳಿವೆ–ಆರ್ಥಿಕ ಕಾರಣವೊಂದೇ ಅಲ್ಲ. ಬುದ್ಧಿಜನ್ಯ ಯೋಚನೆಗಳೂ ಕಲ್ಪನೆಗಳೂ ಕಾರಣವಾಗಿವೆ.

ರಾಯ್ ಪ್ರತಿಪಾದಿಸಿದ್ದು: ಸಮಾಜದ ಬುನಾದಿ ಎಂದರೆ ಮನುಷ್ಯನ ಸ್ವಾತಂತ್ರ್ಯದ ಹಸಿವು-ಈ ಹಸಿವು ಹುಟ್ಟಿದ್ದು ಮನುಷ್ಯನ ಸ್ವಅಸ್ತಿತ್ವದ ಸಂರಕ್ಷಣೆಯ ಜರೂರಿನಲ್ಲಿ.

* * *

ಮಾರ್ಕ್ಸ್‌ನ ಮೂಲ ಪ್ರೇರಣೆ ಮಾನವತಾವಾದೀ ಪ್ರೇರಣೆಯಾಗಿತ್ತಲ್ಲದೆ, ಬಂಡವಾಳಶಾಹಿಯ ಮೋಸ, ವಂಚನೆಗಳ ವಿರುದ್ಧ ಹೋರಾಟ ಪ್ರಾರಂಭಿಸಿದಾಗ ತೀವ್ರ ನೈತಿಕ ಪ್ರಜ್ಞೆಯ ಪ್ರೇರಣೆಯೂ ಇತ್ತು. ಆದರೆ ಮುಂದೆ ಹೆಗೆಲ್‌ನ ದ್ವಂದ್ವಾತ್ಮಕ ವಿಚಾರಸರಣಿ (dialectics)ಯಿಂದ ಪ್ರಭಾವಿತನಾಗಿ ನೈತಿಕತೆಯಿಂದ ದೂರವಾದ-ಕ್ರಾಂತಿಯ ದೆಸೆಯಿಂದ ದೂರವಾದ. ಇದನ್ನು ತಿಳಿಯದ ಕಮ್ಯುನಿಸ್ಟರು ಮಾರ್ಕ್ಸ್‌ನ ಕ್ರಾಂತಿ–ತತ್ವಕ್ಕೆ ಕುರುಡುತನದಿಂದ ಅಂಟಿಕೊಂಡು ಕ್ರಾಂತಿಯಾದ ಮೇಲೂ any means to a good end ಎಂಬ ಅನೀತಿಪರ ರಾಜಕಾರಣ ಪ್ರಾರಂಭಿಸಿದರು.

ಮಾರ್ಕ್ಸ್‌ನ ನಂತರದ ವಿಚಾರಸರಣಿ ಹೆಗೆಲನ dialectics ದಿಂದ ತುಂಬ ಪ್ರಭಾವಿತವಾಗಿತ್ತು. ಈಗ ರಾಯ್ ಆ ಡಾಯಲೆಕ್ಟಿಕ್ಸ್ ಪದ್ಧತಿಯನ್ನೇ ಖಂಡಿಸಿದರು. ಮಾರ್ಕ್ಸ್‌ನ antlology ಹಾಗೂ logic ಗಳ ಬಗ್ಗೆ ಗೊಂದಲ ಮಾಡಿಕೊಂಡ ಪ್ರಕೃತಿಯ ಪ್ರಕ್ರಿಯೆಗಳಲ್ಲಿ ಕಂಡು ಬರುವ ತತ್ವ ನಮ್ಮ ತರ್ಕ ಪದ್ಧತಿಯ ತತ್ವವೆಂದು ತಪ್ಪು ಬಗೆದ. ರಾಯ್ ಅವರು ಈಗ ಪ್ರತಿಪಾದಿಸಿದ್ದೆಂದರೆ-ಪ್ರಾಕೃತಿಕ ಪ್ರಕ್ರಿಯೆಗಳನ್ನು ಡಾಯಲೆಕ್ಟಿಕ್ಸ್‌ನ್ನು ಅವಲಂಬಿಸದೇ ನಾವು ವಿಶ್ಲೇಷಿಸಬಹುದು. ಉದಾ: ಪ್ರಜಾತಂತ್ರದಿಂದ ಸಮಾಜವಾದದತ್ತ ಸಾಗಿದ ವಿಚಾರಪ್ರಣಾಲಿ ಡಾಯಲೆಕ್ಟಿಕ್ಸ್‌ನ ಫಲವಲ್ಲ, ವೈಚಾರಿಕ ಸಾತತ್ಯದ, ಉತ್ಕ್ರಾಂತಿಯ ಫಲ. ಪ್ರಜಾತಂತ್ರಕ್ಕೆ ವಿರುದ್ಧವಾಗಿ (anti-thesis) ಆಗಿ ಸಮಾಜವಾದ ಬರಲಿಲ್ಲ; ಸಮಾಜವಾದ ಬಂದದ್ದು ಪ್ರಜಾತಂತ್ರವನ್ನು ವಿಸ್ತೃತಗೊಳಿಸಬೇಕೆಂಬ ಬೌದ್ಧಿಕ ಹಾಗೂ ರಾಜಕೀಯ ಪ್ರಯತ್ನಗಳಿಂದ.

ಮಾರ್ಕ್ಸ್‌ನ ಒಂದು ಅತ್ಯಂತ ಮಹತ್ವದ ಸಿದ್ಧಾಂತವೆಂದರೆ 'ಸರ್ಪ್ಲಸ್ ವ್ಯಾಲ್ಯೂ' (surplus valge) ತತ್ವ. 'ಸರ್ಪ್ಲಸ್‌ವ್ಯಾಲೂ' ಅಂದರೆ ಮಿಕ್ಕಿದ ಅಥವಾ ಹೆಚ್ಚುವರಿ ಉತ್ಪನ್ನವು ಬಂಡವಾಳಶಾಹಿಯು ಅರ್ಥ ವ್ಯವಸ್ಥೆಯು ವಿಶಿಷ್ಟ ಲಕ್ಷಣವಿದ್ದು, ಈ ಹೆಚ್ಚುವರಿ ಉತ್ಪನ್ನ ಕಾರ್ಮಿಕರ ಶೋಷಣೆಯು ಫಲವೆಂಬುದು ಮಾರ್ಕ್ಸ್‌ನ ಹೇಳಿಕೆ. ಶೋಷಣೆ ಸಮಾಜ ವ್ಯವಸ್ಥೆಯು ಪರಿಣಾಮ; ಸರ್ಪ್ಲಸ್ ವ್ಯಾಲ್ಯೂ ಅಂದರೇ ಶೋಷಣೆಯಲ್ಲ, ಹಾಗಿದ್ದರೆ ಸದ್ಯ ರಶಿಯಾದಲ್ಲಿ ಆಗುತ್ತಿದ್ದ ಸರ್ಪ್ಲಸ್ ವ್ಯಾಲ್ಯೂ ಉತ್ಪನ್ನವು ಶೋಷಣೆಯಿಂದಲೇ ನಡೆದಿದೆ ಎನ್ನಬೇಕಾಗುತ್ತದೆ. ಐತಿಹಾಸಿಕವಾಗಿ, ಸರ್ಪ್ಲಸ್ ವ್ಯಾಲ್ಯೂವ ಮೂಲಕ ಉತ್ಪಾದನೆ ಸಾಧನೆಗಳ ಅಭಿವೃದ್ಧಿ ಹಾಗೂ ಆ ಮೂಲಕ ಸಾಮಾಜಿಕ ಪ್ರಗತಿ ಸಾಧ್ಯವಾದದ್ದುಂಟು. ಸರ್ಪ್ಲಸ್ ವ್ಯಾಲ್ಯೂದಿಂದಲೇ ನಾಗರಿಕತೆಗಳು ಬೆಳೆದದ್ದು. ಪ್ರಾಚೀನ ನಾಗರಿಕತೆಗಳು ಅಸ್ತವಾಗಲಿಕ್ಕೆ ಕಾರಣವೆಂದರೆ ಸಾಕಷ್ಟು ಸರ್ಪ್ಲಸ್‌ವ್ಯಾಲ್ಯೂ ಅಂದರೆ ಉಳಿತಾಯದ ಉತ್ಪತ್ತಿ ಆಗದೇ ಇದ್ದುದು.

ಗಮ್ಮತ್ತೆಂದರೆ. 'ಸರ್ಪ್ಲಸ್ ವ್ಯಾಲ್ಯೂ'ದ ಉತ್ಪನ್ನ ನಿರ್ಮಿಸುವದನ್ನು ನಿಲ್ಲಿಸಿಬಿಡಬೇಕೆಂದು ಮಾರ್ಕ್ಸ್ ಎಂದೂ ಹೇಳುವದಿಲ್ಲ. ಯಾಕಂದರೆ 'ಸರ್ಪ್ಲಸ್ ವ್ಯಾಲ್ಯೂ'ದ ಮಹತ್ವ ಅವನಿಗೆ ಗೊತ್ತಿದೆ. ಅವನ ಮುಖ್ಯ ಉದ್ದೇಶ ಆ 'ಸರ್ಪ್ಲಸ್ ವ್ಯಾಲ್ಯೂ'ದ ನಿರ್ಮಿತಿಗೆ ಸಂಬಂಧಿಸಿದ ಶೋಷಣೆಯನ್ನು ಇಲ್ಲವಾಗಿಸಬೇಕು.

ಈ ಶೋಷಣೆಯನ್ನು ನಿಲ್ಲಿಸಬೇಕೆನ್ನುವದು ಆರ್ಥಿಕ ಸಮಸ್ಯೆಯಲ್ಲ; ಅದು ನೈತಿಕ ಸಮಸ್ಯೆ. ಸಾಮಾಜಿಕ ನ್ಯಾಯದ ಸಮಸ್ಯೆ. ಆದರೆ ಮಾರ್ಕ್ಸ್ ಅತ್ತ ದುರ್ಲಕ್ಷ್ಯ ಮಾಡಿ ಅದನ್ನು ಆರ್ಥಿಕ ಸಮಸ್ಯೆಯೆಂದೇ ಪರಿಗಣಿಸಿ ಕಾರ್ಮಿಕವರ್ಗಕ್ಕೆ ಆರ್ಥಿಕ ವ್ಯವಸ್ಥೆಯನ್ನು ಕ್ರಾಂತಿ ಮಾಡಿ ತಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕೆಂದು ಆಹ್ವಾನಿಸುತ್ತಾನ. ಮುಖ್ಯವಾದ ಮಾತೆಂದರೆ-ಅವನ ತತ್ವವೇ ದೋಷಯುಕ್ತವಾಗಿವೆ ಎಂದು ರಾಯ್ ಹೇಳಿದರು.

ಮಾರ್ಕ್ಸ್‌ನ ಕಾರ್ಯಕ್ರಮದಂತೆಯೇ ರಶಿಯದ ರಾಜ್ಯಕ್ರಾಂತಿಯಾಗಿದೆ ಸರಿ. ಆ ನಂತರದ ಸ್ಟಾಲಿನ್ ರಾಜ್ಯವ್ಯವಸ್ಥೆ ಕೂಡ ಮಾರ್ಕ್ಸ್‌ನ ಕಾರ್ಯಕ್ರಮದ ಮೇಲೆ ಸಾಗಿದೆ-ಯಾವುದರ ಮೇಲೆ ? 'ಸರ್ಪ್ಲಸ್ ವ್ಯಾಲ್ಯೂ'ದ ಮೇಲೆ. ಅಂದರೆ ಕಾರ್ಮಿಕ ವರ್ಗವೇ ಕಾರ್ಮಿಕರನ್ನು ಶೋಷಿಸುವದರ ಮೇಲೆ- ಎಂದು ಚುಚ್ಚುಮಾತು ಹೇಳುತ್ತಾರೆ.

'ಸರ್ಪ್ಲಸ್ ವ್ಯಾಲ್ಯೂ' = ಶೋಷಣೆ ಈ ತತ್ವದ ಮೇಲೆ ವರ್ಗ ಕಲಹದ ಸಿದ್ಧಾಂತ ನಿಂತಿದೆ. ಮಾರ್ಕ್ಸ್ ಇಡಿಯ ಇತಿಹಾಸದಲ್ಲೇ ವರ್ಗಕಲಹ ಕಂಡ: 'ನಾಗರಿಕತೆಯ ಚರಿತ್ರೆಯೆಂದರೆ ವರ್ಗಕಲಹಗಳ ಚರಿತ್ರೆ' ಎಂಬ ಮಾತು 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ'ದ ಮೊದಲ ವಾಕ್ಯ.

ಈ ವರ್ಗಗಳ ಹಿತಾಸಕ್ತಿಗಳು ಬೇರೆ ಬೇರೆಯಾಗಿದ್ದರೂ ಸಮಾಜ ಒಡೆಯಲಿಲ್ಲವೇಕೆ ? ಎಂದು ರಾಯ್ ಕೇಳುತ್ತಾರೆ.

* * *

ಮಾರ್ಕ್ಸ್‌ನು ಮಧ್ಯಮವರ್ಗದ ಬಗ್ಗೆ ಮಾಡಿದ ವಿಧಾನಗಳೆಲ್ಲ ತಪ್ಪೆಂದು ರಾಯ್ ವಾದಿಸುತ್ತಾನೆ. ಮಧ್ಯಮ ವರ್ಗ ಸಾವಕಾಶವಾಗಿ ನಾಶವಾಗುತ್ತದೆ ಎಂಬ ಮಾರ್ಕ್ಸ್‌ನ ಭವಿಷ್ಯವಾಣಿ ಸುಳ್ಳಾಗಿದೆ. ಆರ್ಥಿಕ ಶೋಷಣೆಗೆ ಮಧ್ಯಮ ವರ್ಗವು ಗುರಿಯಾಗಿದ್ದರೂ–ಶಿಕ್ಷಣ, ಸಂಸ್ಕೃತಿ, ವೈಚಾರಿಕ ಪ್ರಗತಿ ಇತ್ಯಾದಿ ಕ್ಷೇತ್ರಗಳಲ್ಲಿ ಅವರು ಪ್ರತ್ಯೇಕವಾಗಿಯೇ ಉಳಿದು, ಈ ವರ್ಗವೇ ಪ್ರಾಮುಖ್ಯವಾಗಿ ಜನತಂತ್ರ, ಸಮಾಜವಾದ, ಸಾಮಾಜಿಕ ನ್ಯಾಯಗಳಿಗಾಗಿ ಹೋರಾಡುತ್ತದೆ.

ಯುರೋಪದಲ್ಲಿ ಕಮ್ಯುನಿಸ್ಟ್ ಕ್ರಾಂತಿಯಿಂದ ಮಧ್ಯಮವರ್ಗವು ಬೇರ್ಪಟ್ಟು ನಿಂತಿದ್ದರಿಂದ ಅಲ್ಲಿಯ ಕ್ರಾಂತಿ ಶಿಥಿಲಗೊಂಡಿತು. ಮಧ್ಯಮ ವರ್ಗವನ್ನು ಕ್ರಾಂತಿ ಉಪೇಕ್ಷಿಸಿದ್ದು ಲೆನಿನ್‌ನಿಗೆ ಸರಿಬೀಳಲಿಲ್ಲ.

ಮಧ್ಯಮ ವರ್ಗದವರೇ ಸಾಮಾಜಿಕ ಕ್ರಾಂತಿಯ ಅಥವಾ ಪರಿವರ್ತನೆಯ ಪ್ರವರ್ತಕರು, ಕಾರ್ಮಿಕವರ್ಗದವರಲ್ಲ, ಎಂಬ ಸತ್ಯವನ್ನು ಮಾರ್ಕ್ಸ್ ಅಲ್ಲಗಳೆದದ್ದು ಒಂದು ವೈಚಿತ್ರ್ಯವೇ ಸರಿ. ಮಾರ್ಕ್ಸ್‌ನ ಸಿದ್ಧಾಂತವನ್ನೇ ಮುಂದುವರೆಸಿ ಸ್ಟಾಲಿನ್ ನಿರುದ್ಯೋಗಿಗಳಲ್ಲಿ, ಒಂಟಿಯಾಗಿ ಅಂಡಲೆಯುವವರಲ್ಲಿ ಸಮಾಜದ ಕ್ರಾಂತಿಕಾರಿ ಶಕ್ತಿ ಇದೆ ಎಂದ....

ರಾಯ್ ಅವರ ಪ್ರಕಾರ ಸುಶಿಕ್ಷಿತ ಮಧ್ಯಮವರ್ಗವೇ ಸಾಮಾಜಿಕ ನ್ಯಾಯದ ಪ್ರವರ್ತಕ ಶಕ್ತಿಯಾದ್ದರಿಂದ ಭಾರತದಂಥ ದೇಶದಲ್ಲಿ ಅದರ ಸಾಮಾಜಿಕ-ಸಾಂಸ್ಕೃತಿಕ ಜವಾಬ್ದಾರಿ ಬಹಳ ಮಹತ್ವದ್ದು. ಈ ವರ್ಗದಲ್ಲಿದ್ದ ಪ್ರಜ್ಞಾವಂತಿಕೆಯನ್ನು ಬೆಳೆಸಲೆಂದೇ ರಾಯ್ 'ದ ರೀನೆಜನ್ಸ್ ಇನ್‌ಸ್ಟ್ಯೂಟ್'ನ್ನು ಪ್ರಾಸ್ಥಾಪಿಸಿದ್ದು.

೩ * *

ಮಾರ್ಕ್ಸ್ ತನ್ನ ಕ್ರಾಂತಿಯ ಸಿದ್ಧಾಂತ ಸೃಷ್ಟಿಸುವಾಗ ವ್ಯಕ್ತಿಗೆ ವ್ಯಕ್ತಿಯೆಂದು ಮಹತ್ವ ಕೊಡದೆ ಒಂದುವರ್ಗದ ಘಟಕನೆಂದು ಪರಿಗಣಿಸಿದ. ರಾಯ್ ತದ್ವಿರುದ್ಧವಾಗಿ ವ್ಯಕ್ತಿವಾದವನ್ನು ಪ್ರತಿಪಾದಿಸಿದ. ಸಮಾಜವೆಂದರೆ ವ್ಯಕ್ತಿಗಳ ಸಮೂಹ ಹಾಗೂ ಸಾಮಾಜಿಕ ಹಿತವೆಂದರೆ ಪ್ರತಿಯೊಬ್ಬ ವ್ಯಕ್ತಿಯ ಹಿತ. ಸಾಮಾಜಿಕ ವಿಕಾಸದ ಅಳತೆಗೋಲೆಂದರೆ ವ್ಯಕ್ತಿಯೇ. ಸಮಾಜ ಸಾಧನೆ, ವ್ಯಕ್ತಿ ಗುರಿ. ಸಮಾಜವಿರುವುದೇ ವ್ಯಕ್ತಿಗಾಗಿ.

ಹಾಬ್ಸ್‌ನಂತೆ ರಾಯ್ ವ್ಯಕ್ತಿಯಲ್ಲಿಯ ಬುದ್ಧಿ (Reason)ಗೆ ಅಥವಾ ವಿವೇಕಕ್ಕೆ ಅತ್ಯಂತ ಮಹತ್ವ ಕೊಟ್ಟರು. ಮನುಷ್ಯನ ಬುದ್ಧಿಯೆಂದರೆ ಪ್ರಕೃತಿಯ ನಿಯಮದ ಅಂಗವೆಂದರು. ವಿವೇಕವೆಂದರೇ ನೀತಿಯೆಂದರು. ೧೮ನೇ ಶತಮಾನದ ಬುದ್ಧಿವಾದಿಗಳ (Rationalists) ಪ್ರಭಾವವನ್ನು ಅವರು ಸಂಪೂರ್ಣವಾಗಿ ಸ್ವೀಕರಿಸಿದ್ದರು.

ಮಾರ್ಕ್ಸ್‌ನಂತೆ ರಾಯ್ ಸಂಪೂರ್ಣ ಭೌತಿಕವಾದಿ (Materialist) ಮನುಷ್ಯ ಭೌತ ಪ್ರಪಂಚದ ಅವಿಭಾಜ್ಯ ಅಂಗ; ಭೌತ ಪ್ರಪಂಚವು ನಿಯಮಬದ್ಧವಾಗಿದೆ; ಭೌತ ಪ್ರಪಂಚದ ನಿಯಮಬದ್ಧತೆಯೇ ಮಾನವನಲ್ಲಿ ಬುದ್ಧಿಯಾಗಿ, ತರ್ಕಶಕ್ತಿಯಾಗಿ ಪ್ರಕಟಗೊಂಡಿದೆ– ಎಂಬುದು ರಾಯ್ ಅವರ ಮತ.

ರಾಯ್ ಅವರ ನವಮಾನವತಾವಾದ (Radical Humanism)ದ ಅಡಿಗಲ್ಲೆಂದರೆ ವ್ಯಕ್ತಿ, ವ್ಯಕ್ತಿಯ ಸ್ವಾತಂತ್ರ್ಯ, ವ್ಯಕ್ತಿಯ ಬುದ್ಧಿಶಕ್ತಿ,

* * *

ರಾಯ್ ಅವರಿಗೆ ಇತಿಹಾಸವೆಂದರೆ ವರ್ಗ–ಕಲಹದ ಇತಿಹಾಸವಲ್ಲ–ಅದು ಮನುಷ್ಯನ ಸ್ವಾತಂತ್ರ್ಯ–ಹೋರಾಟದ ದಾಖಲೆ. ಹಾಗೂ ಈ ಹೋರಾಟದ ಚರಿತ್ರೆ ಸೇಂದ್ರಿಯ ಉತ್ಕ್ರಾಂತಿ (evolutionary) ಪ್ರಕ್ರಿಯೆಯಾಗಿದೆ. ಮಾರ್ಕ್ಸ್ ಹೇಳುವ ಆರ್ಥಿಕ ನಿಯತಿವಾದ (determinism)ದ ಜೊತೆಗೆ, ಸಾಮಾಜಿಕ-ಐತಿಹಾಸಿಕ ಪ್ರಕ್ರಿಯೆಯಲ್ಲಿ ವೈಚಾರಿಕ ಹಾಗೂ ಸಾಂಸ್ಕೃತಿಕ ವಿಚಾರಗಳೂ ಅಷ್ಟೇ ಪ್ರಭಾವಿಯಾಗಿ ಕೆಲಸ ಮಾಡುತ್ತವೆ. ಈ ದೃಷ್ಟಿಯಿಂದ ರಾಯ್ ಅವರು 'Reason' Romanticism and Revoluation' ಎಂಬ ಮಹಾಗ್ರಂಥದಲ್ಲಿ ಜಗತ್ತಿನ ವೈಚಾರಿಕ ಚರಿತ್ರೆಯನ್ನೇ ಪುನರ್ನಿರ್ಮಿಸುತ್ತಾರೆ. ವಿಚಾರಗಳು, ಕಲ್ಪನೆಗಳು ಜೀವನ ಪ್ರಕ್ರಿಯೆಯಲ್ಲಿಯೇ ಹುಟ್ಟಿದರೂ ಅವುಗಳಿಗೆ ಅವುಗಳದೇ ಸ್ವಾಯತ್ತತೆ ಇದೆ ಎಂದು ತೋರಿಸುತ್ತಾರೆ. ರಾಯ್ ಅವರ ದೃಷ್ಟಿಯಲ್ಲಿ ಇತಿಹಾಸ ಡಯಲೆಕ್ಟಿಕ್ಸ್ ರೀತಿಯಲ್ಲಿ ಮುಂದುವರೆಯುವುದಿಲ್ಲ. ಆದರೆ ಸಾಮಾಜಿಕ ಹಾಗೂ ವೈಚಾರಿಕ ಶಕ್ತಿಗಳು ಒಂದನ್ನೊಂದು ಪ್ರಭಾವಿಸುತ್ತ ಉತ್ಕ್ರಾಂತಿಯ ರೂಪದಲ್ಲಿ ಚರಿತ್ರೆ ವಿಕಸಿತಗೊಳ್ಳುತ್ತದೆ, ಮುಂದುವರಿಯುತ್ತದೆ,

ಸಾಮಾಜಿಕ ಕ್ರಾಂತಿ ಹೇಗಾಗುತ್ತದೆ ಎನ್ನಲಿಕ್ಕೆ ರಾಯ್ ಒಂದು ವೈಜ್ಞಾನಿಕ ರೂಪಕ ಕೊಡುತ್ತಾರೆ: ನೀರಿನ ಬಿಸಿ ಏರಿದಂತೆ ಅದು ಉಕ್ಕೇರಿ ನೀರಿನ ಪರಿಮಾಣವೇ ಬದಲಾದಂತೆ, ಒಂದು ಸಮಾಜ ರಚನೆಯಲ್ಲಿಯ ಕೆಲವು ಶಕ್ತಿಗಳು ಕುದಿಯಲಿಕ್ಕೆ ಪ್ರಾರಂಭಿಸಿದರೆ ಸಾಮಾಜಿಕ ಪರಿವರ್ತನೆಯಾಗುತ್ತದೆ. ಅಂದರೆ ಸಮಾಜಕ್ಕೆ ತನ್ನ ಇಡಿಯ ಹಿತಾಸಕ್ತಿಗಳಲ್ಲಿ ಆಮೂಲಾಗ್ರ ಪರಿವರ್ತನೆಯ ಆವಶ್ಯಕತೆಯುಂಟಾದಾಗ ಕ್ರಾಂತಿ ಉಂಟಾಗುತ್ತದೆ. ಆದರೆ ಈ ಅವಶ್ಯಕತೆಯ ಬಗ್ಗೆ ಮೊದಲಿಗೆ ಪ್ರಜ್ಞೆ ಮೂಡಿ, ಕೆಲಸ ಮಾಡುವದು ಕೆಲವೇ ವ್ಯಕ್ತಿಗಳಲ್ಲಿ. ಮುಂದೆ ಆ ಪ್ರಜ್ಞೆಯು ವಿಕಾಸಗೊಂಡು ಒಂದು ಹಂತ ಮುಟ್ಟಿದಾಗ ಸಾಮಾಜಿಕ ಪರಿವರ್ತನೆಯುಂಟಾಗುತ್ತದೆ.

ರಾಯ್ ಅವರ 'ಸಂಘಟಿತ ಪ್ರಜಾತಂತ್ರ' (Organised democracy) ಮೇಲೆ ಹೇಳಿದ ವೈಚಾರಿಕ ಪ್ರಣಾಲಿಯ ಮೇಲೇ ನಿಂತಿದೆ. ಹಾಗೂ ಈ 'ಸಂಘಟಿತ ಪ್ರಜಾತಂತ್ರ'ದ ವಿವರಗಳನ್ನೂ ತತ್ವಗಳನ್ನೂ 'ನವಮಾನವತಾವಾದ' ಅಥವಾ 'ಮೂಲಗಾಮೀ ಪ್ರಜಾತಂತ್ರ'ದ ಇಪ್ಪತ್ತೆರಡು ಅಂಶಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ೨೨ ಅಂಶಗಳ ನವಮಾನವತಾವಾದಕ್ಕೆ ಒಂದು ಪ್ರತ್ಯೇಕ ಅಧ್ಯಾಯ ಮೀಸಲಿಟ್ಟು, ರಾಯ್ ಅವರ ಮುಂದಿನ ಆರು ವರ್ಷಗಳ ಜೀವನದ ಬಗ್ಗೆ ನಾಲ್ಕು ಮಾತು ಬರೆಯಬೇಕು.

* * *

ಮುಂದೆ ನಾಲ್ಕು ವರ್ಷ ಅಂದರೆ ೧೯೪೮ ರಿಂದ ೧೯೫೨ರ ತನಕ ಭಾರತದ ಬುದ್ಧಿವಾದಿಗಳಿಗೆ ಎಲ್ಲಿ ಹೋದಲ್ಲಿ ಕರೆ ಇತ್ತರು : "ರಾಷ್ಟ್ರವಾದೀ ತತ್ವಪ್ರಣಾಲಿ ಪ್ರತಿಗಾಮಿಯಾಗಿದೆ.... ಹಳೆಯ ರೀತಿ-ನೀತಿ ಹಾಗೂ ವಿಚಾರ ಪದ್ಧತಿಯನ್ನು ತ್ಯಜಿಸಬೇಕು. ಆಧ್ಯಾತ್ಮಿಕತೆಯ ಡಾಂಭಿಕತನವನ್ನು ತೊರೆಯಬೇಕು. ತರ್ಕಶುದ್ಧತೆ ಹಾಗೂ ವಿಜ್ಞಾನ

ನಿಷ್ಠೆಗಳ ನಿಕಷದ ಮೇಲೆ ಎಲ್ಲ ತತ್ವಗಳನ್ನು ಪರೀಕ್ಷಿಸಿ ಶುದ್ಧ, ಸತ್ಯವೆಂದೆನಿಸಿದ ತತ್ವಗಳನ್ನಷ್ಟೇ ಸ್ವೀಕರಿಸಬೇಕು. ಒಟ್ಟಿನ ಮೇಲೆ ಮಧ್ಯಯುಗದ ವಾತಾವರಣವನ್ನು ಬದಲಿಸಿ ಬುದ್ಧಿವಾದದ ವಾತಾವರಣವನ್ನು ನಿರ್ಮಿಸಬೇಕು. ಅಜ್ಞಾನ, ದೈನ್ಯ, ಅಂಧಶ್ರದ್ಧೆ, ಭೋಳೇತನ ಇತ್ಯಾದಿ ಪ್ರವೃತ್ತಿಗಳನ್ನು ತೊಡೆದುಹಾಕಬೇಕು. ರಾಷ್ಟ್ರೀಯ ಜೀವನದಲ್ಲಿ ಸ್ವತಂತ್ರವಾಗಿ ಉಸಿರಾಡಿಸಲು ಬರುವಂತಾಗಬೇಕು-ಧೈರ್ಯದಿಂದ, ಜೀವನನಿಷ್ಠೆಯಿಂದ, ನಿಜವಾದ ದೇಶಾಭಿಮಾನದಿಂದ, ಪ್ರಗತಿಯ ಪಥದಲ್ಲಿ ಮುನ್ನಡದರೇನೇ ಒಳ್ಳೆಯ ಭವಿಷ್ಯತ್ತಿನ ಸಾಧ್ಯತೆಯಿದೆ. ಜ್ಞಾನದ ಮಶಾಲು ಹಿಡಿದು ಜನತೆಗೆ ಮಾರ್ಗದರ್ಶನ ಮಾಡಿದರೇನೇ ಭವಿಷ್ಯತ್ತು ಆಶಾದಾಯಕವಾಗಬಹುದಾಗಿದೆ...." ಎಂದು ರಾಯ್ ತಮ್ಮ ಅನುಯಾಯಿಗಳನ್ನೂ ಬುದ್ಧಿವಂತರನ್ನೂ ಹುರಿದುಂಬಿಸುತ್ತಿದ್ದರು. 'ನವಮಾನವತಾವಾದದ' ಸಂದೇಶ ಬೀರುತ್ತಿದ್ದರು.

೧೯೫೨ರ ಜೂನ್ ೧೯ಕ್ಕೆ ಮಸೂರಿಯಲ್ಲಿ ಕಾಲು ಜಾರಿ, ತೋಲು ಹೋಗಿ, ರಾಯ್ ಐವತ್ತು ಫೂಟು ಕೆಳಗೆ ಉರುಳಿ ಬಿದ್ದರು. ಬಹಳ ದಿನಗಳವರೆಗೆ ಬೇಶುದ್ಧ ಅವಸ್ಥೆಯಲ್ಲಿದ್ದು ಕೊನೆಗೆ ಪ್ರಜ್ಞೆ ತಿಳಿದೆದ್ದರು. ಅವರ ಮೈತುಂಬ ಬ್ಯಾಂಡೇಜುಗಳಿದ್ದವು. ಆಗ ಅವರ ಸ್ನೇಹಿತರೊಬ್ಬರು, "ರಾಯರೇ ಜೀವನ್ಮರಣದ ಹೋರಾಟ ನಡೆದಿದೆ. ಈಗಲಾದರೂ ಪರಮೇಶ್ವರ ನೆನಪಾಗುತ್ತಿದೆಯೋ ?" ಎಂದು ಕೇಳಿದರಂತೆ. ರಾಯ್ ಹೇಳಿದರಂತೆ, "ಇಡಿಯ ಜೀವನದಲ್ಲೇ ದೇವರ ಬಗ್ಗೆ ಚಿಂತನೆ ಮಾಡಿಲ್ಲ. ಈಗಲೂ ಅದರ ಅವಶ್ಯಕತೆಯಿಲ್ಲ." ಹೀಗೇ ಸುಮಾರು ಒಂದೂವರೆ ವರ್ಷ ಹಾಸಿಗೆಯಲ್ಲಿಯೇ ಮಲಗಿ ಸ್ನೇಹಿತರೊಡನೆ ಪತ್ನಿ ಎಲೆನ್ ಳೊಡನೆ ಮಾತುಕತೆಯಾಡುತ್ತಿದ್ದರು. ರಾಯ್ ಅವರ ಕೊನೆಯ ಕಾಯಿಲೆಗಳಿಂದ ಡೆಹರಾಡೂನಿನಲ್ಲಿ ಮಲಗಿದಾಗ, ಜವಹರಲಾಲ ನೆಹರೂ ಅವರು ರಾಯ್ ಅವರನ್ನು ಭೆಟ್ಟಿಯಾಗಲು ಹೋಗಿದ್ದರು. ರಾಯ್ ಅವರಿಗೆ ನೆಹರೂ ಅವರ ಕೈಯಲ್ಲಿ ಸತ್ತೆಯಿದ್ದ ಬಗ್ಗೆ ಸಮಾಜವಾದ

ದತ್ತ ಭಾರತ ಹೆಜ್ಜೆ ಇಡುತ್ತಿದ್ದ ಬಗ್ಗೆ ಅತ್ಯಂತ ಅಭಿಮಾನವಿತ್ತು. ಅವರಿಬ್ಬರ ವೈಯಕ್ತಿಕ ಸಂಬಂಧ ಯಾವಾಗಲೂ ಚೆನ್ನಾಗಿಯೇ ಇದ್ದವು. ಇಬ್ಬರಿಗೂ ಒಬ್ಬನ್ನೊಬ್ಬರು ನೋಡಿ ಕಂಠ ತುಂಬಿ ಬಂದವು. ರಾಯ್ ಅವರ ಕೈಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ನೆಹರೂ ಉದ್ವೇಗದಿಂದ ಹೇಳಿದರು, "ರಾಯ್, ನೀವು ಬೇಗ ಗುಣವಾಗಬೇಕು. ನನಗೆ ನಿಮ್ಮ ದೊಡ್ಡ ಸಹಕಾರ ಬೇಕಾಗಿದೆ. ನೀವೂ ನಾನೂ ಕೂಡಿ ಭಾರತದ ಮುಂದಿರುವ ಅನೇಕ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡೋಣ. ಮತ್ತು ಭಾರತದ ಭವಿತವ್ಯಕ್ಕೆ ಒಂದು ತಿರುವು ಕೊಡೋಣ."

ರಾಯ್ ಅವರ ಪ್ರಕೃತಿ ಆಗಲೇ ಇಳಿಮುಖವಾಗಿತ್ತು, ಕೊನೆಗೆ ೧೯೫೪ರ ಜನವರಿ ೨೫ ರಂದು ಮಧ್ಯರಾತ್ರಿಯ ಸುಮಾರಿಗೆ ರಾಯ್ ಅವರ ಚೈತನ್ಯಮಯ ಜೀವನದ ಅಂತ್ಯವಾಯಿತು.

ಅಧ್ಯಾಯ ೮

ನವ ಮಾನವತಾವಾದದ ಇಪ್ಪತ್ತೆರಡು ಸೂತ್ರಗಳು

೧

ಮಾನವನು ಸಮಾಜಸಂಸ್ಥೆಯ ಮೂಲ ಆರ್ಕಟೈಪ್ ('ಅಸಲು ಪ್ರತಿ'). ಸಾಮಾಜಿಕ ಸಹಕಾರದ ಸಂಬಂಧಗಳು ವ್ಯಕ್ತಿಯ ಶಕ್ತಿಗಳನ್ನು ವಿಕಾಸಗೊಳಿಸುತ್ತವೆ. ಆದರೆ ವ್ಯಕ್ತಿಯ ವಿಕಾಸವೇ ಸಾಮಾಜಿಕ ಪ್ರಗತಿಯ ನಿಜವಾದ ಅಳತೆಗೋಲು. ವ್ಯಕ್ತಿಗಳಿಲ್ಲದೆ ಸಮಾಜ ಅಸ್ತಿತ್ವದಲ್ಲಿ ಬರಲು ಸಾಧ್ಯವಿಲ್ಲ. ಸಾಮಾಜಿಕ ಸ್ವಾತಂತ್ರ್ಯ ಹಾಗೂ ಪ್ರಗತಿಗಳನ್ನು ಸಾಧಿಸಬೇಕಾದರೆ, ಸ್ವಾತಂತ್ರ್ಯ ಹಾಗೂ ಸ್ವಾಸ್ಥ್ಯದ ಪ್ರತ್ಯಕ್ಷ ಅನುಭವವು ವ್ಯಕ್ತಿಗಳಿಗೆ ದೊರೆಯದೇ ಇದ್ದರೆ, ಅಂಥ ಸಾಮಾಜಿಕ ಸ್ವಾತಂತ್ರ್ಯ ಹಾಗೂ ಪ್ರಗತಿಗಳು ಕಲ್ಪನೆಯ ಆಭಾಸಗಳಾಗುತ್ತವೆ. ಸ್ವಾಸ್ಥ್ಯವು ನಿಜವಾಗಿದ್ದ ಪಕ್ಷದಲ್ಲಿ ಅದನ್ನು ವ್ಯಕ್ತಿಗಳು ಸ್ವತಃ ಅನುಭವಿಸಬೇಕು. ಮಾನವ–ಸಮುದಾಯದ (ರಾಷ್ಟ್ರ, ವರ್ಗ ದಂಥ) ಯಾವದೇ ಸಂಘಟನೆಗೆ ಸಾಮೂಹಿಕ 'ಆತ್ಮ'ವಿದೆ ಎಂದು ಹೇಳಿದರೆ ಅದು ತಪ್ಪು. ಸಾಮೂಹಿಕ 'ಆತ್ಮ'ದ ತತ್ವ ಒಪ್ಪಿದರೆ ವ್ಯಕ್ತಿಯ ಬಲಿದಾನದ ತತ್ವ ಒಪ್ಪಿದಂತೆ. ವ್ಯಕ್ತಿಯ ಹಿತದ ಮುಖಾಂತರವೇ ಸಾಮೂಹಿಕ ಹಿತ ರೂಪುಗೊಳ್ಳುತ್ತದೆ.

೨

ಸ್ವಾತಂತ್ರ್ಯದ ಅನ್ವೇಷಣೆ ಹಾಗೂ ಸತ್ಯದ ಶೋಧನೆ–ಇವೆರಡೂ ಮಾನವ–ಪ್ರಗತಿಯ ಮೂಲ ಪ್ರೇರಣೆಗಳನ್ನು ರೂಪಿಸಿವೆ. ಸ್ವಾತಂತ್ರ್ಯದ ಅನ್ವೇಷಣೆ ಎಂದರೇನು ? ಮನುಷ್ಯರು ಬುದ್ಧಿ ಹಾಗೂ ಭಾವನೆಗಳ ಉಚ್ಚತರ ಪಾತಳಿಯ ಮೇಲೆ ಜೀವಿಸಬೇಕೆಂದು ಹೋರಾಟ ನಡೆಸಿದ್ದಾರಲ್ಲವೇ ? ಅದೇ ಸ್ವಾತಂತ್ರ್ಯದ ಅನ್ವೇಷಣೆ. ಈ ಅನ್ವೇಷಣೆಯಿಂದ ಅನಿವಾರ್ಯವಾಗಿ ಉದ್ಭವಿಸುವ ಉಪಸಿದ್ಧಾಂತವೆಂದರೆ ಸತ್ಯದ ಶೋಧನೆ. ನಿಸರ್ಗದ ಬಗೆಗಿನ ಜ್ಞಾನ ಬೆಳೆದಂತೆ, ಮನುಷ್ಯ ನಿಸರ್ಗದ ಉಪದ್ರವದಿಂದ ಹಾಗೂ ಭೌತಿಕ ಮತ್ತು ಸಾಮಾಜಿಕ ಬಂಧನಗಳಿಂದ ಕ್ರಮಕ್ರಮವಾಗಿ ಮುಕ್ತನಾಗುತ್ತ ಹೋಗುತ್ತಾನೆ. ಜ್ಞಾನದ ತಿರುಳೆಂದರೆ ಸತ್ಯ.

೩

ಸಾತತ್ಯವಾಗಿ ಹೆಚ್ಚು ಹೆಚ್ಚಿನ ಪ್ರಮಾಣದ ಸ್ವಾತಂತ್ರ್ಯವನ್ನು ಪಡೆಯುವದೇ ವೈಯಕ್ತಿಕ ಅಥವಾ ಸಾಮೂಹಿಕ ರೀತಿಯಲ್ಲಿ ನಡೆದ ವಿಚಾರಪ್ರೇರಿತ ಮಾನವನ ಪ್ರಯತ್ನದ ಉದ್ದೇಶವಾಗಿರುತ್ತದೆ. ಸ್ವಾತಂತ್ರ್ಯವೆಂದರೆ ವ್ಯಕ್ತಿಯಲ್ಲಿ ಸ್ಥಾಯಿಯಾಗಿದ್ದ ಶಕ್ತಿಗಳ ವಿಕಾಸಕ್ಕೆ ತಡೆ ಹಾಕುವ ನಿರ್ಬಂಧಗಳನ್ನು ಕ್ರಮಕ್ರಮವಾಗಿ ತೊಡೆದುಹಾಕುವ ಪ್ರಕ್ರಿಯೆ. ಈ ಸ್ವಾತಂತ್ರ್ಯವನ್ನು ವ್ಯಕ್ತಿಯು ಸಂಪಾದಿಸುವದು ಸಾಮಾಜಿಕ ಸಂಘಟನೆಯೆಂಬ ಮಹಾಯಂತ್ರದ ಕೀಲಾಗಿ ಅಲ್ಲ, ಆದರೆ ಮನುಷ್ಯನೆಂದು. ಆದ್ದರಿಂದ ಸಮಾಜದಲ್ಲಿಯ ವ್ಯಕ್ತಿಯ ಸ್ಥಾನವೇ ಯಾವದೇ ಪ್ರಕಾರದ ಸಾಮಾಜಿಕ ಸಂಸ್ಥೆಯ ಅಥವಾ ಸಾಮೂಹಿಕ ಪ್ರಯತ್ನಗಳಲ್ಲಿಯ ಪ್ರಗತಿಪರತೆಯ ಹಾಗೂ ಅವು ಸಾಧಿಸುವ ಸ್ವಾತಂತ್ರ್ಯದ ಮೌಲ್ಯಗಳನ್ನು ಅಳೆಯುವ ಮಾನದಂಡವಾಗಿದೆ. ಸಮಾಜದ ಮುಖ್ಯ ಘಟಕವಾದ ವ್ಯಕ್ತಿಯ ಪ್ರತ್ಯಕ್ಷ ಹಿತದ

ಮೂಲಕವೇ ಯಾವುದೇ ಸಾಮೂಹಿಕ ಪ್ರಯತ್ನದ ಯಶಸ್ಸನ್ನು ಅಳೆಯಬೇಕು.

೬

ಮನುಷ್ಯ ಸ್ವಭಾವತಃ ವಿಚಾರಶೀಲನಾಗಿದ್ದಾನೆ. ಯಾಕೆಂದರೆ ಆತ ನಿಯಮಬದ್ಧವಾದ ನಿಸರ್ಗದ ಸೃಷ್ಟಿ ತಾನೇ. ಬುದ್ಧಿಯೆಂಬುದು ಜೀವಧರ್ಮವೇ ಆದದ್ದರಿಂದ ಮನುಷ್ಯನ ಬುದ್ಧಿಗೆ ಅವನ ಇಚ್ಛಾ ಶಕ್ತಿಯು ವಿರೋಧಿಯಾಗಿರುವುದಿಲ್ಲ. ಬುದ್ಧಿ ಹಾಗೂ ಭಾವನೆ—ಇವೆರಡರ ಉಗಮ ಜೀವಿಯ ಒಂದೇ ಸಮಾನ ಅವಸ್ಥೆಯಿಂದ ಆಗಿದೆಯೆಂದೇ ಜೀವಶಾಸ್ತ್ರ ಹೇಳುತ್ತದೆ. ಅದ್ದರಿಂದ ಐತಿಹಾಸಿಕ ನಿಯತಿವಾದ (historical determinism)ಕ್ಕೂ ಇಚ್ಛಾಸ್ವಾತಂತ್ರ್ಯ (Freedom of will)ದ ಸಿದ್ಧಾಂತಕ್ಕೂ ವಿರೋಧವಿಲ್ಲ; ಮೊದಲ ಸಿದ್ಧಾಂತದಲ್ಲಿ ಎರಡನೆಯ ಅಂದರೆ ಇಚ್ಛಾ ಸ್ವಾತಂತ್ರ್ಯದ ಸಿದ್ಧಾಂತವು ಅಂತರ್ಭೂತವಾಗಿದೆ. ಅಷ್ಟೇ ಅಲ್ಲದೆ, ಮನುಷ್ಯನ ಇಚ್ಛಾಶಕ್ತಿಯೆಂದರೆ ಇತಿಹಾಸದ ಒಂದು ಅತ್ಯಂತ ಪ್ರಭಾವಿ ಹಾಗೂ ನಿರ್ಣಾಯಕ ಭಾಗವಾಗಿದೆ. ಹಾಗಿಲ್ಲದಿದ್ದರೆ, ನಿಯಮಬದ್ಧವಾದ ಐತಿಹಾಸಿಕ ಪ್ರಕ್ರಿಯೆಯಲ್ಲಿ ಮಾನವನಿರ್ಮಿತ ಕ್ರಾಂತಿಗಳಿಗೆ ಸ್ಥಾನವೇ ಇರಲಾರದು. ಇತಿಹಾಸದ ಕ್ರಮವು ಪರಮೇಶ್ವರನಿಂದ ಪೂರ್ವನಿಶ್ಚಿತವಾಗಿರುತ್ತದೆ ಎಂಬ ಧಾರ್ಮಿಕ ನಿಯತಿವಾದ ಬೇರೆ ಹಾಗೂ ಬುದ್ಧಿವಾದೀ ವೈಜ್ಞಾನಿಕ ನಿಯತಿವಾದವೇ ಬೇರೆ.

೭

ಭೌತಿಕವಾದ (Materialism)ಕ್ಕೆ ತಪ್ಪು ಅರ್ಥ ಮಾಡಿದ್ದರಿಂದ ಇತಿಹಾಸವನ್ನು ಆರ್ಥಿಕ ದೃಷ್ಟಿಯಿಂದ ನೋಡಲಾಯಿತು. ಭೌತಿಕವಾದವು ಅದ್ವೈತದ (monistic) ತತ್ವಜ್ಞಾನ. ಅದರ

(ಮಾರ್ಕ್ಸ್‌ನ) ಆರ್ಥಿಕ ದೃಷ್ಟಿ ಪ್ರವೃತ್ತಿಕ್ಕೆ ಎಡೆಗೊಡುತ್ತದೆ. (ಅಂದರೆ ಆರ್ಥಿಕ ಮನಸ್ಸಿನ ಉತ್ಪತ್ತಿ ಬೇರೆ ಎಂದು ಹೇಳಿದಂತಾಗುತ್ತದೆ. ರಾಯರ್ ಹೇಳಿದ್ದು : ಬುದ್ಧಿ ಅಥವಾ ಮನಸ್ಸು ಕೂಡ ಭೌತಿಕವಿದ್ದು ಅವೂ ಕೂಡ ಭೌತಿಕ ಶಕ್ತಿಗಳಾಗಿವೆ.)

ಇತಿಹಾಸದ ಕ್ರಮವು ಕಾರ್ಯ-ಕಾರಣಗಳ ನಿಯಮಗಳಿಂದ ಬದ್ಧವಾಗಿದೆ. ಆದರೆ ಅದು ಅನೇಕ ಕಾರಣಗಳಿಂದ ರೂಪಿತವಾಗುತ್ತದೆ. ಈ ಕಾರಣಗಳಲ್ಲಿ ಒಂದು ಅತ್ಯಂತ ಮಹತ್ವದ ಕಾರಣವೆಂದರೆ ಮನುಷ್ಯನ ಇಚ್ಛಾಶಕ್ತಿಯನ್ನು ಬರೇ ಆರ್ಥಿಕ ಉದ್ದಿಷ್ಟಕ್ಕೇ ಗಂಟು ಹಾಕಲು ಬರುವದಿಲ್ಲ.

೬

ವೈಚಾರಿಕ ನಿರ್ಮಿತಿ (ideation)ಯು ದೇಹದ (Physio-logical) ಕ್ರಿಯೆಯಾಗಿದೆ. ವೈಚಾರಿಕ ನಿರ್ಮಿತಿಯು ಪರಿಸ್ಥಿತಿಯ ಅರಿವಿನಿಂದ ಉಂಟಾಗುತ್ತದೆ. ಆದರೆ ಒಂದು ಸಲ ವಿಚಾರ ಅಥವಾ ಕಲ್ಪನೆಗಳು ಸೃಷ್ಟಿಯಾದವೋ ತೀರಿತು. ಅವು ಸ್ವತಂತ್ರ ಅಸ್ತಿತ್ವ ಪಡೆಯುತ್ತವೆ ಹಾಗೂ ಅವುಗಳ ವಿಕಸನೆಗೆ ಪ್ರತ್ಯೇಕವಾದ ನಿಯಮಬದ್ಧತೆ ಇರುತ್ತದೆ. ವಿಚಾರಗಳ ವಿಕಾಸಕ್ರಮವು ಸಾಮಾಜಿಕ ವಿಕಾಸಕ್ರಮದ ಜೊತೆಗೇ ನಡೆಯುತ್ತಿರುತ್ತದೆ ಹಾಗೂ ಅವೆರಡೂ ಒಂದರ ಮೇಲೊಂದು ಪರಸ್ಪರ ಪ್ರಭಾವ ಬೀರುತ್ತಿರುತ್ತವೆ. ಆದರೆ ಇತಿಹಾಸಿಕ ಪ್ರಕ್ರಿಯೆಗೂ ವೈಚಾರಿಕ ಪ್ರಕ್ರಿಯೆಗೂ ನೇರಕಾರ್ಯ–ಕಾರಣದ ಸಂಬಂಧವನ್ನು ಕಲ್ಪಿಸಲಾಗದು. (ಇಲ್ಲಿ 'ವಿಚಾರ', 'ಕಲ್ಪನೆ' ಎಂದರೆ ತಾತ್ವಿಕವಾದ ವಿಚಾರ ಸರಣಿಯೆಂದು ಅರ್ಥೈಸಲಾಗಿದೆ.) ಮಾನವನ ಸಮಗ್ರ ವಿಕಾಸಕ್ರಮದ ಒಂದು ವಿಶಿಷ್ಟ ಬಿಂದುವಿನಲ್ಲಿ ಸಮನಿಸುವ ಒಂದು ಇತಿಹಾಸಿಕ ಘಟನೆಗೆ ಇಂಥ ಕಾರ್ಯ-ಕಾರಣ ಸಂಬಂಧ ನೇರವಾಗಿ ಹಚ್ಚಲು ಬರುವದಿಲ್ಲ. (ಮಾರ್ಕ್ಸ್ ಹೇಳುವಂತೆ) ಸಾಂಸ್ಕೃತಿಕ ಆಕೃತಿಗಳೂ ನೈತಿಕ ಮೌಲ್ಯ

ಗಳೂ ಆರ್ಥಿಕ ವ್ಯವಸ್ಥೆಯ ಅಸ್ತಿಭಾರದ ಮೇಲೇ ನಿಲ್ಲಿಸಲ್ಪಟ್ಟಿವೆ ಎಂಬ ಸಿದ್ಧಾಂತದಲ್ಲಿ ಸತ್ಯವಿಲ್ಲ. ಸಂಸ್ಕೃತಿ ಹಾಗೂ ನೀತಿಮೌಲ್ಯಗಳಿಗೇ ವಿಶಿಷ್ಟ ಐತಿಹಾಸಿಕ ನಿಯಮಗಳಿವೆ ಹಾಗೂ ಅವುಗಳ ಇತಿಹಾಸವು ವೈಚಾರಿಕ ಇತಿಹಾಸದ ತರ್ಕಶಾಸ್ತ್ರಕ್ಕೆ ಬದ್ಧವಾಗಿರುತ್ತದೆ.

೭

ಸ್ವಾತಂತ್ರ್ಯ ಹೊಸ ಜಗತ್ತನ್ನು ನಿರ್ಮಿಸಲು ಕ್ರಾಂತಿಯ ಪ್ರಕ್ರಿಯೆ ಸಮಾಜದ ಆರ್ಥಿಕ ಪುನರ್ರಚನೆಯ ಆಚೆಗೆ ಹೋಗಬೇಕಾಗುತ್ತದೆ. ದಲಿತ ಹಾಗೂ ಶೋಷಿತ ವರ್ಗದ ಹೆಸರಿನಲ್ಲಿ ರಾಜಕೀಯ ಸತ್ತೆಯನ್ನು ಪಡೆದುಕೊಂಡು ಉತ್ಪಾದನೆಯ ಸಾಧನೆಗಳ ಖಾಸಗಿ ಒಡೆತನವನ್ನು ನಾಶ ಮಾಡಿದರೆ ಸ್ವಾತಂತ್ರ್ಯದ ಆಗಮನ ತನ್ನಿಂದ ತಾನೇ ಆಗುತ್ತದೆ ಯೆಂದಲ್ಲ.

೮

ಸ್ವಾತಂತ್ರ್ಯದ ಸಿದ್ಧಿಗಾಗಿ ಕಮ್ಯೂನಿಜಮ್ ಅಥವಾ ಸಮಾಜವಾದ ಸಾಧನವಾಗಬಹುದು ಎಂದು ಕಲ್ಪಿಸಬಹುದಾಗಿದೆ. ಆದರೆ ಆ ಉದ್ದೇಶದ ಸಾಧನೆಗೆ ಈ ಪ್ರಣಾಲಿಗಳು ಎಷ್ಟು ಸಹಾಯ ಮಾಡುತ್ತವೆ ಎಂಬುದಕ್ಕೆ ಅನುಭವದಿಂದಲೇ ನಿರ್ಣಯಿಸಬೇಕು. ರಾಷ್ಟ್ರ ಅಥವಾ ವರ್ಗವೆಂಬ ಒಂದು ಸಾಮುದಾಯಿಕ ಸ್ವರೂಪದ 'ಅಹಂಕಾರಕ್ಕೆ' ರಕ್ತ-ಮಾಂಸಗಳಿಂದ ಕೂಡಿದ ವ್ಯಕ್ತಿಯನ್ನು ಅಧೀನಮಾಡುವ ರಾಜಕೀಯ ಪದ್ಧತಿ ಅಥವಾ ಆರ್ಥಿಕ ಪ್ರಯೋಗಗಳು ಸ್ವಾತಂತ್ರ್ಯದ ಸಾಧನೆಗೆ ಯೋಗ್ಯ ಸಾಧನೆಗಳೆಂದು ಸಿದ್ಧವಾಗುವದಿಲ್ಲ. ವ್ಯಕ್ತಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿ, ಸ್ವಾತಂತ್ರ್ಯವನ್ನು ಒದಗಿಸುತ್ತೇವೆ ಎಂದು ಹೇಳುವದು ಅಸಮಂಜಸವಾದುದು. ರಾಷ್ಟ್ರದ ಅಥವಾ ವರ್ಗದ ಕಾಲ್ಪನಿಕ ಸಾಮಾಜಿಕ 'ಅಹಂಕಾರ'ಕ್ಕೆ ವ್ಯಕ್ತಿಯನ್ನು ಬಲಿಕೊಡುವುದು ಸ್ವಾತಂತ್ರ್ಯ

ವಾಗಲಾರದು! ಯಾವ ಸಾಮಾಜಿಕ ತತ್ವಜ್ಞಾನವಾಗಲಿ ಅಥವಾ ನವ ಸಮಾಜ ನಿರ್ಮಾಣದ ಪ್ರಯತ್ನವಾಗಲಿ ವ್ಯಕ್ತಿಯ ಸಾರ್ವಭೌಮತ್ವವನ್ನು ಅಂಗೀಕರಿಸುವದಿಲ್ಲವೋ ಹಾಗೂ ಸ್ವಾತಂತ್ರ್ಯದ ಆದರ್ಶವನ್ನೇ ಒಂದು ಒಣ ತಾತ್ವಿಕ ಕಲ್ಪನೆಯೆಂದು ಬದಿಗೆ ಸರಿಸುತ್ತದೆಯೋ, ಅಂಥ ವಿಚಾರಪ್ರಣಾಲಿಯಲ್ಲಿ ಪ್ರಗತಿಯ ಅಥವಾ ಕ್ರಾಂತಿಯ ಶಕ್ತಿ ಅತ್ಯಲ್ಪ ಪ್ರಮಾಣದಲ್ಲಿರುವದು-ಇದಕ್ಕಿಂತ ಹೆಚ್ಚಿನ ಕಿಮ್ಮತ್ತು ಆ ವಿಚಾರಪ್ರಣಾಲಿಗಳಿಗೆ ಇರುವದಿಲ್ಲ.

೯

ರಾಜ್ಯಸಂಸ್ಥೆಯೆಂದರೆ ಸಮಾಜದ ರಾಜಕೀಯ ಸಂಘಟನೆ. ಕಮ್ಯುನಿಜಮ್ಮದಲ್ಲಿ ಈ ರಾಜ್ಯಸಂಸ್ಥೆ ಕ್ರಮಕ್ರಮವಾಗಿ ತನ್ನಿಂದ ತಾನೇ ಉದುರಿ ಹೋಗುತ್ತದೆಯೆಂಬುದು ಒಂದು ಮಿಥ್ಯಾಸ್ವಪ್ನವೆಂದು ಅನುಭವದಿಂದ ಸಿದ್ಧವಾಗಿದೆ. ಸಾಮಾಜಿಕ ಒಡೆತನವಿದ್ದ ಉದ್ಯೋಗ ದಂಧೆಗಳ ಮೇಲೆ ಅಧಿಷ್ಠಿತವಾದ ಯೋಜನಾಬದ್ಧ ಆರ್ಥಿಕ ವ್ಯವಸ್ಥೆಗೆ ಬಲಶಾಲಿಯಾದ ರಾಜಕೀಯ ಯಂತ್ರಣದ ಅವಶ್ಯಕತೆಯಿರುತ್ತದೆ. ಆದರೆ ಈ ರಾಜಕೀಯ ಯಂತ್ರಣದ ಮೇಲೆ ಪ್ರಜಾಸತ್ತಾತ್ಮಕ ನಿಯಂತ್ರಣವಿದ್ದರೆ ಮಾತ್ರ ಆ ಹೊಸ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯದ ಭರವಸೆ ಇರಬಹುದಾಗಿದೆ. ರಾಜಕೀಯ ಪ್ರಜಾಪ್ರಭುತ್ವ ಹಾಗೂ ವೈಯಕ್ತಿಕ ಸ್ವಾತಂತ್ರ್ಯ ಇವುಗಳ ಆಧಾರದ ಮೇಲೆ ಅರ್ಥ ನಿಯೋಜನೆಯಾದರೇನೇ ಜನತೆಯ ಅವಶ್ಯಕತೆಗಳನ್ನು ಪೂರೈಸುವದಕ್ಕಾಗಿಯೇ ಉತ್ಪಾದನೆಯಾಗಬೇಕು ಎಂಬ ಉದ್ದೇಶವನ್ನು ಸಾಧಿಸುವದು ಶಕ್ಯವಿದೆ.

೧೦

ಕೆಲವು ಉದ್ಯೋಗಗಳ ರಾಷ್ಟ್ರೀಕರಣ ಹಾಗೂ ಆರ್ಥಿಕ ನಿಯೋಜನೆ ಇವುಗಳ ಮೂಲಕ ಕಾರ್ಮಿಕರ ಶೋಷಣೆ ತನ್ನಿಂದತಾನೇ ನಿಲ್ಲುವದು

ಅಥವಾ ಸಂಪತ್ತಿಯ ಸಮನಾದ ಹಂಚಿಕೆ ಖಾತ್ರಿಯಿಂದ ಆಗುವದು ಎಂದು ಹೇಳಲಾಗದು. ಆರ್ಥಿಕ ಪ್ರಜಾಸತ್ತೆ ಬರದೆ ಇದ್ದರೆ ಯಾವ ರೀತಿ ರಾಜಕೀಯ ಪ್ರಜಾಸತ್ತೆ ಪ್ರಸ್ಥಾಪಿತವಾಗುದಿಲ್ಲವೋ ಅದೇ ರೀತಿ ರಾಜಕೀಯ ಪ್ರಜಾಪ್ರಭುತ್ವ ಬರದ ಹೊರತು ಆರ್ಥಿಕ ಪ್ರಜಾಪ್ರಭುತ್ವವೂ ಪ್ರಸ್ಥಾಪಿತವಾಗಲಾರದು.

೧೧

ಒಮ್ಮೆ ಸರ್ವಾಧಿಕಾರೀ ಸತ್ತೆ ಪ್ರಸ್ಥಾಪಿತವಾದರೆ ಅದು ಖಾಯಮಾಗಿ ಉಳಿಯಲಿಕ್ಕೆ ಪ್ರಯತ್ನ ಮಾಡೇ ತೀರುತ್ತದೆ. ರಾಜಕೀಯ ಸರ್ವಾಧಿಕಾರದ ಆಳಿಕೆಯಲ್ಲಿ ಸಾಮುದಾಯಿಕ ಕೆಲಸ ಹಾಗೂ ಸಾಮಾಜಿಕ ಪ್ರಗತಿಗಳ ನೆವದಲ್ಲಿ ನಡೆಯುವ ಆರ್ಥಿಕ ನಿಯೋಜನೆಯಲ್ಲಿ ವ್ಯಕ್ತಿಸ್ವಾತಂತ್ರ್ಯವು ದುರ್ಲಕ್ಷಿಸಲಾಗುತ್ತದೆ. ಅದರ ಪರಿಣಾಮವೆಂದರೆ, ಸಮಾಜವಾದೀ ಸಮಾಜದಲ್ಲಿ ಉಚ್ಚತರದ ಪ್ರಜಾಸತ್ತೆ ಪ್ರಸ್ಥಾಪಿತವಾಗುವ ಶಕ್ಯತೆ ಇಲ್ಲವಾಗುತ್ತದೆ. ಸರ್ವಾಧಿಕಾರೀ ಪ್ರಭುತ್ವವು ತಾನು ಘೋಷಿಸಿದ ಧ್ಯೇಯಗಳಿಗೆ ಕಪ್ಪುಹುಸಿ ಬೀಳುತ್ತದೆ.

೧೨

ಪಾರ್ಲಿಮೆಂಟರಿ ಡೆಮೊಕ್ರಸಿ (ಸಂಸದೀಯ ಪ್ರಜಾಪ್ರಭುತ್ವ) ಯಲ್ಲಿಯ ದೋಷಗಳು ಹೊರಬಂದದ್ದು ನಮ್ಮ ಅನುಭವಕ್ಕೆ ಬಂದ ಹಾಗಿದೆ. ಅಧಿಕಾರವನ್ನು ಪ್ರತಿನಿಧಿಗಳ ಕೈಯಲ್ಲಿ ಒಪ್ಪಿಸುವದರಿಂದ ಈ ದೋಷಗಳು ಉದ್ಭವಿಸುತ್ತವೆ. ಪ್ರಜಾಪ್ರಭುತ್ವವು ನಿಜವಾಗಿಯೂ ಪ್ರಭಾವಿ ಹಾಗೂ ಯಶಸ್ವಿಯಾಗಬೇಕಾದರೆ, ಅಧಿಕಾರವು ಯಾವಾಗಲೂ ಜನರ ಕೈಯಲ್ಲಿಯೇ ಇರಬೇಕಾಗುತ್ತದೆ. ಹಾಗೂ ಈ ಸಾರ್ವಭೌಮ ಅಧಿಕಾರವನ್ನು ಜನತೆ, ನಾಮಮಾತ್ರವೇ ಅಲ್ಲ, ಸಾತತ್ಯದಿಂದ ದೈನಂದಿನವಾಗಿ ಪ್ರಭಾವಿಯಾಗಿ ಉಪಯೋಗಿಸಲು

ಸಾಧ್ಯವಾಗಬೇಕು. ಆದಕ್ಕಾಗಿ ಉಪಾಯ ಯೋಜನೆ ಆಗಲೇ ಬೇಕು. ಕಣಕಣಗಳಂತೆ ಒಬ್ಬರಿಂದೊಬ್ಬರು ದೂರವಿರುವ ನಾಗರಿಕರು ಯಾವಾಗಲೂ ಪ್ರತ್ಯಕ್ಷದಲ್ಲಿ ಅಸಮರ್ಥರಾಗಿಯೇ ಉಳಿಯುತ್ತಾರೆ. ತಮ್ಮ ಸಾರ್ವಭೌಮತ್ವವನ್ನು ಅವುಲಿನಲ್ಲಿ ತರಲು ಹಾಗೂ ರಾಜಯಂತ್ರದ ಮೇಲೆ ಸತತವಾಗಿ ನಿಯಂತ್ರಣವಿಡಲು ಅಪರ ಹತ್ತಿರ ಯಾವದೇ ಸಾಧನವಿರುವದಿಲ್ಲ.

೧೩

ಪಾರ್ಲಿಮೆಂಟರಿ ಡೆಮೊಕ್ರಸಿಯಲ್ಲಿ ಉದಾರಮತವಾದದ ವಿಡಂಬನೆ ಯಾಗುತ್ತದೆ, ಯಾಕೆಂದರೆ ಅದು ನಕಲೀಯಾಗಿರುತ್ತದೆ. ಮನುಷ್ಯ ಮನುಷ್ಯನ ಶೋಷಣೆ ಮಾಡುತ್ತಿದ್ದಾನಲ್ಲವೇ—ಅದಕ್ಕೆ ಕಾನೂನಿನ ಮಂಜುರಾತಿ ಕೊಡಲಿಕ್ಕೆ ಉದಾರಮತವಾದವು ನಿರಂಕುಶ ಅರ್ಥ ನೀತಿಯ (Laissez faire) ತತ್ವದ ಮುಖಾಂತರ ಪ್ರಯತ್ನ ಮಾಡು ತ್ತಲೇ ಬಂದಿದೆ.

'ಅರ್ಥ' ಒಂದೇ ಮಾನವನ ಏಕಮೇವ ಪುರುಷಾರ್ಥವೆನ್ನುವ ಕಲ್ಪನೆ ವ್ಯಕ್ತಿವಾದದ ಸ್ವಾತಂತ್ರ್ಯ—ಸಿದ್ಧಾಂತವನ್ನು ಅಲ್ಲಗಳೆಯುತ್ತದೆ. ಅರ್ಥ ಪ್ರಧಾನವಾದ ಮನುಷ್ಯ ಗುಲಾಮನಿರುತ್ತಾನೆ ಅಥವಾ ಗುಲಾಮರ ಒಡೆಯನಾಗಿರುತ್ತಾನೆ. 'ಅರ್ಥ ಇದೊಂದೇ ಪುರುಷಾರ್ಥ'ವೆಂಬ ಗ್ರಾಮ್ಯಕಲ್ಪನೆಯನ್ನು ತೊಡೆದು ಹಾಕಿ, ಅದರ ಬದಲಾಗಿ 'ಮನುಷ್ಯ ಸ್ವಭಾವತ; ಬುದ್ಧಿಪ್ರಧಾನನಿದ್ದಾನೆ' ಎಂಬ ಕಲ್ಪನೆಯನ್ನು ರೂಢ ಗೊಳಿಸಬೇಕು.

ಮನುಷ್ಯ ವಿಚಾರವಂತನಿದ್ದುದರಿಂದಲೇ ನೀತಿವಂತನಾಗಿರುತ್ತಾನೆ. ನೀತಿಯೆಂದರೆ ವಿವೇಕ ಬುದ್ಧಿಗೆ (conscience) ಅವಾಹನೆ ಹಾಗೂ ವಿವೇಕ ಬುದ್ಧಿಯೆಂದರೆ ಪರಿಸ್ಥಿತಿಯ ಸ್ವಾಭಾವಿಕ ಪ್ರಜ್ಞೆ ಹಾಗೂ ಪರಿಸ್ಥಿತಿಗೆ ಅನುಸರಿಸಿ ಆಗುವ ಪ್ರತಿಕ್ರಿಯೆ.

ವಿವೇಕಬುದ್ಧಿಯೆಂದರೆ ಬುದ್ಧಿಯ ಪಾತಳಿಯ ಮೇಲೆ ನಡೆಯುವ ಜೀವಿಯ ಯಾಂತ್ರಿಕ ಕ್ರಿಯೆ. ಅದ್ದರಿಂದ ವಿವೇಕಬುದ್ಧಿ ಬುದ್ಧಿನಿಷ್ಠವಾಗಿದೆ.

೧೪

ಸರ್ವಾಧಿಕಾರಿತ್ವವು ಸಂಸದೀಯ ಪ್ರಜಾಪ್ರಭುತ್ವಕ್ಕೆ ಪರ್ಯಾಯವಲ್ಲ. ಅದಕ್ಕೆ ನಿಜವಾದ ಪರ್ಯಾಯವೆಂದರೆ 'ಸಂಘಟಿತ ಪ್ರಜಾಪ್ರಭುತ್ವ'. ಅಧಿಕಾರವಿಲ್ಲದ ಒಂಟಿ ವ್ಯಕ್ತಿಗಳ ಔಪಚಾರಿಕವಾದ ಸಂಸಧೀಯ ಪ್ರಜಾಪ್ರಭುತ್ವಕ್ಕೆ ಅದೊಂದೇ ಪರ್ಯಾಯ.

(ಸಂಘಟಿತ ಪ್ರಜಾಪ್ರಭುತ್ವವೆಂದರೇನು ?) ದೇಶವ್ಯಾಪಿಯಾಗಿ ಜನತಾ ಸಮಿತಿಗಳನ್ನು ಸ್ಥಾಪಿಸಿ ಅವುಗಳ ಆಸ್ತಿವಾರದ ಮೇಲೆ ಪಿರಮಿಡ್‌ದ ರೀತಿಯಲ್ಲಿ ಮೇಲೆ ಸಣ್ಣದಾಗುತ್ತ ಹೋಗಿ ಕೊನೆಗೆ ಶಿಖರಕ್ಕೆ ಸಂಸತ್ತು ಬರಬೇಕು. ಈ ರೀತಿಯ ಪ್ರಜಾಪ್ರಭುತ್ವದ ರಚನೆಯಿಂದಷ್ಟೇ ಸಮಾಜದ ರಾಜಕೀಯ ಸಂಘಟನೆಯು ಇಡಿಯ ಸಮಾಜದೊಡನೆ ಏಕರೂಪಕತೆಯನ್ನು ಹೊಂದುತ್ತದೆ. ಪರಿಣಾಮವಾಗಿ, ರಾಜ್ಯದ ಮೇಲೆ ಜನತಾಶಕ್ತಿಯ ನಿರಂತರ ನಿಯಂತ್ರಣವಿರುತ್ತದೆ.

೧೫

ಮಾನವನೇ ತನ್ನ ಶಿಲ್ಪದ ವಿಶ್ವಕಾರ–ಎಂಬ ಮೂಲಭೂತ ಐತಿಹಾಸಿಕ ಸತ್ಯಕ್ಕೆ ಒತ್ತು ಕೊಡುವದು ಕ್ರಾಂತಿಕಾರಿ ಹಾಗೂ ವಿಮೋಚಕ ಸಾಮಾಜಿಕ ತತ್ವಜ್ಞಾನದ ಮುಖ್ಯ ಕೆಲಸವಾಗಿದೆ.

ಮಾನವ ವಿಚಾರಶೀಲನಾದ ಪ್ರಾಣಿ. ಮಾನವನ ವ್ಯಕ್ತಿತ್ವ ಸಂಪನ್ನವಾದಾಗಲೇ ಈ ವಿಚಾರಶೀಲತೆಗೆ ಅಭಿವ್ಯಕ್ತಿ ಸಿಗುತ್ತದೆ. ಮನುಷ್ಯನ ಮಿದುಳೆಂದರೆ ಒಂದು ಉತ್ಪಾದನೆಯ ಸಾಧನವಿದ್ದು. ಅದು ಅತ್ಯಂತ ಕ್ರಾಂತಿಕಾರಕ ಸರಕುಗಳನ್ನು ಉತ್ಪಾದಿಸುತ್ತದೆ.

ಕ್ರಾಂತಿಯಾಗಬೇಕಾದರೆ ರೂಢ ಕಲ್ಪನೆಗಳನ್ನು ವಿಧ್ವಂಸ ಮಾಡುವ ವಿಚಾರಗಳ (iconoclastic ideas) ಪೂರ್ವ ತಯಾರಿಯಾಗಬೇಕಾಗುತ್ತದೆ. ಯಾರಿಗೆ ತಮ್ಮ ಸೃಜನಶೀಲ ಆತ್ಮಶಕ್ತಿಯ ಪ್ರತ್ಯಯು ಬಂದಿದೆಯೋ ಯಾರಿಗೆ ವಿಶ್ವದ ಪುನರ್ರಚನೆ ಮಾಡಬೇಕೆಂಬ ದುರ್ದಮ್ಯ ಇಚ್ಛಾಶಕ್ತಿಯಿಂದ ಪ್ರೇರಿತರಾಗಿದ್ದಾರೆಯೋ ಯಾರು ಸಾಹಸೀ ವಿಚಾರಧಾರೆಗಳ ಮೂಲಕ ಚಲನಶೀಲರಾಗಿದ್ದಾರೆಯೋ ಯಾರು ಸ್ವತಂತ್ರ ಮಾನವರಿಂದೊಡಗೂಡಿದ ಸ್ವತಂತ್ರ ಸಮಾಜವನ್ನು ನಿರ್ಮಾಣ ಮಾಡಬೇಕೆಂಬ ಧ್ಯೇಯದಿಂದ ಪ್ರೇರಿತರಾಗಿದ್ದಾರೆಯೋ ಅಂಥವರ ಸಂಖ್ಯೆ ಸತತವಾಗಿ ಬೆಳೆದಂತೆ, ಅಂಥವರೇ ನಿಜವಾದ ಜನತಂತ್ರವು ಸಾಧ್ಯವಾಗುವ ಪರಿಸ್ಥಿತಿಯನ್ನು ನಿರ್ಮಿಸಬಲ್ಲರು.

೧೬

ಸಾಮಾಜಿಕ ಪ್ರಗತಿಯ ಈ ಮೂಲಭೂತ ತತ್ವವನ್ನು ಪುನಃ ಗಟ್ಟಿಯಾಗಿ ಪ್ರತಿಪಾದಿಸಿ, ಅದರ ಬುನಾದಿಯ ಮೇಲೇ ಸಾಮಾಜಿಕ ಕ್ರಾಂತಿಯ ಪದ್ಧತಿ ಹಾಗೂ ಕಾರ್ಯಕ್ರಮಗಳ ರಚನೆಯಾಗಬೇಕು.

ವ್ಯಾಪಕವಾದ ದೃಢ ಪ್ರಯತ್ನದಿಂದ ಜನರಿಗೆ ಸ್ವಾತಂತ್ರ್ಯದ ತತ್ವಗಳ ಬಗ್ಗೆ ಬುದ್ಧಿವಾದೀ ಹಾಗೂ ಸಹಕಾರ ಪ್ರಧಾನವಾದ ಜೀವನ ನಡೆಸುವದರ ಬಗ್ಗೆ ಶಿಕ್ಷಣ ಕೊಡುವದೊಂದೇ ಸಾಮಾಜಿಕ ನವಜೀವನವನ್ನು ನಿರ್ಮಾಣಮಾಡುವ ಮಾರ್ಗವಾಗಿದೆ.

ಕ್ರಾಂತಿಯ ನಂತರದ ಸಾಮಾಜಿಕ ಹಾಗೂ ರಾಜಕೀಯ ಅಸ್ತಿವಾರ ಕಟ್ಟಲು ಜನರನ್ನು 'ಸಂಘಟಿತ ಪ್ರಜಾಪ್ರಭುತ್ವ'ದ ಘಟಕಗಳಲ್ಲಿ ಸಂಘಟಿಸಬೇಕಾಗುವದು. ನವ ಜೀವನದ ರಹಸ್ಯವನ್ನು ತಿಳಿದುಕೊಂಡಂಥ ಜನರ ಸಂಖ್ಯೆಯನ್ನು ತ್ವರಿತ ಗತಿಯಲ್ಲಿ ಬೆಳೆಸಬೇಕು ಹಾಗೂ ಅವುಗಳಲ್ಲಿ ಸಜೀವ ಏಕಸೂತ್ರತೆ ಬೆಳೆಸಬೇಕು ಅಂದರೇನೇ ಜನತಾ ಸಮಿತಿಗಳನ್ನು ಕೂಡಲೇ ರಚಿಸಬೇಕು ಸಾಮಾಜಿಕ ಕ್ರಾಂತಿ

ಸಾಧ್ಯವಾಗುವುದು, ಅದೇ ರೀತಿ. ಸ್ವಾತಂತ್ರ್ಯ, ಬುದ್ಧಿವಾದ ಹಾಗೂ ಸಾಮಾಜಿಕ ಸಾಮರಸ್ಯ ಈ ತತ್ವಗಳ ಮೇಲೆ ಕ್ರಾಂತಿಯ ಕಾರ್ಯಕ್ರಮವನ್ನು ರಚಿಸಬೇಕು. ಸಾಮೂಹಿಕ ಜೀವನದ ನಿಯಂತ್ರಣಕ್ಕೆ ಗಂಟುಬೀಳುವ ಎಲ್ಲ ಪ್ರಕಾರದ ಪಟ್ಟಭದ್ರ ಶಕ್ತಿಗಳನ್ನೂ ಪಕ್ಷಪಾತೀ ಹಿತಸಂಬಂಧಗಳನ್ನೂ ನಿರ್ಮೂಲನ ಮಾಡುವುದೇ ಈ ಕಾರ್ಯಕ್ರಮದ ಗುರಿ.

೧೭

ಮನುಷ್ಯ ಮನುಷ್ಯನನ್ನು ಸುಲಿಯುವುದನ್ನು ನಿರ್ಮೂಲಿಸಲೆಂದೇ ಸಮಾಜದ ಆರ್ಥಿಕ ಪುನರ್ರಚನೆಯನ್ನು ಮೂಲಗಾಮೀ ಪ್ರಜಾಪ್ರಭುತ್ವವು ಮೊದಲಿಗೆ ಎತ್ತಿಕೊಳ್ಳಬೇಕಾದದ್ದೇ. ಸಮಾಜದಲ್ಲಿಯ ವ್ಯಕ್ತಿಗಳ ಬೌದ್ಧಿಕ ಹಾಗೂ ಇತರ ಸೂಕ್ಷ್ಮಶಕ್ತಿಗಳ ಆವಿಷ್ಕಾರಕ್ಕಾಗಿ ಮೊದಲು ಅವರ ಭೌತಿಕ ಅವಶ್ಯಕತೆಗಳನ್ನು ಕ್ರಮಕ್ರಮವಾಗಿ ತೃಪ್ತಿಪಡಿಸಲೇ ಬೇಕು. ಜೀವನದ ಮಟ್ಟವು ಸಾತತ್ಯದಿಂದ ಎತ್ತರವಾಗುತ್ತಿರಬೇಕು ಎಂಬುದನ್ನು ನೋಡಿಕೊಳ್ಳುವ ಆರ್ಥಿಕ ಪುನರ್ರಚನೆಯೇ ಮೂಲಗಾಮೀ ಪ್ರಜಾಪ್ರಭುತ್ವದ ಅಡಿಗಲ್ಲು. ಆರ್ಥಿಕ ಬಂಧನದಿಂದ ಜನತೆಯು ಬಿಡುಗಡೆಯಾಗುವುದೆಂದರೆ ಜನತೆಯನ್ನು ಸ್ವಾತಂತ್ರ್ಯದತ್ತ ಕರೆದೊಯ್ಯಲು ಅವಶ್ಯವಾದ ಸಾಧನವಾಗಿದೆ.

೧೮

ಉತ್ಪಾದನೆಯನ್ನು ಉಪಯೋಗಕ್ಕಾಗಿಯೇ ಮಾಡಬೇಕು ಹಾಗೂ ಉತ್ಪನ್ನದ ಹಂಚಿಕೆಯನ್ನು ಸಹಜವೇ ಅವಶ್ಯಕತೆಗಳನ್ನು ಪೂರೈಸುವ ದೃಷ್ಟಿಯಿಂದಲೇ ಮಾಡಬೇಕು—ಎಂಬ ತತ್ವದ ಮೇಲೆ ಹೊಸ ಸಮಾಜ ರಚನೆಯ ಅರ್ಥಶಾಸ್ತ್ರವಿರಬೇಕು.

ಈ ಸಮಾಜರಚನೆಯ ರಾಜಕೀಯ ಸಂಘಟನೆಯಲ್ಲಿ ಪ್ರತಿನಿಧಿಯಂತ್ರದಲ್ಲಿ ಅಧಿಕಾರವಿರಲಾರದು. ಯಾಕೆಂದರೆ ಹಾಗೆ ಅಧಿಕಾರ

ಕೊಟ್ಟರೆ ವ್ಯವಹಾರದಲ್ಲಿ ಜನತೆಯ ಕೈಯಲ್ಲಿ ಪ್ರಭಾವೀ ಅಧಿಕಾರ ಎಳ್ಳಷ್ಟೂ ಇರಲಾರದು. ಜನತಾ ಸಮಿತಿಗಳ ಮುಖಾಂತರ ವಯಸ್ಸಿಗೆ ಬಂದ ಎಲ್ಲ ಜನರು ರಾಜ್ಯಕಾರಭಾರದಲ್ಲಿ ಪ್ರತ್ಯಕ್ಷ ಭಾಗ ತೆಗೆದುಕೊಳ್ಳ ಬಲ್ಲರು. ಇದೇ ಪದ್ಧತಿಯ ಮೇಲೆ ಸಂವಿಧಾನವು ರಚಿತವಾಗಬೇಕು.

ಜ್ಞಾನದ ಸಾರ್ವತ್ರಿಕ ಪ್ರಸಾರ ಮಾಡುವದು ಹಾಗೂ ವೈಜ್ಞಾನಿಕ ಸೃಜನಶೀಲ ಪ್ರವೃತ್ತಿಗಳಿಗೂ ಆದಷ್ಟು ಹೆಚ್ಚು ಅವಕಾಶ ವನ್ನೂ ಪ್ರೇರಣೆಯನ್ನೂ ಕೊಡುವದು—ಈ ಉದ್ದಿಷ್ಟಗಳ ಮೇಲೆ ಹೊಸ ಸಮಾಜರಚನೆಯ ಸಂಸ್ಕೃತಿಯು ಅಧಿಷ್ಠಿತವಾಗಬೇಕು.

ಬುದ್ಧಿ ಹಾಗೂ ವಿಜ್ಞಾನ—ಇವುಗಳ ಮೇಲೆ ಹೊಸ ಸಮಾಜದ ರಚನೆ ಇರುವದರಿಂದ ಅದರಲ್ಲಿ ಅನಿವಾರ್ಯವಾಗಿ ನಿಯೋಜನೆ ಇದ್ದೇ ಇರುತ್ತದೆ. ಆದರೆ ವ್ಯಕ್ತಿಯ ಸ್ವಾತಂತ್ರ್ಯದ ಮುಖ್ಯ ಉದ್ದೇಶ ವನ್ನಿಟ್ಟುಕೊಂಡೇ ಈ ನಿಯೋಜನೆಯನ್ನು ಮಾಡಲಾಗುವದು. ಈ ನವಸಮಾಜವು ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ದೃಷ್ಟಿ ಯಿಂದ ಪ್ರಜಾಸತ್ತಾತ್ಮಕವಾದಿಯಾಗಿರುವದು. ಆದ್ದರಿಂದಲೇ ಈ ಪ್ರಜಾಪ್ರಭುತ್ವವು ತನ್ನನ್ನು ತಾನೇ ರಕ್ಷಿಸಿಕೊಳ್ಳಬಲ್ಲದು.

೧೯

ಬುದ್ಧಿಯ ಮೇಲಿದ್ದ ಬಂಧನಗಳನ್ನು ಒಡೆದು ಹಾಕಿ, ಆತ್ಮಿಕ ವಾಗಿ ಸ್ವತಂತ್ರರಾದ ಮನುಷ್ಯರು ಸ್ವಾತಂತ್ರ್ಯದ ವಿಶ್ವವನ್ನು ನಿರ್ಮಿ ಸುವ ದೃಢ ನಿಶ್ಚಯದಿಂದ ಯಾವಾಗ ಒಂದೆಡೆ ಸೇರುತ್ತಾರೋ. ಆಗಲೇ ಅವರ ಸಾಮುದಾಯಿಕ ಪ್ರಯತ್ನದಿಂದ ಮೂಲಗಾಮಿ ಪ್ರಜಾಪ್ರಭುತ್ವದ ಧ್ಯೇಯವು ಸಾಧ್ಯವಾದೀತು. ಅವರು ಜನತೆಯ ಮಾರ್ಗದರ್ಶಿಗಳಾಗಿ, ಸ್ನೇಹಿತರಾಗಿ ಹಾಗೂ ತತ್ವಜ್ಞರಾಗಿ ಕೆಲಸ ಮಾಡುತ್ತಾರೆಯೇ ಹೊರತು ಜನತೆಯ ಭವಿಷ್ಯದ ರಾಜ್ಯಕರ್ತರೆಂದಲ್ಲ. ಅವರ ರಾಜಕೀಯ ಕಾರ್ಯವು ಬುದ್ಧಿಪ್ರಧಾನವಾಗಿದ್ದು, ಅದೇ

ಕಾರಣಕ್ಕಾಗಿ ನೀತಿಯುಕ್ತವಾಗಿರುವವು. ಯಾಕೆಂದರೆ ಹಾಗಿದ್ದರೇನೇ ಸ್ವಾತಂತ್ರ್ಯದ ಆದರ್ಶದೊಂದಿಗೆ ಅವರ ರಾಜಕೀಯ ಕಾರ್ಯ ಸುಸಂಗತವಾಗಿರಲು ಶಕ್ಯ.

ಸ್ವಾತಂತ್ರ್ಯಕ್ಕಾಗಿ ಯಾವ ಪ್ರಮಾಣದಲ್ಲಿ ಜನತೆಯ ಆಕಾಂಕ್ಷೆ ಬೆಳೆಯುವದೋ ಅದೇ ಪ್ರಮಾಣದಲ್ಲಿ ಅವರ ಪ್ರಯತ್ನಗಳೂ ತೀವ್ರತರವಾಗುತ್ತವೆ. ಹಾಗೂ ಸಾರ್ವಜನಿಕ ತಿಳುವಳಿಕೆ ಹೆಚ್ಚುತ್ತಹೋದಂತೆ, ಜನರ ಜ್ಞಾನಯುಕ್ತ ಪ್ರಯತ್ನಗಳಿಂದಾಗಿ ಮೂಲಗಾಮಿ ಪ್ರಜಾಪ್ರಭುತ್ವವು ಪ್ರಸ್ಥಾಪಿಸಲ್ಪಡುವದು.

ಸತ್ತೆಯ ಕೇಂದ್ರೀಕರಣ ಹಾಗೂ ಸ್ವಾತಂತ್ರ್ಯ ಇವುಗಳಲ್ಲಿ ಪರಸ್ಪರ ವಿಸಂಗತಿಯಿದೆಯೆಂಬ ಪ್ರಜ್ಞೆಯಿಂದ ಪ್ರೇರಿತರಾದ ಮೂಲಗಾಮಿ ಜನತಂತ್ರವಾದಿಗಳು ಎಲ್ಲ ಹಂತಗಳಲ್ಲಿ ಅಧಿಕಾರದ ವಿಕೇಂದ್ರೀಕರಣವನ್ನು ಸಾಧಿಸುವರು.

೨೦

ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಅತಿಕ್ರಮಣ ಮಾಡದೆ ಎಲ್ಲರ ಪ್ರಗತಿ ಹಾಗೂ ಅಭ್ಯುದಯವನ್ನು ಸಾಧಿಸುವ ಸಾಮಾಜಿಕ ರಚನೆ ಅವಲಂಬಿಸಿರುವದು ಶಿಕ್ಷಿತ ನಾಗರಿಕರ ಬುದ್ಧಿಯ ಮೇಲೆಯೇ. ಸ್ಥಾನಿಕ ಜನಸಮಿತಿಗಳು ನಾಗರಿಕರಿಗೆ ರಾಜಕೀಯ ಹಾಗೂ ಸಾಮಾಜಿಕ ನೀತಿಯನ್ನು ಬೋಧಿಸುವ ನಾಗರಿಕರ ವಿದ್ಯಾಲಯಗಳಾಗುತ್ತವೆ. ನಿರ್ಲಿಪ್ತರಾದ ವ್ಯಕ್ತಿಗಳು ಸಮಾಜಕಾರ್ಯದಲ್ಲಿ ತೊಡಗಿಕೊಳ್ಳಲು ಅವಕಾಶ ನೀಡುವಂಥ ಜನತಂತ್ರದ ರಚನೆ ಹಾಗೂ ಕಾರ್ಯಪದ್ಧತಿ ಇರುತ್ತದೆ. ಇಂಥ ನಿರ್ಲಿಪ್ತ ವ್ಯಕ್ತಿಗಳ ಕೈಯಲ್ಲಿ ರಾಜ್ಯನಿಯಂತ್ರಣವು ಇದ್ದರೆ, ವಿಶಿಷ್ಟ ವರ್ಗದ ಕೈಯಲ್ಲಿ ಅಧಿಕಾರ ಸಿಗಲಾರದು ಹಾಗೂ ಅನ್ಯರ ಮೇಲೆ ಬಲಾತ್ಕಾರವಾಗಲಾರದು. ಯಾರು ಆತ್ಮಗತ ಬಂಧನಗಳಿಂದ ಮುಕ್ತರಾಗಿದ್ದಾರೋ ಅಂಥವರು ಅಧಿಕಾರವನ್ನು ನಡೆಸಿದ್ದಾಗ ಗುಲಾಮಗಿರಿಯು

ಎಲ್ಲ ಶೃಂಖಲೆಗಳನ್ನು ಒಡೆದು ಎಲ್ಲರಿಗೂ ಸ್ವಾತಂತ್ರ್ಯ ಒದಗಿಸ ಬಲ್ಲರು.

೨೧

ಈ 'ರ್‍ಯಾಡಿಕ್ಯಾಲಿಜಮ್' ಅಂದರೆ ಮೂಲಗಾಮಿವಾದವು ವಿಜ್ಞಾನ ವನ್ನು ಸಾಮಾಜಿಕ ಸಂಘಟನೆಯ ಅಂಗವನ್ನಾಗಿ ಮಾಡುತ್ತದೆ: ಹಾಗೂ 'ವ್ಯಕ್ತಿ' ಮತ್ತು 'ಸಮಾಜ' -ಈ ಎರಡರಲ್ಲಿಯ ವಿಸಂಗತಿಯನ್ನು ನಾಶಮಾಡುತ್ತದೆ: ಹಾಗೂ ಸ್ವಾತಂತ್ರ್ಯದ ಕಲ್ಪನೆಯಲ್ಲಿ ನೈತಿಕ, ಬೌದ್ಧಿಕ ಮತ್ತು ಸಾಮಾಜಿಕ ಆಶಯಗಳನ್ನು ಸೇರಿಸುತ್ತದೆ. ವಿಚಾರಗಳ ಗತಿಶೀಲತೆ (Dynomics of Ideas) ಹಾಗೂ ಆರ್ಥಿಕ ನಿಯತಿವಾದದ ವಿರೋಧ -ವಿಕಾಸ (The Dialectics of Economic Determinism) ಇವೆರಡರ ಯೋಗ್ಯರೀತಿಯ ಪರಾಮರ್ಶೆಯ ಬೆಳಕಿನಲ್ಲಿ ಸಿದ್ಧಪಡಿಸಿದ ಸಾಮಾಜಿಕ ತತ್ವಜ್ಞಾನವನ್ನು 'ರ್‍ಯಾಡಿಕ್ಯಾಲಿಜಮ್' ಪ್ರತಿಪಾದಿಸುತ್ತದೆ. ಈ ತತ್ವಜ್ಞಾನದಿಂದಲೇ ವರ್ತಮಾನಕಾಲದಲ್ಲಿಯೇ ರೂಪಿಸಬೇಕಾದ ಸಮಾಜಕ್ರಾಂತಿಯ ಪದ್ಧತಿ ಹಾಗೂ ಕಾರ್ಯಕ್ರಮಗಳ ನಿಷ್ಪತ್ತಿ ಯಾಗುತ್ತದೆ.

೨೨

"ಪ್ರತಿಯೊಂದಕ್ಕೂ ಮಾನವನೇ ಮಾನದಂಡ", ಎಂಬ ಪ್ರೊಟ್ಯಾ ಗೊರಸ್‌ನ ಸಿದ್ಧಾಂತ ಹಾಗೂ 'ಮಾನವನೇ ಮನುಷ್ಯಕುಲದ ಉಗಮ'. ಮಾರ್ಕ್ಸ್‌ನ ಸಿದ್ಧಾಂತ-ಈ ಎರಡು ಸಿದ್ಧಾಂತಗಳಿಂದ 'ರ್‍ಯಾಡಿ ಕ್ಯಾಲಿಜಮ್' ಅಂದರೆ ಮೂಲಗಾಮಿವಾದ ಪ್ರಾರಂಭವಾಗುತ್ತದೆ. ಹಾಗೂ ನೀತಿಯುತ ಮಾನವರ ಸಾಮುದಾಯಿಕ ಪ್ರಯತ್ನಗಳ ಮೂಲಕ 'ಸ್ವತಂತ್ರ ಮಾನವರ' ಒಂದು ರಾಜ್ಯ (commonwealth)

ಹಾಗೂ ಬಂಧು ಸಮುದಾಯ (fraternity) ವನ್ನು ಪ್ರಸ್ಥಾಪಿಸ ಬೇಕೆಂದು ಪ್ರತಿಪಾದಿಸುತ್ತದೆ.

* * *

ಹಾಗೆ ನೋಡಿದರೆ ಈ ಸೂತ್ರಗಳಿಗೆ ಒಂದು ವಿಸ್ತೃತವಾದ ಭಾಷ್ಯವನ್ನೇ ಬರೆಯಬೇಕು. ಆ ರೀತಿಯ ಪ್ರಯತ್ನವನ್ನು ಅವರ ಸಹೋದ್ಯೋಗಿಗಳಾದ ಪ್ರೊ. ಶಿಬನಾರಾಯಣ ರೇ ಹಾಗೂ ಶ್ರೀಮತಿ ಎಲೆನ್ ರಾಯ್ ಅವರು In Man's Own Image ಎಂಬ ಪುಸ್ತಕ ದಲ್ಲಿ ಅತ್ಯಂತ ಪ್ರಭಾವಿಯಾಗಿ ಮಾಡಿದ್ದಾರೆ. ಇಲ್ಲಿ ಭಾಷ್ಯೆಗೆ ಅವಕಾಶ ವಿಲ್ಲ. ಆದರೆ ಈ ೨೨ ಸೂತ್ರಗಳನ್ನು ಕೂಲಂಕಷವಾಗಿ ಅಭ್ಯಸಿಸುವರಿಗೆ ಸಹಾಯವಾಗುವಂತೆ ಈ ಸೂತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟ ಕೆಲವು ಮುಖ್ಯ ವಿಷಯಗಳ ಪಟ್ಟಿ (ಯಾವ ಸೂತ್ರಗಳಲ್ಲಿ ಆ ವಿಷಯಗಳು ಬಂದಿವೆ ಎಂಬ ಸೂಚನೆಯೊಂದಿಗೆ) ಕೊಡಬಹುದಾಗಿದೆ:

೧. ನವಮಾನವತಾವಾದದ ತಾತ್ವಿಕ ನೆಲೆ: ಭೌತಿಕವಾದ (ಸೂ. ೪, ೫, ೬)
೨. ವ್ಯಕ್ತಿ ಹಾಗೂ ಸಮಾಜ ಇವುಗಳ ಅನ್ಯೋನ್ಯ ಸಂಬಂಧ. ವ್ಯಕ್ತಿಯೇ ಕೇಂದ್ರಸ್ಥಾನ (ಸೂ. ೧, ೨೨)
೩. ಮಾನವೀ ಸ್ವಾತಂತ್ರ್ಯದ ಅರ್ಥ (ಸೂ. ೨, ೩)
೪. ಮಾನವ ಮೂಲತಃ ವಿಚಾರಶೀಲ ಪ್ರಾಣಿ: ಐತಿಹಾಸಿಕ ನಿಯತಿವಾದ ಹಾಗೂ ಇಚ್ಛಾಸ್ವಾತಂತ್ರ್ಯ (ಸೂ. ೪): ಜ್ಞಾನದ ಪ್ರಗತಿ ಹಾಗೂ ಸಾಮಾಜಿಕ ಪ್ರಗತಿ (ಸೂ. ೬)
೫. ಸ್ವಾತಂತ್ರ್ಯ ಹಾಗೂ ಕಮ್ಯುನಿಜಮ್ ಮತ್ತು ಸಮಾಜ ವಾದಗಳ ಸೀಮಿತತೆ (ಸೂ. ೭, ೮, ೯)
೬. ಸಂಸದೀಯ ಪ್ರಜಾಪ್ರಭುತ್ವದ ಮಿತಿ (ಸೂ. ೧೨,೧೩)
೭. ಸಮಾಜದ ಆರ್ಥಿಕ ಪುನರ್ರಚನೆ: ಕಮ್ಯುನಿಜಮ್

(ಸೂ. ೭): ಸಂಸದೀಯ ಪ್ರಜಾಪ್ರಭುತ್ವ (ಸೂ. ೧೮)

೮. ಸಂಘಟಿತ ಪ್ರಜಾಪ್ರಭುತ್ವ : ಆರ್ಥಿಕ ಹಾಗೂ ರಾಜಕೀಯ ಪುನರ್ರಚನೆ (ಸೂ. ೧೬, ೧೭, ೧೮, ೧೯, ೨೦. ೨೧ ಮತ್ತು ೨೨).

ನವ ಮಾನವತಾವಾದದ ೨೨ ಸೂತ್ರಗಳನ್ನು ೧೯೪೮ರ ಡಿಸೆಂಬರ್ ತಿಂಗಳಲ್ಲಿ ಕಲಕತ್ತೆಯ ಅಧಿವೇಶನದಲ್ಲಿ ರ್ಯಾಡಿಕಲ್ ಡೆಮೋಕ್ರ್ಯಾಟಿಕ್ ಪಕ್ಷವು ಅಂಗೀಕರಿಸಿದ ನಂತರ ರಾಯ್ ಅವರು ಪಕ್ಷದ ವಿಸರ್ಜನೆ ಮಾಡಿ ರಾಯ್‌ವಾದಿಗಳು ಸ್ವತಂತ್ರ ರೀತಿಯಲ್ಲಿ ಮೇಲಿನ ಸೂತ್ರಗಳಿಗನುಸಾರವಾಗಿ ಕೆಲಸ ಕೈಕೊಳ್ಳಬೇಕೆಂದು ಆಹ್ವಾನವಿತ್ತರು.

ಆದರೆ ಪಕ್ಷ ಒಮ್ಮೆ ವಿಘಟಿತವಾದನಂತರ ಕಾರ್ಯ (Praxis)ಕ್ಕೆ ಚಲನಶೀಲತೆ ಹೇಗೆ ಬಂದೀತು ? ಪಕ್ಷ ಕಾರ್ಯಕರ್ತರಲ್ಲಿ ಬಹಳಷ್ಟು ಜನ ತಮ್ಮ ತಮ್ಮ ವೃತ್ತಿಗಳನ್ನು ನಡೆಸಿಕೊಂಡು ಹೋಗುವುದರಲ್ಲಿ ಮಗ್ನರಾದರು. ಕೆಲವರು ಸ್ವತಂತ್ರ ಉಮೇದುವಾರಿಕೆಯಿಂದ ಚುನಾವಣೆ ಗೆದ್ದು ಸಂಸದೀಯ ರಾಜಕಾರಣದಲ್ಲಿ ಸೇರಿದರು. ಹಲವರು ನಿರುದ್ಯೋಗಿಗಳಾಗಿ ಕೆಲಸ ಹುಡುಕತೊಡಗಿದರು. ಒಳ್ಳೆಯ ಸ್ಥಾನಗಳಲ್ಲಿದ್ದ ವಿಚಾರವಂತರು ವೃತ್ತಪತ್ರಿಕೆಗಳ ವ್ಯವಸಾಯದಲ್ಲಿ, ಹೊಸ ವೈಚಾರಿಕ ಪತ್ರಿಕೆಗಳ ಸಂಪಾದನೆಯ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ವೈಚಾರಿಕ ಆಂದೋಲನೆಯ ಕಾರ್ಯ ನಡೆಯಿತಾದರೂ ಅವರ ವೇಗ ತೀರ ಕಡಿಮೆಯಾಯಿತು. ರಾಯ್ ಹೇಳಿದ ವ್ಯಾಪಕ ಸಾಮಾಜಿಕ ಆಂದೋಲನದ ಸಂಘಟನೆಯಾಗಲಿಲ್ಲವೆಂದು ಖೇದದಿಂದ ಹೇಳಬೇಕಾಗುತ್ತದೆ. ವೈಯಕ್ತಿಕವಾಗಿ ರಾಯ್‌ವಾದಿಗಳು ಸಾಕಷ್ಟು ಚೈತನ್ಯ ಶೀಲರಾಗಿದ್ದರೂ, ಸಂಘಟನೆಯ ಪಾತಳಿಯ ಮೇಲೆ ವಿಶೇಷವೇನೂ ಸಮನಿಸಲಿಲ್ಲವೆಂದು ಒಪ್ಪಿಕೊಳ್ಳಬೇಕು.

೧೯೫೧ರಲ್ಲಿ ಫೆಬ್ರುವರಿ ೪ ರಂದು ಜರುಗಿದ ಅಖಿಲ ಭಾರತ ‘ರ್ಯಾಡಿಕಲ್ ಹೂಮನಿಸ್ಟ್’ರ ಅಧಿವೇಶನದ ಸಮಯದಲ್ಲಿ ರಾಯ್

ಅಂದರೆ ರಾಯ್‌ವಾದಿಗಳಲ್ಲಿ ಪಕ್ಷವಿಸರ್ಜನೆಯಾದ ನಂತರ ಕುಂದಿದ ಸ್ವರಾಜ್ಯ ಅಲಾಭ್ಯ ಇತ್ಯಾದಿಗಳ ಬಗ್ಗೆ ತೀಕ್ಷ್ಣವಾದ ಅರಿವು ಆಗಿದ್ದುದು ಸ್ಪಷ್ಟವಾಗುತ್ತದೆ.

ಅಂದು ಅವರು ನುಡಿದ ಭಾಷಣದಲ್ಲಿ ಹೊರತಲೆಗೆ, ಸಂಸದೀಯ ಪ್ರಜಾತಂತ್ರವನ್ನೂ ಕಮ್ಯೂನಿಸ್ಟ್ ಮಾರ್ಗವನ್ನೂ ಅತ್ಯಂತ ತೀಕ್ಷ್ಣವಾಗಿ ಖಂಡಿಸಿದರು. ಭಾರತದಂಥ ರಾಜಕೀಯವಾಗಿ ಅಪ್ರಬುದ್ಧವಾಗಿದ್ದಂಥ ದೇಶದಲ್ಲಿ ಪಾರ್ಲಿಮೆಂಟರಿ ಡೆಮೊಕ್ರಸಿ ಫಲಕಾರಿಯಾಗುವುದಿಲ್ಲ. ಪಕ್ಷರಾಜಕಾರಣವು ರಾಜಕೀಯ ಸ್ವಾತಂತ್ರ್ಯ ಸ್ಥಾಪಿಸಲಾರದು, ವಾಗ್ಮಿತ್ವ (demagogy)ವೇ ಪ್ರಾಬಲ್ಯವನ್ನು ಕಬಳಿಸುತ್ತದೆ... ವಾಸ್ತವವಾಗಿ, ಪ್ರಜಾಸತ್ತೆ ಅಧಃಪತನದ ದಾರಿ ಹಿಡಿಯುತ್ತದೆ.... ಸರ್ವಾಧಿಕಾರತ್ವಕ್ಕೆ ದಾರಿ ಮಾಡಿ ಕೊಡುತ್ತದೆ... ಆದ್ದರಿಂದ ನವಮಾನವತಾವಾದಿಗಳು ಜನರನ್ನು ಈ ಅಪಾಯದ ಬಗ್ಗೆ ಎಚ್ಚರಿಸುತ್ತಲೇ ಇರಬೇಕು. ಇದು ನಮ್ಮ ಆದ್ಯ ಕರ್ತವ್ಯ....

ಕಮ್ಯೂನಿಜಮ್ಮು ಇದಕ್ಕೆ ಪರ್ಯಾಯವೆಂಬ ನಂಬಿಕೆಯಿಂದ ಬುದ್ಧಿವಂತ ಜನರು ಕಣ್ಣು ತೆರೆದೇ ಈ ಅಪಾಯದ ದಾರಿ ತುಳಿಯಬಹುದು.... ಕೆಲವು ಮಂಕುಬುದ್ಧಿಯ ಉದಾರವಾದಿಗಳು ಕಮ್ಯೂನಿಜಮ್‌ದೊಡನೆ ಪ್ರಣಯ ಚೇಷ್ಟೆಯಲ್ಲಿ ತೊಡಗಬಹುದು. ರಶಿಯದಲ್ಲಿ ಕಮ್ಯುನಿಜಮ್ ಕೆಟ್ಟುಹೋಗಿದೆ, ಚೀನದಲ್ಲಿ ನಡೆದ ಸ್ವಾತಂತ್ರ್ಯ ದಮನ, ರಕ್ತಪಾತ ಇತ್ಯಾದಿ ನೋಡಿದರೆ ಕಮ್ಯುನಿಜಮ್ ಅಂದರೆ ಸ್ವಸ್ವೀಕರಣವಾಗಿದೆ. ಕಮ್ಯುನಿಜಮ್ ಸ್ವಾಗತಿಸುವುದೆಂದರೆ ಪ್ರಳಯವನ್ನೇ ಸ್ವಾಗತಿಸಿದಂತೆ...

ಇದಕ್ಕೆ ಮೂರನೆಯ ಮಾರ್ಗವಿಲ್ಲವೆ ? ಎರಡು ಅತಿವಾದಗಳಲ್ಲಿ ಕಡಿಮೆಯದನ್ನು ಸ್ವೀಕರಿಸುವ ಬೌದ್ಧಿಕ ಆಲಸ್ಯಕ್ಕೆ ಕೊನೆಯಾಗುವುದೇ ? ಸಂಘಟಿತ ಪ್ರಜಾಪ್ರಭುತ್ವವನ್ನು ಕಟ್ಟುವುದರಿಂದ ಮಾರ್ಗ.... ಸ್ಥಳೀಯ ಜನತಾಸಮಿತಿಗಳ ನಿರ್ಮಿತಿ ಭರದಿಂದ ಸಾಗಬೇಕು. ಯಾವ


ಪಕ್ಷದ ಶಿಸ್ತಿಗೆ ಒಳಗಾಗದೆ, ನಾವು ನಮ್ಮ ಮನವಿಗಳನ್ನು ಆಗಾಗ್ಗೆ ಸರಕಾರಕ್ಕೆ ಕಳಿಸುತ್ತ, ಜನರಲ್ಲಿ ನಮ್ಮ ತತ್ವಗಳನ್ನು ಪ್ರತಿಪಾದಿಸುತ್ತ ಇದ್ದರೆ ನಮ್ಮ ಮಾತುಗಳಿಗೆ ಮಾನವರಲ್ಲಿಯ ವಿವೇಕ ಬುದ್ಧಿ ಓಗೊಡದೆ ಇರಲಾರದು...." (ರಾಯ್ ಅವರ ಭಾಷಣದಿಂದ ಅಂದರೆ ಆದರ ಶ್ರೀ ಬಿ. ಕೃಷ್ಣಭಟ್ಟರೂ. ಶ್ರೀ ಜಯಕುಮಾರ ಅನಗೋಳ ಅವರೂ ಮಾಡಿದ ಭಾಷಾಂತರದಿಂದ ಕೆಲವು ಮಾತುಗಳನ್ನು ಆಯ್ದು ಅಲ್ಲಲ್ಲಿ ಬದಲಿಸಿ ನಾನು ಮೇಲಿದನ್ನೂ ಬರೆದಿದ್ದೇನೆ.)

ರಾಯ್ ಅವರು ಹೇಳಿದ ಮೂರನೆಯ ಮಾರ್ಗದಲ್ಲಿ ಕಾಲ್ಪನಿಕ ಆದರ್ಶವಾದ (utopianism) ದ ಛಾಯೇ ದಟ್ಟವಾಗೆ ಬಿದ್ದಿದ್ದರೂ. 'ಸಂಘಟಿತ ಪ್ರಜಾಪ್ರಭುತ್ವ'ದ ತತ್ವಜ್ಞಾನದಲ್ಲಿ ನಮಗೆ ಈಗ ನಡೆಯುತ್ತಿದ್ದ ರಾಜಕೀಯ–ಸಾಮಾಜಿಕ ಸ್ಥಿತ್ಯಂತರಗಳನ್ನು ಅಳೆಯುವ ಮಾನದಂಡಗಳು ಖಂಡಿತ ಸಿಗುತ್ತವೆ. ರಾಯ್ ಅವರ ಭವಿಷ್ಯವಾಣಿ ಕಾಲಕಾಲಕ್ಕೆ ನಿಜವಾಗುತ್ತ ಬರುವದನ್ನು ನೋಡಿಯೂ ನಾವು ಈ ಮೂರನೆಯ ಮಾರ್ಗದ ಬಗ್ಗೆ ಚಿಂತನೆ ಮಾಡದಿದ್ದರೆ, ಅದನ್ನು ಕಾರ್ಯಗತ ಮಾಡುವದರತ್ತ ಹೋರಾಡದಿದ್ದರೆ, ನಾವು ಭಾರತದ ಭವಿಷ್ಯದ ಬಗ್ಗೆ, ನಾಗರಿಕತೆಯ ಭವಿಷ್ಯದ ಬಗ್ಗೆ ನಿರಾಶರಾಗ ಬೇಕಾಗುತ್ತದೆ.

ಎಂ. ಎನ್. ರಾಯ್ ಅವರ ಮಹತ್ವದ ಗ್ರಂಥಗಳು

1. The Historical Role of Islam, 1937
2. Russian Revolution, 1949
3. Reason, Revolution and Romanticism, 2 vol. 1952-55
4. Science and Philosophy, 1947
5. Science and Superstition, 1940
6. Scientific Politics, 1942, 1947.
7. Revolution and Counter-revolution in China 1946
8. The Problem of Freedom, 1945
9. Radical Humanism, 1952
10. Poverty or Plenty ?, 1943
11. New Orientation, 1946
12. Materialism, 1940, 1951
13. The Memoirs of a Cat, 1940 (Fragments of a Prisoners' diary)
14. Heresies of the Twentieth Century : Philosophic Essays, 1943.
15. M. N. Roy's Memoirs, 1964.
16. The Ideal of Indian Womanhood, 1941
17. New Humanism 1953.

(ಇದರ ಕನ್ನಡ ಅನುವಾದ–ಶ್ರೀ ಬಿ. ಕೃಷ್ಣಭಟ್ಟ ಹಾಗೂ ಶ್ರೀ ಜಯಕುಮಾರ ಅನಗೋಳ ಅವರು ಮಾಡಿದ್ದು–'ನವಮಾನವತಾವಾದ', ೧೯೮೭.)



ಸಾಮಾಜಿಕ ಚಿಂತನ ಮಾಲೆ